

ಐಕ್ಯರಂಗ


ದುಡಿವ ಜನರ ಪ್ರಾಣ ಮಿತ್ರ


ಸಂಪುಟ 25 ಸಂಚಿಕೆ 21
ಮೇ 25, 2003 ಬೆಲೆ ರೂ. 3.00

ಬರವ್ರೋ ಸರ್ಕಾರ ಬರಿಸಿದ ಕ್ಷಾಮವ್ರೋ










ಗಂಗಾವತಿ : ಬರ : ಹಣ ನುಂಗುವ ಬಕಾಸುರರು


ಬೆನ್ನ ಹಿಂದೆ ಬಿಜೆಪಿ ಕುತಂತ್ರ ?

ಇರಾಕ್ ಮೇಲಿನ ಕಾಂಟ್ರಾಕ್ಟ್ ರಣಹದ್ದುಗಳು !



ಟಿಪ್ಪು ದೇಶದ್ರೋಹಿಯೇ?

ವಿಮೋಚನಾ ಸಮರದಲ್ಲಿ....



ಮೇಜರ್ ಜಯಪಾಲ್ ಸಿಂಗ್

ಆತ್ಮಕಥನ

27



ಕಳೆದ ಸಂಚಿಕೆಯಲ್ಲಿ ಮನ ಬಿಚ್ಚಿ ಮಾತನಾಡದ ಲೋಹಿಯಾ, ಜಯಪ್ರಕಾಶ್ ನಾರಾಯಣ್ ಮತ್ತು ಅರುಣಾ ಅಸಫ್ ಅಲಿ, ಸರಿಯಾದ ರಾಜಕೀಯ ನಾಯಕತ್ವವಿಲ್ಲದೆ ಬಂಡೇಳುವುದನ್ನು ಕಲ್ಪಿಸಿದ ಮೇಜರ್, ಅತಿ ಸಕ್ರಿಯ ಸಾಮ್ರಾಜ್ಯಶಾಹಿ-ವಿರೋಧಿ ಶಕ್ತಿಯಾಗಿದ್ದ ಕಮ್ಯುನಿಸ್ಟರು, ಸೈನಿಕರಲ್ಲೂ ಕಮ್ಯುನಿಸ್ಟ್ ವಿರೋಧಿ ಪೂರ್ವಗ್ರಹಪೀಡಿತ ಭಾವನೆ ಬೇರೂರಿದ್ದು ಮತ್ತು ಭಾರತದ ಮಿತ್ರರಾಗಿದ್ದ ಬ್ರಿಟಿಷ್ ಅಧಿಕಾರಿಯ ಬಗ್ಗೆ ಓದಿರುವಿರಿ. ಮುಂದೆ...

ಕನ್ನಡಕ್ಕೆ: ವಿಶ್ವ ಕುಂದಾಪುರ

ಸೇನೆ ತೊರೆಯಲು ಮೇಜರ್ ನಿರ್ಧಾರ

ಓಚಿನಲೆಕ್ ಖುದ್ದಾಗಿ ಉಸ್ತುವಾರಿ ನೋಡಿಕೊಂಡ 'ಮೈನಾ ಯೋಜನೆ' ಬ್ರಿಟಿಷರ ಈ ವ್ಯೂಹಾತ್ಮಕ ತಂತ್ರದ ಅವಿಭಾಜ್ಯ ಭಾಗವಾಗಿತ್ತು. ಓಚಿನ್‌ಲೆಕ್ ಗಡಿ ಪ್ರಾಂತ್ಯಕ್ಕೆ ಹಾರಿದರು. ಸಿ 46 ವಿಮಾನಗಳ ಒಂದು ತಂಡ ಚಕ್ಲಲಾದಿಂದ ಹೊರಟಿತು ಪಠಾಣರಿಗೆ ಶಸ್ತ್ರಾಸ್ತ್ರಗಳನ್ನು ಉದುರಿಸಲು. ಇದು 1946 ರ ಆರಂಭದ ತಿಂಗಳಲ್ಲಿನ ವಿದ್ಯಮಾನ. ಇದೇ ಶಸ್ತ್ರಾಸ್ತ್ರಗಳನ್ನು ಪಠಾಣರು ನಂತರ ಕಾಶ್ಮೀರದ ವಿರುದ್ಧ ಬಳಸಿದರು. ಕರೇನರು ಎದ್ದು ನಿಂತರು. ಚಿನ್‌ಗಳು ಮತ್ತು ಕಚಿನ್‌ಗಳು ಬಂಡಾಯವೆದ್ದರು. ನಾಗಾ ಬಂಡಾಯ ಇನ್ನೂ ಮುಂದುವರೆದಿದೆ.

ಆ ಯೋಜನೆಯಲ್ಲಿರುವ ಪ್ರಮುಖ ವಿಚಾರಗಳನ್ನು ನಮ್ಮ ಸಂಘಟನೆ ತಕ್ಷಣವೇ ಭಾರತದಲ್ಲಿನ ಎಲ್ಲ ರಾಜಕೀಯ ಪಕ್ಷಗಳಿಗೆ ತಿಳಿಸಿತು. ನಾನು ಸ್ವತಃ ನನ್ನ ಜೀವವನ್ನು ಪಣವಾಗಿಟ್ಟು, 1946 ರ ಅಕ್ಟೋಬರ್‌ನಲ್ಲಿ ಇಡೀ ಯೋಜನೆಯನ್ನು ಸೈಕ್ಲೋಸ್ಟೈಲ್ ಮಾಡಿ ಭಾರತದಲ್ಲಿನ ಎಲ್ಲಾ ರಾಜಕೀಯ ಪಕ್ಷಗಳಿಗೆ ಬಹಿರಂಗವಾಗಿ ವಿತರಿಸಿದೆ. ಈ ಬಗ್ಗೆ ಆಮೇಲೆ ತಿಳಿಸುತ್ತೇನೆ. ಆದರೆ ಆಶ್ಚರ್ಯದ ಸಂಗತಿಯೆಂದರೆ, ಕಮ್ಯುನಿಸ್ಟರನ್ನು ಬಿಟ್ಟರೆ ಬೇರೆ ಯಾವುದೇ ರಾಜಕೀಯ ಪಕ್ಷ ಬ್ರಿಟೀಷರ ಈ ಕುಟಿಲ ಯೋಜನೆಯನ್ನು ವ್ಯಾಪಕವಾಗಿ ಬೇರೆಯವರಿಗೆ ತಿಳಿಸಲು ಯಾವುದೇ ಕ್ರಮ ಕೈಗೊಳ್ಳಲಿಲ್ಲ ಕ್ರಿಮಿನಲ್ ಷಡ್ಯಂತರವನ್ನು ಎದುರಿಸಲು ಪ್ರತಿ ತಂತ್ರ ರೂಪಿಸುವ ಮಾತು ದೂರವೇ ಉಳಿಯಿತು.

ಫೆಬ್ರವರಿ ಬಂತು. ಚಕ್ಲಲಾಕ್ಕೆ ವಿಶೇಷ ದೂತನೊಬ್ಬ ಆಗಮಿಸಿದ. ಆತ ತನ್ನ ಹೆಸರು ಅರುಣ ಎಂದು ತಿಳಿಸಿದ. ತಮ್ಮ ಸಮಸ್ಯೆಗಳ ಇತ್ಯರ್ಥಕ್ಕೆ ಆಗ್ರಹಿಸಿ ನೌಕಾಪಡೆಯ ಹುಡುಗರು' ಮುಷ್ಕರಕ್ಕಿಳಿಯಬೇಕೆಂದು ಸಮಾಜವಾದಿಗಳು ಸಲಹೆ ಮಾಡಿದರು. ನೌಕಾಪಡೆಯಲ್ಲಿ ಜೀವನ ಪರಿಸ್ಥಿತಿ ಅಸಹನೀಯವಾಗಿತ್ತು. ಪಡೆಯಲ್ಲಿ ಅತೃಪ್ತಿ ಹೊಗೆಯಾಡುತ್ತಿದ್ದುದು ಮುಂಬಯಿಯಲ್ಲಿನ ನಮ್ಮ ಸಂಘಟನೆಗೆ ತಿಳಿದಿತ್ತು.

ಆದರೆ ನಾನು ಮುಷ್ಕರಕ್ಕೆ ವಿರೋಧವಾಗಿದ್ದೆ. ನೌಕಾಪಡೆ ಅಥವಾ ಸೇನೆ ಟ್ರೇಡ್ (ವಾಣಿಜ್ಯ) ವಿಭಾಗವಲ್ಲ. ಸೇನಾ ಪಡೆಗಳಲ್ಲಿ ಯಾವುದೇ ರೀತಿಯ ಸಾಮೂಹಿಕ ಚೌಕಾಸಿಯನ್ನು ಬಂಡಾಯವೆಂದು ಪರಿಗಣಿಸಲಾಗುತ್ತದೆ. ಸಾಮ್ರಾಜ್ಯಶಾಹಿ ಪಡೆಗಳು ಆರಂಭದಿಂದಲೇ ಕ್ರೂರವಾದ ಕ್ರಮಗಳನ್ನು ಕೈಗೊಳ್ಳುವುದು ಖಚಿತವಿತ್ತು. ಮುಷ್ಕರಕ್ಕೆ ಕರೆ ನೀಡುವುದು ಬ್ರಿಟೀಷರ ವಿರುದ್ಧದ ಯುದ್ಧಕ್ಕೆ ಕರೆ ನೀಡಿದಂತೆಯೇ ಸರಿ; ನಾವು ಅದಕ್ಕೆ ಸಿದ್ಧರಾಗಬೇಕಿತ್ತು.

ಹಾಗೆ ಮಾಡುವುದು ಬೇಡವೆಂಬುದು ನನ್ನ ಅಭಿಪ್ರಾಯವಾಗಿತ್ತು. ಬದಲಿಗೆ, ಅವರು ತಮ್ಮ ಸಾರ್ವತ್ರಿಕ ಬಂಡಾಯವನ್ನು ಮಾರ್ಚ್‌ನಲ್ಲಿ ನಮ್ಮ ಬಂಡಾಯದೊಂದಿಗೆ ಜೋಡಿಸಲು ನಾನು ಸಲಹೆ ಮಾಡಿದೆ. ಪಡೆಗಳವರು ಏನು ಬೇಡಿಕೆಗಳನ್ನು ಮುಂದಿಡಬೇಕೆಂದು ಯೋಚಿಸುತ್ತಿದ್ದರೋ ಅವುಗಳನ್ನೆಲ್ಲ ಕೈಬಿಟ್ಟು ಒಂದೇ ಒಂದು ಬೇಡಿಕೆಯನ್ನು ಮುಂದಿಡಬೇಕು. ಅದೆಂದರೆ "ಸಾಮ್ರಾಜ್ಯಶಾಹಿಗಳೇ, ಭಾರತ ಬಿಟ್ಟು ತೊಲಗಿ"!

"ನಿಮ್ಮ ನೌಕೆಗಳನ್ನು ತೊರೆಯಿರಿ. ನೀವು ಸಮುದ್ರದಲ್ಲಿ ಬ್ರಿಟೀಷ್ ನೌಕಾಪಡೆಯನ್ನು ಎದುರಿಸಲಾರಿರಿ. ದಡಕ್ಕೆ ಬನ್ನಿ. ಭೂಮಿಯ ಮೇಲೆ ಬ್ರಿಟೀಷರ ವಿರುದ್ಧದ ಕ್ರಾಂತಿಕಾರಿ ಸಮರದಲ್ಲಿ ಪಾಲ್ಗೊಳ್ಳಿ" ಎಂದು ನನ್ನ ಪಡೆಗೆ ನಾನು ಸಲಹೆ ಮಾಡಿದೆ. ವಿದ್ಯಮಾನಗಳು ಎಷ್ಟು ಬೇಗ ಬೇಗನೆ ನಡೆದು ಹೋದವೆಂದರೆ ನೌಕಾಪಡೆಯ ನಮ್ಮ 'ಹುಡುಗರಿಗೆ' ಆ ಸಂದೇಶ ದೊರಕಿತೋ ಇಲ್ಲವೋ ಎಂಬುದು ಇವತ್ತಿಗೂ ನನಗೆ ಗೊತ್ತಿಲ್ಲ.

ಅವರಿಗೆ ಆ ಸಂದೇಶ ಸಿಗಲಿಲ್ಲವೆಂಬುದು 1946 ಫೆಬ್ರವರಿ 18 ರ ವಿದ್ಯಮಾನಗಳು ಸಾಬೀತುಪಡಿಸುತ್ತವೆ. ಒಂದು ವೇಳೆ ಅವರಿಗೆ ಆ ಸಂದೇಶ ಸಿಕ್ಕಿದ್ದರೂ ಅವರು ಅದನ್ನು ಕೇಳುತ್ತಿರಲಿಲ್ಲ.

ಫೆಬ್ರವರಿ 18 ರ ಸಂಜೆ ಚಕ್ಲಲಾದಲ್ಲಿರುವ ಅಧಿಕಾರಿಗಳ 25ನೇ ರೂಮ್‌ನಲ್ಲಿ ರೇಡಿಯೋ ಆಲಿಸುತ್ತಾ ಕುಳಿತಿದ್ದೆ. ಎಳೆ ಈರುಳ್ಳಿ ಸುಲಿಯುತ್ತಿದೆ. ರಾವಲ್ಪಿಂಡಿಯಲ್ಲಿ ಚಳಿಯಿತ್ತು. ದೂರದಲ್ಲಿ ಉತ್ತರದಲ್ಲಿ ಹಿಮಾಚ್ಛಾದಿತ ಮುದ್ರೆ ಬೆಟ್ಟ ಸಂಜೆಗತ್ತಲಲ್ಲಿ ಅಡಗಿತ್ತು. ಅದೇ ತಾನೇ ರೇಡಿಯೋದಲ್ಲಿ ಒಂದು ಸುದ್ದಿ ಪ್ರಸಾರವಾಯಿತು.

"ಭಾರತೀಯ ನೌಕಾಪಡೆಯಲ್ಲಿ ಮುಷ್ಕರ ನಡೆದಿದೆ. ನೌಕಾಪಡೆ ಸೈನಿಕರು ಮುಂಬಯಿ ಬೀದಿಗಳಲ್ಲಿ ಪರೇಡ್ ಮಾಡುತ್ತಿದ್ದಾರೆ. ಬ್ರಿಟೀಷ್ ನೌಕಾಪಡೆ ಸಮೀಪಿಸುತ್ತಿದೆ. 24 ಗಂಟೆಗಳೊಳಗೆ

> ಭಾರತೀಯ ಪಡೆಗಳು ಬಂಡಾಯವೇಳುವುದನ್ನು ಬ್ರಿಟೀಷರು ನಿರೀಕ್ಷಿಸಿದ್ದರು ಮತ್ತು ದೇಶಾದ್ಯಂತ ಭಾರತೀಯ ಸಶಸ್ತ್ರ ಪಡೆಗಳನ್ನು ಅನುಮಾನಕ್ಕೆ ಒಂದಿಷ್ಟೂ ಆಸ್ಪದವಿಲ್ಲದಂತೆ ನಿಶ್ಶಸ್ತ್ರಗೊಳಿಸಲಾಯಿತು ಎನ್ನುವುದು ಭಾರತದ ಜನತೆಗೆ ಬಹುಶಃ ಗೊತ್ತಿರಲಾರದು.

ಮುಷ್ಕರ ವಾಪಸ್ ಪಡೆಯಬೇಕೆಂದು ಓಚಿನಲೆಕ್ ಮನವಿ ಮಾಡಿದ್ದಾರೆ, ಇಲ್ಲದಿದ್ದರೆ ಅವರ ವಿರುದ್ಧ ಬಲಪ್ರಯೋಗ ಮಾಡಬೇಕಾಗುತ್ತದೆಂದು....." (ಯಾವ ಪದಗಳನ್ನು ಬಳಸಲಾಯಿತೆಂದು ಸರಿಯಾಗಿ ನೆನಪಿಲ್ಲ)

ಆ ದಿನಗಳ ವಿದ್ಯಮಾನಗಳು ಭಾರತದ ಜನರಿಗೆ ಚೆನ್ನಾಗಿ ಗೊತ್ತಿದೆ. ಅವುಗಳನ್ನು ನಾನಿಲ್ಲಿ ಪುನರಾವರ್ತಿಸುವುದಿಲ್ಲ.

ನಾನು ತಕ್ಷಣವೇ ನನ್ನ ಘಟಕಕ್ಕೆ ಧಾವಿಸಿದೆ. ನನ್ನ ನಂತರದ ಅಧಿಕಾರಿಯಾದ ಕ್ಯಾಪ್ಟನ್ ಹಾರ್ವಸನ್ ಆಗಲೇ ಅಲ್ಲಿಗೆ ಬಂದಿದ್ದರು. ಘಟಕದ ಶಸ್ತ್ರಾಸ್ತ್ರಗಳನ್ನು ಭದ್ರಪಡಿಸಿದ್ದರು. ಅಲ್ಲದೆ ಅಲ್ಲಿನ ಕಾವಲುಗಾರನನ್ನು ನಿಶಸ್ತ್ರಗೊಳಿಸಿದ್ದರು. ಆತಂಕಗೊಂಡಿದ್ದ ಅವರು ಕೀಗೊಂಚಲನ್ನು ಕೈಯಲ್ಲಿ ಹಿಡಿದು ತಿರುಗಿಸುತ್ತಿದ್ದರು.

"ಹೀಗೆ ಮಾಡುವಂತೆ ನನಗೆ ಆದೇಶವಿತ್ತು, ಸಾರ್" ಎಂದು ನನಗೆ ಸೆಲ್ಯೂಟ್ ಹೊಡೆದು ವಿವರಿಸಿದ. "ಇದೇ ರೀತಿ ಎಲ್ಲ ಭಾರತೀಯ ಸೈನಿಕರನ್ನು ನಿಶ್ಶಸ್ತ್ರಗೊಳಿಸಬೇಕು" ಎಂದನು.

"ಹೌದು, ಅದು ಸರಿ. ಬೀಗದ ಕೈಗಳನ್ನು ನನಗೆ ಕೊಡು. ಅದು ನನ್ನ ಬಳಿ ಇರಬೇಕಾದ್ದು" ನಾನೆಂದೆ. ಆತ, 'ಎಸ್ ಸರ್' ಎಂದು ಕೀ ಗೊಂಚಲು ನನಗೆ ಕೊಟ್ಟ.

ಆ ದಿನ ಭಾರತೀಯ ಪಡೆಗಳು ಬಂಡಾಯವೇಳುವುದನ್ನು ಬ್ರಿಟೀಷರು ನಿರೀಕ್ಷಿಸಿದ್ದರು ಎನ್ನುವುದು ಮತ್ತು ದೇಶಾದ್ಯಂತ ಭಾರತೀಯ ಸಶಸ್ತ್ರ ಪಡೆಗಳನ್ನು ಅನುಮಾನಕ್ಕೆ ಒಂದಿಷ್ಟೂ ಆಸ್ಪದವಿಲ್ಲದಂತೆ ಈ ರೀತಿಯಾಗಿ ನಿಶ್ಶಸ್ತ್ರಗೊಳಿಸಲಾಯಿತು ಎನ್ನುವುದು ಭಾರತದ ಜನತೆಗೆ ಬಹುಶಃ ಗೊತ್ತಿರಲಾರದು.

ಆರ್ಮಿ ಟ್ರಂಕ್ ಟೆಲಿಫೋನ್ ವ್ಯವಸ್ಥೆ ಮೂಲಕ ನನ್ನ ಸಹೋದ್ಯೋಗಿಗಳನ್ನು ಸಂಪರ್ಕಿಸಲು ಪ್ರಯತ್ನಿಸಿದೆ. ಅದು ಕೆಲಸ ಮಾಡುತ್ತಿರಲಿಲ್ಲ. ಪ್ರಮುಖ ವೈರ್‌ಲೆಸ್ ಕೇಂದ್ರಗಳಿಂದ ಭಾರತೀಯ ಆಪರೇಟರ್‌ಗಳನ್ನು ತೆಗೆದು ಹಾಕಲಾಗಿತ್ತು. ಆ ಸ್ಥಾನಗಳಿಗೆ ಬ್ರಿಟೀಷ್ ಆಪರೇಟರ್‌ಗಳನ್ನು ನೇಮಿಸಲಾಗಿತ್ತು. ನಾನು ತಕ್ಷಣವೇ ಸೇನೆ ತೊರೆಯಲು ನಿರ್ಧರಿಸಿದೆ.

ನೌಕಾಪಡೆಯಲ್ಲಿ ಬಂಡಾಯವೇಳುವವರು ವಿವಿಧ ಬೇಡಿಕೆಗಳನ್ನು ಕೈಬಿಟ್ಟು ಒಂದೇ ಒಂದು ಬೇಡಿಕೆ ಮಂಡಿಸಬೇಕು. "ಸಾಮ್ರಾಜ್ಯಶಾಹಿಗಳೇ, ಭಾರತ ಬಿಟ್ಟು ತೊಲಗಿ!" ಎನ್ನುವುದೇ ಆ ಬೇಡಿಕೆ.

ರೇಡಿಯೋ ಆಲಿಸುತ್ತಾ ಈರುಳ್ಳಿ ಸವಿಯುತ್ತಾ ಕುಳಿತಿದ್ದ ಆ ಸಂಜೆ ರೇಡಿಯೋದಲ್ಲಿ ಪ್ರಸಾರವಾದ ಸುದ್ದಿ ನೌಕಾಪಡೆ ಬಂಡಾಯದ ಮಾಹಿತಿ ನೀಡಿತು.

ಸೈನ್ಯದ ಟ್ರಂಕ್ ಟೆಲಿಫೋನ್ ವ್ಯವಸ್ಥೆಯ ಮೂಲಕ ಸಹೋದ್ಯೋಗಿಗಳನ್ನು ಸಂಪರ್ಕಿಸಬೇಕೆಂಬ ಯೋಜನೆ, ಅದು ಕೆಟ್ಟಿದ್ದರಿಂದ ಕೈಗೂಡಲಿಲ್ಲ. ಪ್ರಮುಖ ವೈರ್‌ಲೆಸ್ ಕೇಂದ್ರಗಳಿಂದ ಭಾರತೀಯ ಆಪರೇಟರ್‌ಗಳನ್ನು ತೆಗೆದುಹಾಕಲಾಗಿತ್ತು.

(ಮುಂದುವರಿಯುವುದು)

ಪ. ಬಂಗಾಳ ಪಂಚಾಯತ್ ಚುನಾವಣೆಯ ಫಲಿತಾಂಶಗಳು

ಜಿಲ್ಲಾ ಪರಿಷತ್ ಒಟ್ಟು 17ರಲ್ಲಿ 15 ಎಡರಂಗ ಜಯಭೇರಿ

ಪಂಚಾಯತ್ ಸಮಿತಿ ಶೇ. 77 ಸೀಟುಗಳು (ಅಪೂರ್ಣ) ಎಡರಂಗದ ಪಾಲು

ಗ್ರಾಮಪಂಚಾಯತ್ ಶೇ. 72 ಸೀಟುಗಳು (ಅಪೂರ್ಣ) ಎಡರಂಗದ ಪಾಲು

ಪ್ರಥಮಸ್ಥಾನ	ಎಡರಂಗ
ಎರಡನೇ ಸ್ಥಾನ	ಕಾಂಗ್ರೆಸ್
ಮೂರನೇ ಸ್ಥಾನ	ತೃಣಮೂಲ
ನಾಲ್ಕನೇ ಸ್ಥಾನ	ಬಿಜೆಪಿ
ಜಿಲ್ಲಾ ಪಂಚಾಯತ್ ಒಟ್ಟು ಸ್ಥಾನ	: 716
ಚುನಾವಣೆ ಆದದ್ದು	: 712
	2003
ಎಡರಂಗ	618
ಸಿಪಿಐ(ಎಂ)	546
ಕಾಂಗ್ರೆಸ್	68
ತೃಣಮೂಲ	15
ಬಿಜೆಪಿ	02
ಮಾಲ್ಡಾ ಜಿ.ಸಂ. ಒಟ್ಟು ಸ್ಥಾನ	33
ಎಡರಂಗ	16
ಕಾಂಗ್ರೆಸ್	15
ಟಿ.ಎಂ.ಸಿ.	1
ಬಿಜೆಪಿ	1
ಮರ್ಶಿದಾಬಾದ್	
ಒಟ್ಟು	60
ಎಡರಂಗ	27
ಕಾಂಗ್ರೆಸ್(ಐ)	33

ವಿವರ ವರದಿ ಮುಂದಿನ ವಾರ

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

ಮೇ 18 ರಿಂದ 23
ಜನಪರ ಸಂಸ್ಕೃತಿ ಉತ್ಸವ ನಾಟಕ, ವಿಚಾರ ಸಂಕಿರಣ ಇತ್ಯಾದಿ, 18 ರಂದು ಸುಭಾಸ್ ಭರಣಿಯವರಿಂದ ಉದ್ಘಾಟನೆ. ಸಿಜಿ. ಕೃಷ್ಣ ಸ್ವಾಮಿ ಅಧ್ಯಕ್ಷತೆ 19 ರಂದು ಟಿಪ್ಪು ಬಿದಿ ನಾಟಕ ಸ್ಥಳ ; ನಯನ ರಂಗಮಂದಿರ.

ಮೇ 19 ರಿಂದ 21, 2003
ಅಖಿಲ ಭಾರತ ಔಷಧಿ ಪ್ರತಿನಿಧಿಗಳ (ಎಫ್.ಎಂ.ಆರ್.ಎ.ಐ) ಮುಷ್ಕರ.

ಮೇ 21, 2003.
ಕೇಂದ್ರ ಸರಕಾರದ ಆರ್ಥಿಕ ನೀತಿಗಳ ವಿರುದ್ಧ ಅಖಿಲ ಭಾರತ ಮುಷ್ಕರ.

ಮೇ 27, 2003.
ಕೋಲಾರ ಜಿಲ್ಲಾ ಶಾಶ್ವತ ನೀರಾವರಿ ಹೋರಾಟ ಸಮಿತಿ.
ವಿಧಾನ ಸೌಧಕ್ಕೆ ಕಾಲ್ನಡಿಗೆ ಜಾಥಾ ತಾಲ್ಲೂಕು ಕೇಂದ್ರಗಳಿಂದ ಜಾಥಾ ಪ್ರಾರಂಭ.

ಮೇ 30, 2003.
ಬಹಿರಂಗ ಸಭೆ, ಬೆಂಗಳೂರಿನಲ್ಲಿ.

ಜೂನ್ 2-5, 2003.
ಬಿ.ಎಸ್. ಎನ್.ಎಲ್. ಎಂಪ್ಲಾಯೀಸ್ ಯೂನಿಯನ್ 2ನೇ ಅಖಿಲ ಭಾರತ ಸಮ್ಮೇಳನ ಲಕ್ನೋ- ಉತ್ತರ ಪ್ರದೇಶ.

ಜೂನ್ 15 ರಿಂದ ಜುಲೈ 1, 2003
ಐಕ್ಯರಂಗ ಪತ್ರಿಕೆ ಪ್ರಸಾರ ಪಾಕ್ಷಿಕ.

ಈ ವರುಷವೂ ಬರ ಸರ್ಕಾರದ ಸಿದ್ಧತೆಯೇನು?

ಈ ವರುಷವೂ ಬರಗಾಲ ತಪ್ಪಿದ್ದಲ್ಲಿ ಎಂಬುದು ಖಚಿತವಾಗುತ್ತಿದೆ. ಅಂದರೆ ಹಿಂದಿನ ವರುಷಗಳ ಬರದ ಪರಿಣಾಮಗಳಿಂತಲೂ ಹೆಚ್ಚು ಭೀಕರವಾಗಲಿದೆ. ಇದು ಸತತ ಮೂರು ವರುಷಗಳ ಬರವೆಂದರೆ ಎಂತಹ ಸ್ಥಿತಿ ನಿರ್ಮಾಣವಾದೀತು ಎಂದು ಊಹಿಸುವುದೂ ಕಷ್ಟ. ಈಗಲೇ ನೀರಿನ ತೀವ್ರ, ಅಭಾವ, ಮೇವಿನ ಕೊರತೆ, ಕೆಲಸವಿಲ್ಲದೇ ಕಂಗಾಲಾದ ಜನಸಾಮಾನ್ಯರು ಪರಿಹಾರವೆಂಬುದು ಕೇವಲ ಮಾತುಗಳಲ್ಲೇ ಮಾಧ್ಯಮಗಳಲ್ಲೇ ಆದರೆ ಬವಣೆ ನೀಗಲು ಜನರನ್ನು ರಕ್ಷಿಸಲು ಕೇಂದ್ರ ರಾಜ್ಯ ಸರ್ಕಾರಗಳು ಪ್ರಾಮಾಣಿಕ ಪ್ರಯತ್ನವನ್ನೇ ಮಾಡುತ್ತಿಲ್ಲ. ಅಗತ್ಯ ಸಂಪನ್ಮೂಲಗಳನ್ನು ನೀಡುತ್ತಿಲ್ಲ. ಒಬ್ಬರು ಇನ್ನೊಬ್ಬರನ್ನು ತೋರಿಸುವುದು ಒಟ್ಟಾರೆ ಮಾಡಿದ್ದರೂ ಏನು? ಒಟ್ಟಾರೆ ಬರದ ಭಾದೆಯಿಂದ ರಕ್ಷಿಸಲು ಜನ-ಜಾನುವಾರು ಉಳಿಸುವುದು ಒಂದು ಪ್ರಥಮ ಪ್ರಾಶಸ್ತ್ಯದ ಕೆಲಸ ವೆಂದೇನೂ ಸರ್ಕಾರಗಳು ಪರಿಗಣಿಸಿಯೇ ಇಲ್ಲ.

ಈವರೆಗೆ 159 ತಾಲೂಕುಗಳಲ್ಲಿ ಬರವೆಂದು ಸರ್ಕಾರವೇ ಒಪ್ಪಿತು. ಅದರ ಪಟ್ಟಿಗೆ ಮತ್ತೇ 17 ತಾಲೂಕುಗಳು ಸೇರ್ಪಡೆಯಾಗಿವೆ ಎಂದು ಅಂಕಿ ಅಂಶ ನೀಡಿದ್ದಾರೆ ಉಸ್ತುವಾರಿ ಸಮಿತಿಯ ಮುಖ್ಯಸ್ಥ ಸಚಿವ ಖರ್ಗೆಯವರು. ಸಮಿತಿ ಸಭೆಗಳಲ್ಲಿ ಬಳಿಕ ಕಾಳಜಿ ವ್ಯಕ್ತಪಡಿಸುವ ಸಚಿವರು ಅಧಿಕಾರಿಗಳು ಹಿಂದು ಕೆಳಗಡೆ ಏನಾಗುತ್ತಿವೆ ಎಂದು ಕಣ್ಣು ಬಿಚ್ಚಿ ನೋಡಿದೆಯೇ? ನೀಡಿರುವ ಅಲ್ಪ ಬರ ಪರಿಹಾರ ಧಾನ್ಯ-ಹಣ ಯಾರ ಪಾಲಾಗುತ್ತಿದೆ ನೊಂದವರನ್ನೇ ಹೇಗೆ ವಂಚಿಸಿ, ಗ್ರಾಮಾಂತರದ ಕಂಟ್ರಾಕ್ಟ್‌ದಾರರು, ಆಳುವ ಪಕ್ಷದ ಪುಡಾರಿಗಳು, ಅಧಿಕಾರಿಗಳು ಹಾಡೇ ಹಗಲೇ ಜನರ ಪಾಲು ಮೆಲ್ಲುವ ಹೆಗ್ಗಣಗಳಾಗಿ ಪರಿಣಮಿಸಿದ್ದಾರೆ ಎಂಬುದು ಕರ್ಗೆಯವರಿಗೆ ತಿಳಿಯದ ವಿಷಯ ವೇನಲ್ಲ. ಹತ್ತಾರು ಪ್ರಕರಣ ಹೊರಬಂದರೂ ಯಾವುದೇ ಕ್ರಮವಿಲ್ಲ.

ಈ ನಡುವೆ ಕಾಂಗ್ರೆಸ್ ಅಧ್ಯಕ್ಷ ಜನಾರ್ಧನ ಪೂಜಾರಿ ಬರ ಕಾಮಗಾರಿ ವೀಕ್ಷಣೆಗೆ ಹೊರಟು ಸುದ್ದಿ ಗಿಟ್ಟಿಸುತ್ತಿರುವುದು, ಅದು ಕಾಳಜಿಯಲ್ಲ, ಕೀಳು ರಾಜಕೀಯ ಸ್ಟಂಟ್ ಎಂಬುದು

ಈ ವಾರ ಕರ್ನಾಟಕ ಒಂದು ನೋಟ — ಎಸ್.ವೈ.ಗುರುಶಾಂತ್

ಜಗಜ್ಜಾಹಿರಾಗಿದೆ. ಈ ಸೋಗಿಗೆ ದೊಂಬರಾಟಗಳಿಗೆ ಬಿಜೆಪಿಯದೂ ಒಂದು ಕುಣಿತವೇ. ರಾಜ್ಯದಲ್ಲಿ ಕಿರಿಚಾಡುವ ಯಡಿಯೂರಪ್ಪ ಜಗದೀಶ್ ಶೆಟ್ಟರು ಕೇಂದ್ರದ ನೆರವಿಗೆ ಆಗ್ರಹಿಸಲು ಯಾಕೆ ಮುಂದಾಗುತ್ತಿಲ್ಲ? 11 ಲಕ್ಷ ಟನ್ ಆಹಾರ ಧಾನ್ಯ ನೀಡಲು ಮನವಿ ಮಾಡಿದ್ದರೂ 6.5 ಲಕ್ಷ ಟನ್ ಮಾತ್ರ ಬಂದಿದೆ ಎಂಬ ಸಂಗತಿ ಅವರಿಗೆ ಯಾಕೆ ಕಾಣಿಸಿಲ್ಲ? ಕಾಮಗಾರಿಗಳಿಗೆ ಯಂತ್ರ ಬಳಕೆ ಕೂಡದು ಎಂದಿದ್ದರೂ ಕೂಲಿಕಾರ್ಮಿಕರನ್ನು ಕಡೆಗಣಿಸಿ ಯಂತ್ರಗಳೇ ವಿಜೃಂಭಿಸುತ್ತಿರುವ ದುಷ್ಟ ಯೋಜನೆ ಕಾಣಿಸಿದಷ್ಟು ಕುರುಡರೇ?

ಈ ವರುಷವೂ ಬರ ಖಚಿತವೆಂದು ಹೇಳಿರುವ ಕರ್ನಾಟಕ ಸರ್ಕಾರ ಅದನ್ನೆದುರಿಸಲು ಕಾರ್ಯ ಯೋಜನೆ ರೂಪಿಸುತ್ತಿದೆಯಂತೆ! ಈ ವರುಷದ ವಿದ್ಯಾಮಾನ ನೋಡಿದರೆ ಅದೆಂತಹ ಕಾರ್ಯ ಯೋಜನೆ ಇದ್ದೀತು ಎಂತಹ ಗಂಭೀರ ಸ್ಥಿತಿ ಪರಿಸ್ಥಿತಿ ತಲೆದೋರಿತು? ನೆನೆದರೆ ದಿಗಿಲಾಗುತ್ತದೆ. ಸರ್ಕಾರ ಈಗಲಾದರೂ ಕೇವಲ ಕಾಗದದ ಯೋಜನೆ ಸಿದ್ಧತೆಗಳು ಮಾತು ಬಿಟ್ಟರೆ ಪ್ರತಿ ಪ್ರದೇಶಗಳಲ್ಲಿಯೂ ನಿಖರವಾದ ಸಮೀಕ್ಷೆ ಹಾಗೂ ಅಗತ್ಯವಾದ ಸಿದ್ಧತೆ ಯೋಜನೆ ರೂಪಿಸಬೇಕು. ಇದಕ್ಕೆ ಜನ ಪ್ರತಿನಿಧಿಗಳು ಸಂಘಟನೆಗಳನ್ನು ಕೇಳಹಂತದಲ್ಲಿ ಒಳಗೊಳ್ಳಬೇಕು. ಇಲ್ಲವಾದಲ್ಲಿ ಸ್ಥಿತಿ ಗಂಭೀರವಾಗಲಿದೆ.

ಸಿ.ಇ.ಟಿ. ಕೇಂದ್ರದ ಸೂತ್ರ ಸಾಮಾಜಿಕ ನ್ಯಾಯಕ್ಕೆ ತಿಲಾಂಜಲಿ

ವೃತ್ತಿ ಶಿಕ್ಷಣ ಕೋರ್ಸ್‌ಗಳಿಗೆ ಪ್ರವೇಶಕ್ಕೆ ಸಂಬಂಧಿಸಿ ಕೇಂದ್ರ ಸರ್ಕಾರವು ಹೊಸ ಮಾರ್ಗದರ್ಶನ ಸೂತ್ರ ಪ್ರಕಟಿಸಿದೆಯಂತೆ. ಇದರಿಂದ ಖಾಸಗಿ ಸಂಸ್ಥೆಗಳ ಆಕ್ಟೋಪಸ್‌ಗಳಿಗೆ ಸಂತೋಷ ತಂದಿದೆಯಂತೆ! ರಾಜ್ಯ ಸರ್ಕಾರ ಸಂಪುಟದ ನಿರ್ಧಾರವನ್ನು ಅಜ್ಞೆಯನ್ನಾಗಿ ಹೊರಡಿಸಲು ಇದುವರೆಗೂ ಆಗಲಿಲ್ಲ. ಇಷ್ಟೇಕೆ ಮೀನಮೇಷ ಎಂಬದು ಈಗ ಅರ್ಥವಾಗುತ್ತಿದೆ!

ಕೇಂದ್ರದ ಸೂಚನೆ ದೊರೆತ ಮಾಹಿತಿಯಂತೆ ಶೇ. 75 ಸರ್ಕಾರಕ್ಕೆ, ಶೇ. 25 ಸಂಸ್ಥೆಗಳಿಗೆ ಸೀಟು ತುಂಬಿಸಿಕೊಳ್ಳುವುದು ಮತ್ತು ಏಕರೂಪದ ಶುಲ್ಕ ವಿಧಿಸುವ ಅಂಶಗಳು ಇರುವುದಾಗಿ ತಿಳಿದಿದೆ. ಸರ್ಕಾರ ನಡೆಸುವ ಸಿ.ಇ.ಟಿ, ಪರೀಕ್ಷೆಯ ಮೂಲಕ ಆಯ್ಕೆಯಾಗುತ್ತಿದೆಯೆಂದರೂ ಏಕರೂಪ ಶುಲ್ಕದ ಅಂಶವೇ ಪ್ರಶ್ನಾರ್ಹವಾದುದು. ಇದನ್ನೇ ಖಾಸಗೀ ಸಂಸ್ಥೆಗಳೂ ಕೇಳುತ್ತಿದ್ದವು. ಈ ಹಿಂದಿನ ವಿಧಾನದಲ್ಲಿ ಸಾಮಾಜಿಕ ಆರ್ಥಿಕ ಅಂಶಗಳನ್ನು ಪರಿಗಣಿ ವಿಂಗಡಿಸಿ, ಕೆಲವು ಅಭ್ಯರ್ಥಿಗಳಿಗೆ ಒಂದು ಹಂತದ ಶುಲ್ಕವನ್ನು ನಿಗದಿಪಡಿಸಲಾಗುತ್ತಿತ್ತು. ಕೊಡಬಹುದಾದ ಸಾಮರ್ಥ್ಯವಿರುವವರಿಗೆ ಇನ್ನೊಂದು ಹಂತದ ಶುಲ್ಕಗಳು ಇದು ಸಾಮಾಜಿಕ ನ್ಯಾಯದ ಸೂತ್ರವನ್ನು ಅನುಸರಿಸಿ ಇದ್ದ ಪದ್ಧತಿ. ಅವರೀಗ ಕೇಂದ್ರ ಸರ್ಕಾರದ ಸೂಚನೆಗಳು ಇಂತಹ ಸಾಮಾಜಿಕ ನ್ಯಾಯದ ಆಶಯಗಳನ್ನೇ ಬುಡಮೇಲುಗೊಳಿಸುತ್ತದೆ. ಆದ್ದರಿಂದ ಕರ್ನಾಟಕ ಸರ್ಕಾರ ದೃಢವಾಗಿ ತನ್ನ ಹಿಂದಿನ ಗೆಲುವಿಗೆ ಬದ್ಧವಾಗಬೇಕು. ಯಾವುದೇ ಸಂದರ್ಭದಲ್ಲಿಯೂ ಖಾಸಗೀಯವರ ಸುಲಿಗೆ ಸೂತ್ರವನ್ನು ಒಪ್ಪಕೂಡದು. ಹಾಗೇ ನೆಪ ಹುಡುಕುವುದಾಗಲೀ, ಕೈಚೆಲ್ಲಿ ಏನೂ ಮಾಡಲಾಗದು ಎಂದು ಕೂಡುವುದೂ ಸಲ್ಲದು. ಇದು ಸರ್ಕಾರಕ್ಕೆ ಸತ್ವಪರೀಕ್ಷೆ ಕೃಷ್ಣ ಜನರ ಕಡೆಗೋ, ಶಿಕ್ಷಣದ ಸುಲಿಗೆಕಾರರ ಕಡೆಗೋ?

ಸಾರ್ಸ್‌ಗೆ ಮದ್ದು ಯಜ್ಞವೋ ವಿಜ್ಞಾನವೋ?

ಸಾರ್ಸ್ ಸೋಂಕಿಗೆ ಔಷಧಿ ಕಂಡುಹಿಡಿಯಲು ವಿಶ್ವದ ವಿವಿಧ ದೇಶಗಳ ವಿಜ್ಞಾನಿಗಳ ಬೆವರಿಗಿಂತಲೂ ಯಜ್ಞ ಮಾಡಿ ತಲೆ ಖಾಲೀ ಮಾಡಿದ ಪುರೋಹಿತರ ಬೆವರೆ ಪ್ರಾಧ್ಯಾನ್ಯತೆ ಪಡೆದು ಸುದ್ದಿ ಮಾಡಿತೇಕೆ?

ಮೊದಲ ಮಹಡಿಯ ಮೆಟ್ಟಿಲಿನಿಂದ ಇಳಿಯುವಾಗ ಕಾಲು ಜಾರಿ ಬಿದ್ದು ಸಾಯುವವರೇ ಇಂಗ್ಲೆಂಡಿನಲ್ಲಿ 1700. ಹೀಗಿರುವಾಗ 'ಸಾರ್ಸ್ ತರುವ ಸಾವಿಗೆ ಇಷ್ಟೇಕೆ ತಲ್ಲಣ' ಎಂದು ಪ್ರಶ್ನಿಸಿದ್ದಾರೆ ಬ್ರಿಟಿಷ್ ವಿದ್ವಾಂಸರೊಬ್ಬರು. ಇರಾಕ್ ಯುದ್ಧದ ಸಾವು ನೋವುಗಳನ್ನು ಮರೆ ಮಾಚುವಷ್ಟು ಸಾರ್ಸ್ ಸಾವು ಮೆರೆದಿದೆ ಎನ್ನುತ್ತದೆ ಮಣಿಪಾಲದ ತರಂಗ. ಇದು ಸಾರ್ಸನ್ನು ಪರಿಚಯಿಸುವ ರೀತಿ. ಇರಾಕ್ ಯುದ್ಧದ ವಿಧ್ವಂಸಕತೆಯನ್ನು ಮರೆಮಾಚುವಷ್ಟು ಸಾರ್ಸ್ ಒಂದು ಮಾರಕ ಖಾಯಿಲೆಯೇ? ಅದಕ್ಕಿನ್ನೂ ನಿಖರ ಔಷಧಿ ಕಂಡುಹಿಡಿಯಬೇಕು ನಿಜ. ಆದರೆ ಅದಕ್ಕೆ ಸಿಗುತ್ತಿರುವ ವರ್ಣರಂಜಿತ ಪ್ರಚಾರ, ಅರ್ಧಸತ್ಯಗಳು ಸುದ್ದಿ ಭಯೋತ್ಪಾದನೆಯ ಹಿಂದಿರುವ ವಾಸ್ತವ ಪ್ರಶ್ನಾರ್ಹ. ಇದು ಇರಾಕ್ ಯುದ್ಧದ ಸುದ್ದಿ ಮಾಧ್ಯಮಗಳ ದಾಳಿಯ ಮುಂದುವರಿಕೆಯೇ?

ನೀವೇ ನೋಡಿ, ಈ ರೋಗ ಪತ್ತೆಯಾದ ಕೆಲವೇ ದಿನ ಆ ವೈರಸ್ ಮೂಲ ವಂಶವಾಹಿನಿ ಪತ್ತೆ ಹಚ್ಚಿದ್ದಾರೆ ವೈದ್ಯರು. ಪ್ರಪಂಚದ ವಿವಿಧ ದೇಶಗಳ 11 ಪ್ರಯೋಗಾಲಯಗಳಲ್ಲಿ ಸತತ ಜಂಟಿ ಸಂಶೋಧನೆಗೆ ಇಳಿದ ವೈದ್ಯ ವಿಜ್ಞಾನಿಗಳು ಅದು ಪ್ಯಾರಾಮಿಕ್ಸೋ ವೈರಸ್ ವಂಶಕ್ಕೆ ಸೇರಿದ ವೈರಸೆಂದು ಕಂಡು ಹಿಡಿದಿದ್ದಾರೆ. ಇದೊಂದು ಅದ್ಭುತ ಸಾಧನೆ. ವಂಶವಾಹಿನಿ ಕಂಡಕೊಂಡ ನಂತರ ಔಷಧಿಯ ಶೋಧನೆಯೂ ಹೆಚ್ಚು ಸುಲಭ, ಆದಷ್ಟು ಬೇಗ ಫಲಿಸೀತು ಎಂಬುದು ವಿಜ್ಞಾನಿಗಳ ಆತ್ಮವಿಶ್ವಾಸ. ಅಂದರೆ ಭೇದಿಸಲಾಗದ ರೋಗ ಎಂಬುದು ಅರ್ಥಹೀನ.

ಆದರೆ ಇಂತಹ ನಿಜ ಸಂಗತಿ ಬಗ್ಗೆ ಬೆಳಕು ಚೆಲ್ಲುವ ವಿಜ್ಞಾನಿಗಳ ಸಾಧನೆ ತಿಳಿಸುತ್ತಲೇ ಜನರಲ್ಲಿ ಆತ್ಮವಿಶ್ವಾಸ ತುಂಬುವ ಪ್ರಯತ್ನಗಳು ತೀರಾ ತೀರಾ ಕಡಿಮೆ. ಜನರನ್ನು ಇನ್ನೂ ಹೆಚ್ಚು ಹೆಚ್ಚು ಭಯ ಬೀಳಿಸುತ್ತಾ, ಅವರು ಅಂಗೈಯಲ್ಲಿ ಜೀವ ಹಿಡಿದು ಕೂರುವುದೇ 'ಸುದ್ದಿ' ಎಂದು ಕರೆದುಕೊಳ್ಳುತ್ತಾ ಇದ್ದರೆ ಆಳುವವರಿಗೆ ಸಾಕಲ್ಲವೇ?..... ಬೆಲೆ ಏರಿಕೆ, ಟೆಲಿಕಾಂ ದರ, ರೇಷನ್ ಕಡಿತ, ಪ್ರಯಾಣ ವೆಚ್ಚದ ಸುಲಿಗೆ... ಅಮೆರಿಕದ ದುರಾಕ್ರಮಣಗಳು.. ಬದಿಗೆ ಸರಿಯುತ್ತವಲ್ಲವೇ? ಇಂತಹ ಭಯದಲ್ಲೇ ಭಕ್ತಿಯೂ ಉಕ್ಕುವುದರಿಂದ ದೇವಸ್ಥಾನಗಳು, ಪೂಜಾರಿ, ಆಡಳಿ ಮಂಡಳಿಯವರಿಗೂ ಎಡಬಿಡದ ಕೆಲಸವಲ್ಲವೇ? ಒಂದು 'ಸಾರ್ಸ್' ಎಷ್ಟೆಲ್ಲಾ ಜನರಿಗೆ ಏನೆಲ್ಲಾ ತರುತ್ತದೆಯೆಂದರೆ....

ಜನರನ್ನು ಮೂರ್ಖರನ್ನಾಗಿಸುವ, ಅಜ್ಞಾನದ ಹುಲುಸು ಕಳೆ ಬೆಳೆಸಿ ಫಲ ಉಣ್ಣುವವರಿಗೆ ಕಡಿಮೆಯೇನಿಲ್ಲ. ಒಂದು ನಗೆಪಾಟಲಿನ ಸುದ್ದಿ... ಆದರೆ ಅದರ ಸುತ್ತ ಎಷ್ಟು ಸಾವಿರ ಜನ! ಎಷ್ಟು ಲಕ್ಷ ಹಣ ಖರ್ಚು... ಎಷ್ಟು ವಸ್ತು ವಿನಾಶ...! ಉಡುಪಿಯ ಕೃಷ್ಣ ಮಠದಲ್ಲಿ 'ಸಾರ್ಸ್' ನಿರ್ಮೂಲನಕ್ಕೆ ಅಲ್ಲಿನ ಪುರೋಹಿತ - ಪುರುಷೋತ್ತಮರು ಯಜ್ಞ ಮಾಡಿದರು! ಇದರ ವ್ಯವಸ್ಥಾಪಕ ಸಿಂಗಾಪುರದ ನಿವಾಸಿ! ಅನಿವಾಸಿ ಭಾರತೀಯ! ಭಾರತೀಯರ ಮೇಲಿನ ದೇಶಪ್ರೇಮಕ್ಕೆ ಮೆಚ್ಚಬೇಕಾದ್ದೇ! ಈ ಯಜ್ಞ ಸಾರ್ಸ್ ವೈರಸ್‌ಗೆ ಏನಾದರೂ ಮಾಡಲಾದೀತೆ? ಆಗುತ್ತದೆ ಎನ್ನುತ್ತಾರೆ ವಟುಗಳು. ಹಾಗೆ ನಂಬಿಸುವಲ್ಲಿ ಅವರಿಗೆ ಭೋರಿ ಭೋಜನ, ಭಾರಿ ದಕ್ಷಿಣೆ... ಇಲ್ಲಿ ವಿನಯಕ್ಕೆ ಜಾಗವಿಲ್ಲ. ಅಹಂಕಾರದ್ದೇ ಅಧಿಕಾರ.

ಇಂತಹ ಸನಾತನ ಸಂಸ್ಕೃತಿಯ ವಾರಸುದಾರರು ವಿಶ್ವಕಪ್ ಕ್ರಿಕೆಟ್ಟಿನಲ್ಲಿ ಭಾರತ ಗೆಲ್ಲಬೇಕು ಎಂದು ಮುಂಬೈಯಲ್ಲಿ ಮಹಾಯಜ್ಞ ಮಾಡಿದ್ದರು. ಆದರೆ ಭಾರತ ಸೋತಾಗ ಯಜ್ಞ ಮಾಡಿದ್ದ ಕುರುಹು ಇಲ್ಲದಂತೆ ಜಾಗ ಸಾರಿಸಿ ಜಾಗ ಖಾಲಿ ಮಾಡಿದರು ಈ ಅಜ್ಞಾನಿಗಳು. 'ಗೆದ್ದರೆ ನಮ್ಮದೇ ಮಂತ್ರದ ಫಲ, ಬಿದ್ದರೆ... ಅಷ್ಟಾವಕ್ರ ಶನಿ ತಂತ್ರ' ಎಂದು ನಾಲಿಗೆ ದ್ರವ ಆರಿಸಿಕೊಳ್ಳದಂತೆ ಮಾತನಾಡುತ್ತಾರಲ್ಲ... ಹೀಗೆ ಅಲ್ಲವೇ ಅಷ್ಟಿಷ್ಟು ಪ್ರಕೃತಿ ನಿಯಮಗಳನ್ನು ಗ್ರಹಿಸಿ ನದಿಗಳ ಮಹಾಪೂರ ಇಳಿಸುವ, ಗ್ರಹಣ ಬಿಡಿಸುವ ಮಹಾ ಮಾಂತ್ರಿಕರು ದೈವ ಸಂಭೂತರಾಗಿದ್ದುದು. ಹರಿವ ನೀರಿಗೆ ದೊಣ್ಣೆ ನಾಯಕರಾಗಿ ಮೆರೆದದ್ದು...

ಇಂದಲ್ಲಾ ನಾಳೆಗಾದರೂ 'ಸಾರ್ಸ್' ವೈರಸ್‌ಗೆ ಔಷಧಿ ಖಂಡಿತ ಕಂಡುಹಿಡಿಯುತ್ತಾರೆ ವಿಜ್ಞಾನಿಗಳು. ಆಗ ನಮ್ಮ ಯಜ್ಞದ ಫಲ ಎಂದು ವಟುಗಳು ಹೊಟ್ಟೆ ಮೇಲೆ ಕೈಯಾಡಿಸಿಕೊಂಡರೆ..... ಈ ಪರೋಪಜೀವಿ, ಅಜ್ಞಾನದ ಆರಾಧಕರಿಗೆ ವಿಜ್ಞಾನದ ಉತ್ತರ ಹೋಗಬೇಕಿದೆ.

ಜಾತಿ ಕಂದರಗಳ ದಾಟಿ, ಸಮ ಭಾವಗಳ ಮೀಟಿ....

ನಾನು ಬಡವ ಆಕೆ ಬಡವಿ
ಒಲವೇ ನಮ್ಮ ಬದುಕು
ಹಂಚಿಕೊಡೆವದನೆ ನಾವು
ಅದಕು ಇದಕು ಎದಕೂ

ಎಂದು ವರಕವಿ ಬೇಂದ್ರೆಯವರು ಬರೆದರು.

ನರರ ನಡುವಿನಡ್ಡ ಗೋಡೆಗಳನು
ಕುಟ್ಟಿ ಕೆಡಹುವೆವು......
ಕಟ್ಟುವೆವು ನಾವು ಹೊಸ ನಾಡೊಂದನು
ರಸ ಬೀಡೊಂದನು


ಎಂದರು ಅಡಿಗರು

ಉತ್ತರಕನ್ನಡ ಜಿಲ್ಲೆಯ ಹೊನ್ನಾವರದಲ್ಲಿ ಮೇ 10 ರಂದು ಬೆಳಿಗ್ಗೆ ಮೂಡ ಗಣಪತಿ ದೇವಾಲಯದಲ್ಲಿ ನಡೆದ ಮದುವೆ ಈ ಕವಿಗಳ ಕವನಗಳ ಜೀವ ಸಾಕ್ಷಿಯಾಯಿತು.

ನಮ್ಮ ಚಳುವಳಿಯ ಸಂಗಾತಿಗಳಾದ ಯಮುನಾ ಗಾಂವ್ಕರ- ವಿಠ್ಠಲ ಭಂಡಾರಿ ಪರಸ್ಪರ ಬಾಳ ಸಂಗಾತಿಗಳಾದರು. ಪರಸ್ಪರ ಹಾರ ವಿನಿಮಯ- ಹಿರಿಯ ಸಂಗಾತಿಗಳ ಹಿತೈಷಿಗಳ ಹಾರೈಕೆ, ಚಿಂತಕ ಕವಿಗಳ ಕವಿಗೋಷ್ಠಿಯೊಂದಿಗೆ ನಡೆದ ಸರಳ ಸುಂದರ ಸಮಾರಂಭ.

ಸರ್ವವೂ ವ್ಯಾಪಾರಿಕರಣಗೊಂಡಿರುವ ಬಂಡವಾಳಶಾಹಿ ಸಮಾಜದಲ್ಲಿ 'ವರದಕ್ಷಿಣೆ' ತರದಿದ್ದರೇ 'ಹೆಣ್ಣೇ ಅಲ್ಲ, ಆಸ್ತಿ ಪಾಸ್ತಿ ಸಂಪಾದಿಸದವನು ಗಂಡೇ ಅಲ್ಲ ಎಂಬ ಬಂಡವಾಳಶಾಹಿ ಸಮಾಜದ ಮೌಲ್ಯವನ್ನು ಮುರಿದು, ಸಮಾಜವಾದಿ ಸಂಸ್ಕೃತಿಯಂತೆ ಜಾತೀಯತೆಯ ಕೃತಕ ಕಂದರವನ್ನು ದಾಟಿ ದಿಟ್ಟ ಹೆಜ್ಜೆ ಇಟ್ಟ ಯುವ ಜೋಡಿಗೆ ಅಂತರ್‌ಜಾತೀಯ-ಸರಳ ವಿವಾಹದ ಈ ಸಂದರ್ಭದಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ.ನಿತ್ಯಾನಂದ ಸ್ವಾಮಿಜ ಅಭಿನಂದಿಸಿದರು.

ಅಂಗನವಾಡಿ ನೌಕರರ ಸಂಘಟನೆಯ ರಾಜ್ಯ ಮುಖಂಡರಾದ ಕಾಂ. ಯಮುನಾ ಡಿವೈಎಫ್‌ಐನ ರಾಜ್ಯ ಮುಖಂಡರಾದ ಕಾಂ. ವಿಠ್ಠಲ ಮದುವೆ ಇಡೀ ನಮ್ಮ ರಾಜ್ಯ ಚಳುವಳಿಗೆ ಸಂತಸ ಸಡಗರದ ಸಂಗತಿ ಎಂದು ಶುಭ ಹಾರೈಸಿದವರು ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯರಾದ ಕಾಂ. ಎಸ್.ವರಲಕ್ಷ್ಮಿ, ಡಿವೈಎಫ್‌ಐನ ಮಹಂತೇಶ್, ಉಮೇಶ್, ಎಸ್‌ಎಫ್‌ಐನ ರಾಮಕೃಷ್ಣ ಮುಂತಾದವರು ಹಾಜರಿದ್ದರು.



ನಂತರ ಕವಿಗೋಷ್ಠಿ ಬಂಡಾಯ ಸಾಹಿತಿಗಳೂ, ವರನ ತಂದೆಯೂ ಆದ ಆರ್.ವಿ.ಭಂಡಾರಿಯವರು ಸೇರಿ ಸುಮಾರು ಹದಿನೈದಕ್ಕೂ ಹೆಚ್ಚು ಮತ್ತು ಚಿಂತಕ ಕವಿಗಳು ತಮ್ಮ ಕವನ ವಾಚಿಸಿ, ಸಾಂಪ್ರದಾಯಕ ಕಂದಾಚಾರದ- ಆಡಂಬರದ ಮದುವೆಗಳ ಅರ್ಥಹೀನತೆಯನ್ನು ಸಾರಿದರು.

ಮನಸ್ಸು ಮನಸ್ಸುಗಳ ಬೆಸುಗೆಯೇ ಮದುವೆ ಎಂದು ಯುವಜೋಡಿಗಳಿಗೆ ಕಾವ್ಯ ಹಾರೈಕೆ ಸಲ್ಲಿಸಿದರು. ದಂಪತಿಗಳಿಗೆ ಐಕ್ಯರಂಗದ ಶುಭಾಶಯಗಳು.

ಗಂಗಾವತಿ: ಭ್ರಷ್ಟಾಚಾರ ತಾಂಡವ

ಬರಗಾಲದ ಕಾಮಗಾರಿಯ ಹಣ ನುಂಗುತ್ತಿರುವ ಭಕಾಸುರರು

ಈ ಬರಗಾಲ ಎಲ್ಲವೂ ತರುವ ಕಾಮಧೇನುನಂತಾಗಿದೆ ಕೆಲವರಿಗೆ. ಮಂತ್ರಿಗಳು – ಅವರ ಸಂಬಂಧಿಗಳು, ಅಧಿಕಾರಿಗಳು ಒಟ್ಟು ಗೂಡಿ ಲೂಟಿ ಹೊಡೆಯುತ್ತಾ ಕೂಲಿಕಾರರ ಪಾಲಿನ ಯಮದೂತರಾಗಿರುವ ಜೀವಂತ ಘಟನೆಗಳು ಕೊಪ್ಪಳ ಜಿಲ್ಲೆಯಲ್ಲಿ ನಡೆಯುತ್ತಿದೆ


ರಾಜ್ಯದಲ್ಲಿ ಮಳೆರಾಯನ ಕೋಪದಿಂದ ಸಮಾರು 156 ತಾಲ್ಲೂಕುಗಳಿಗೆ ಬರಗಾಲ ಆವರಿಸಿಕೊಂಡಿದೆ. ಈ ಬಾರಿ ನದಿಗಳು ಬತ್ತಿ ಹೋಗಿವೆ. ನೀರಾವರಿ ಪ್ರದೇಶಗಳೂ ಬರಗಾಲಕ್ಕೀಡಾಗಿವೆ. ಬಡ ರೈತ-ಕೂಲಿಕಾರರು ಕೆಲಸ ಇಲ್ಲದೇ ಬೆಂಗಳೂರು, ಮಂಗಳೂರು, ಗೋವಾಕ್ಕೆ ವಲಸೆ ಹೋಗುತ್ತಿದ್ದಾರೆ. ದಿನನಿತ್ಯ ಬಸ್, ರೈಲುಗಳ ಮೂಲಕ ಗಂಟುಮೂಟೆ ಕಟ್ಟಿಕೊಂಡು ಪರದಾಡುತ್ತಾ ಹೋಗುತ್ತಿರುವ ದೃಶ್ಯ ಸಾಮಾನ್ಯವಾಗಿದೆ. ಈ ಭಯಾನಕ ಸ್ಥಿತಿ ನೋಡಿದಲ್ಲಿ ಯಾರಿಗಾದರೂ ಮನಸ್ಸಿಗೆ ನೋವು ತರುವ ಸಂಗತಿ.

ವಲಸೆ ಹೋದ ಸ್ಥಳಗಳಲ್ಲಿ ಕೆಲಸ ಸಿಗದೇ ಗಲ್ಲಿ ಗಲ್ಲಿ ಅಲೆಯಬೇಕಾದ ಸ್ಥಿತಿ ಇವರದು. ಮಧ್ಯವರ್ತಿಗಳಿಂದ ಕೆಲಸ ಸಿಕ್ಕರೂ ಅವರು ನೀಡಿದಷ್ಟು ಕೂಲಿಗೆ ದುಡಿಯಬೇಕಾಗಿದೆ. ಹೆಚ್ಚು ದುಡಿಸಿಕೊಂಡು, ಕಡಿಮೆ ಕೂಲಿ ನೀಡಿ ಕೂಲಿಕಾರರನ್ನು ವಂಚಿಸಲಾಗುತ್ತಿದೆ. ಕೆಲವಡೆ ಕೂಲಿಯನ್ನು ನೀಡದೆ ಬೆದರಿಸಿ ಕಳಿಸಿರುವ ಪ್ರಸಂಗಗಳು ನಡೆದಿವೆ. ಇಂಥಹ ಸಂದರ್ಭದಲ್ಲಿ ಕೇಂದ್ರ - ರಾಜ್ಯ ಸರ್ಕಾರಗಳು ಕೂಲಿಗಾಗಿ ಕಾಳು ಯೋಜನೆಗಳನ್ನು ಪ್ರಾಮಾಣಿಕವಾಗಿ ಜಾರಿಗೆ ತರದೇ ಇರುವುದು ದುರದೃಷ್ಟಕರ. ಕೃಷಿ ಕೂಲಿಕಾರರು ವಲಸೆ ಹೋಗದಂತೆ ತಡೆಯುವ ಸಲುವಾಗಿ ಕೂಲಿಗಾಗಿ ಕಾಳು ಯೋಜನೆಯಡಿಯಲ್ಲಿ ಸರ್ಕಾರವು 2 ಲಕ್ಷ ಆಹಾರ ಧಾನ್ಯ ಬಿಡುಗಡೆ ಮಾಡಿದ್ದರೂ ಸ್ಥಳೀಯ ಜಿಲ್ಲಾ ಪಂಚಾತ್ ಸದಸ್ಯರು, ಶಾಸಕರು, ಸಚಿವರುಗಳು ಮತ್ತು ಅಧಿಕಾರಿಗಳು ಆಹಾರ ಧಾನ್ಯವನ್ನು ಮಾರಾಟ ಮಾಡಿ ತಮ್ಮ ಹೊಟ್ಟೆ ತುಂಬಿಸಿಕೊಳ್ಳುತ್ತಿರುವುದು ಸಾಮಾನ್ಯ ಸಂಗತಿಯಾಗಿದೆ. ಇದಕ್ಕೊಂದು ಉದಾಹರಣೆ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ನೀರಾವರಿ ಒಣ ಪ್ರದೇಶದಲ್ಲಿ ನಡೆದಿದೆ.

ಚಂದ್ರಪ್ಪ ಹೊಸ್ಕೇರಾ

ನೀರಾವರಿ ಪ್ರದೇಶಗಳಿಗೆ ಕಾಮಗಾರಿ ಮಂಜೂರು

ಪ್ರಾಂತ ಕೃಷಿ ಕೂಲಿಕಾರರ ಸಂಘವು ಇತ್ತೀಚಿಗೆ ತಾಲೂಕಿನಲ್ಲಿ ಇತ್ತೀಚಿಗೆ ಧರಣಿ ನಡೆಸಿ ಈ ವರ್ಷ ನೀರಾವರಿ ಪ್ರದೇಶದಲ್ಲಿ ನೀರಿಲ್ಲದೆ ರೈತರಿಗೆ ತೊಂದರೆಯಾಗಿರುವುದರಿಂದ ಕಾಮಗಾರಿ ಕೆಲಸಗಳನ್ನು ಕೈಗೊಳ್ಳಬೇಕೆಂದು ಒತ್ತಾಯಿಸಿದ್ದರು. ಆದರೆ ಅಧಿಕಾರಿಗಳು ನೀರಾವರಿ ಪ್ರದೇಶಕ್ಕೆ ಬರ ಪರಿಹಾರ ಕಾಮಗಾರಿ ಕೆಲಸಗಳನ್ನು ಮಂಜೂರು ಮಾಡಲು ಸಾಧ್ಯವಿಲ್ಲ, ಒಣ ಪ್ರದೇಶಗಳಿಗೆ ಮಾತ್ರ ಮಂಜೂರು ಮಾಡಲು ಸಾಧ್ಯವೆಂದು ಪರಿಹಾರ ಕಾರ್ಯಗಳಿಗೆ ನಕಾರ ಸೂಚಿಸಿದ್ದರು. ಆದರೆ ಕಾಮಗಾರಿ ಸಮಿತಿಯ ಅಧ್ಯಕ್ಷರಾಗಿರುವ ಶಾಸಕ ಶ್ರೀರಂಗದೇವರಾಯಲು ಅವರು ವಿಜಯನಗರ ಕಾಲದಿಂದ ನೀರಾವರಿ ಪ್ರದೇಶಕ್ಕೆ ಒಳಪಟ್ಟ ಊರುಗಳಿಗೆ 11 ಲಕ್ಷ ರೂ. ಗಳ ಬರಗಾಲ ಪರಿಹಾರ ಕಾಮಗಾರಿ ಕೆಲಸಗಳನ್ನು ಕೈಗೊಂಡಿದ್ದಾರೆ. ಇದ್ಯಾವ ನೀತಿ?. ಶಾಸಕರ ನೀರಾವರಿ ಪ್ರದೇಶಕ್ಕೆ ಪರಿಹಾರ ಕಾರ್ಯ, ಉಳಿದ ನೀರಾವರಿ ಪ್ರದೇಶಕ್ಕೆ ಏಕೆ ಕೆಲಸವಿಲ್ಲ? ಒಂದು ಕಣ್ಣಿಗೆ ಬೆಣ್ಣೆ ಒಂದು ಕಣ್ಣಿಗೆ ಸುಣ್ಣವೇ?



ಡಾಂಬರು ಕಾಣದ ರಸ್ತೆಗಳು

ಯಾವ ಕಾಮಗಾರಿಯೂ ಇಲ್ಲ - ಹಣ ಮಾತ್ರ ಬಿಡುಗಡೆ

ಗಂಗಾವತಿಯಲ್ಲಿ 12 ಕೆರೆ ಅಭಿವೃದ್ಧಿಪಡಿಸಲು 50 ಲಕ್ಷ ರೂಪಾಯಿಗಳು ಬಿಡುಗಡೆ ಗೊಂಡಿದೆ. ಆದರೆ ಸಣ್ಣ ನೀರಾವರಿ ಇಲಾಖೆಯ ಅಧಿಕಾರಿಗಳು ಶೇ 25 ರಷ್ಟು ಕೆಲಸ ಮಾಡಿ ಕೆಲಸ ಪೂರ್ಣಗೊಂಡಿದೆಯೆಂದು ಲಕ್ಷಾಂತರ ರೂಪಾಯಿ ಹಣ ನುಂಗಿಹಾಕಿದ್ದಾರೆ. ಕೆಲವು ಕಡೆಯಂತೂ ಯಾವುದೇ ಕಾಮಗಾರಿ ಕೆಲಸ ಕೈಗೆತ್ತಿಕೊಳ್ಳದೇ ಕಾಮಗಾರಿಯಾಗಿದೆಯೆಂದು ವರದಿ ಸಲ್ಲಿಸಿ ಹಣ ಮಂಜೂರು ಮಾಡಿಸಿಕೊಂಡಿದ್ದಾರೆ. ನೀರಾವರಿ ಇಲಾಖೆಯ JE ಹನುಮಂತಪ್ಪ ಕಾಳುಗಳನ್ನು ಮಾರಾಟ ಮಾಡಿಕೊಂಡಿದ್ದಾನೆ. ಈತ ಸಚಿವರ ಜಾತಿ ಬಂಧು. ಇವರೆಲ್ಲರಿಗೂ ತಾಲೂಕಿನ ಶಾಸಕರಾದ ಶ್ರೀರಂಗ ದೇವರಾಯಲು ಮತ್ತು ಕಂದಾಯ ಸಚಿವರಾದ ಮಲ್ಲಿಕಾರ್ಜುನ ನಾಗಪ್ಪನವರು ಬೆಂಗಾವಲಾಗಿ ನಿಂತಿದ್ದು ತಮ್ಮ ಕಿಸೆಗೂ ಸಾಕಷ್ಟು ಇಳಿಬಿಟ್ಟಿದ್ದಾರೆ.

ಸರ್ಕಾರದ ಆದೇಶ ಧಿಕ್ಕರಿಸಿ ಯಂತ್ರಗಳ ಬಳಕೆ

ಬರಗಾಲದ ಕಾಮಗಾರಿ ಸಂದರ್ಭದಲ್ಲಿ ಯಾವುದೇ ಯಂತ್ರಗಳಿಂದ ಕೆಲಸ ಪೂರೈಸಬಾರದು, ಮತ್ತು ಗುತ್ತಿಗೆದಾರರಿಗೆ ಕಾಮಗಾರಿ ವಹಿಸಬಾರದು ಎಂದು, ಹಾಗಾದಲ್ಲಿ ಕಠಿಣ ಕ್ರಮ ಜರುಗಿಸಲಾಗುವುದು ಎಂಬ ಸರ್ಕಾರದ ಆದೇಶವಿದ್ದರೂ ಸಚಿವರಾದ ಮಲ್ಲಿಕಾರ್ಜುನ ನಾಗಪ್ಪನವರ ಅಳಿಯ ನಾರಾಯಣಪ್ಪ ಮತ್ತು ಕೊಟ್ಟೆಕ್ಯಾಂಪ್ ನಾಗೇಶ್ವರರಾವ್ ಅವರಿಗೆ ಕೆರೆ ಅಭಿವೃದ್ಧಿಗೆ ಗುತ್ತಿಗೆ ನೀಡಲಾಗಿದೆ. ಇವರು ತಮ್ಮ ಪ್ರಭಾವಗಳಿಂದಾಗಿ ಕಾಮಗಾರಿಗಳಿಗೆ ಕೂಲಿಕಾರರನ್ನು ಬಳಸಿಕೊಳ್ಳದೆ ಕಾನೂನು ಬಾಹಿರವಾಗಿ ಯಂತ್ರಗಳನ್ನು ಬಳಸಿಕೊಳ್ಳುತ್ತಿರುವುದು ಕಣ್ಣಿಗೆ ಕಾಣುತ್ತಿದ್ದರೂ ಜಿಲ್ಲಾಧಿಕಾರಿಗಳು ಮತ್ತು ತಾಲ್ಲೂಕು ದಂಡಾಧಿಕಾರಿಗಳು ಕಣ್ಣು ಮುಚ್ಚಿ ಕುಳಿತಿದ್ದಾರೆ. ಪ್ರಾಂತ ಕೃಷಿ ಕೂಲಿಕಾರರ ಸಂಘಟನೆಯು ಈ ವಿಷಯವನ್ನು ಸರ್ಕಾರದ ಗಮನಕ್ಕೆ ತಂದರೂ ಬೊಗಳೆ ಬಿಡುವ ಕಾಂಗ್ರೆಸ್ ಸರ್ಕಾರ ಗುತ್ತಿಗೆದಾರರ ಪರ ನಿಂತು ಕೂಲಿಕಾರರನ್ನು ನಿರ್ಲಕ್ಷಿಸಿದೆ. ಇದು ಸಾಲದೆಂಬಂತೆ ಸಚಿವ ಮಲ್ಲಿಕಾರ್ಜುನ ನಾಗಪ್ಪನವರು ಪತ್ರಿಕಾಗೋಷ್ಠಿ ನಡೆಸಿ ತಮ್ಮ ಅಳಿಯ ಯಾವುದೇ ಯಂತ್ರಗಳನ್ನು ಬಳಸಿಲ್ಲವೆಂದು ಸಮಜಾಯಿಷಿ ನೀಡಿ ಸೋಗಲಾಡಿತನ ಮೆರೆದಿದ್ದಾರೆ.

ಮಂಗಮಾಯವೇ?

ಇಂತಹ ಅವ್ಯಹಾರಗಳಿಂದ ರೋಸಿಹೋದ ಕೂಲಿಕಾರರು ಮತ್ತು ಪ್ರಾಂತ ಕೃಷಿಕೂಲಿಕಾರರ ಸಂಘಟನೆ ಮುಖಂಡರಾದ ಚಂದ್ರಪ್ಪ ಹೊಸ್ಕೇರಾ, ನಾಗರಾಜ್ ಅವರು ಪರಿಶೀಲನೆ ನಡೆಸಿ ಎಲ್ಲೆಲ್ಲಿ ಎಷ್ಟೆಷ್ಟು ಕಾಮಗಾರಿ ನಡೆದಿದೆ, ಎಷ್ಟು ಹಣವನ್ನು ಸಚಿವರ ಬಂಧುಗಳು ಮತ್ತು ಜಿ.ಪಂ. ಕಾರ್ಯನಿರ್ವಾಹಕ ಅಧಿಕಾರ ಮನೋಹರ ವಡ್ಡರ ನುಂಗಿ ಹಾಕಿದ್ದಾರೆ ಎಂಬುದನ್ನು ಪತ್ತೆ ಹಚ್ಚಿದ್ದಾರೆ. ಹಿಂದಿನ ವರ್ಷದಲ್ಲಿ ನಡೆದ ಕಾಮಗಾರಿಯನ್ನು ಈ ವರ್ಷವೂ ನಡೆದಿದೆಯೆಂದು ತೋರಿಸಿರುವುದು, ರಸ್ತೆಯೇ ಇಲ್ಲದ ಕಡೆ ರಸ್ತೆ ಕಾಮಗಾರಿಯೆಂದು ಮತ್ತು ಎರಡೂ ಕಿ.ಮಿ. ಮಾತ್ರ ಡಾಂಬರು ಹಾಕಿ ಅನೇಕ ಕಿ.ಮಿ. ಗಳಷ್ಟು ಡಾಂಬರು ಹಾಕಿರುವುದಾಗಿ ತೋರಿಸಿ ಲಕ್ಷಾಂತರ ರೂಪಾಯಿಗಳನ್ನು ಕೊಳ್ಳೆ ಹೊಡೆದಿರುವುದನ್ನು ಬಯಲಿಗೆಳೆದಿದ್ದಾರೆ. ಈ ಭ್ರಷ್ಟಾಚಾರವನ್ನು ವಿರೋಧಿಸಿ ಏಪ್ರಿಲ್ 24 ರಂದು ನೂರಾರು ರೈತ-ಕೂಲಿಕಾರರು ಪ್ರತಿಭಟನೆ ನಡೆಸಿ ಅಂಕಿ-ಸಂಖ್ಯೆ ಸಮೇತ ತಹಶೀಲ್ದಾರರಿಗೆ ವರದಿ ಒಪ್ಪಿಸಿ, ತಕ್ಕ ಕ್ರಮ ವಹಿಸಬೇಕು ಮತ್ತು ಕೂಲಿಕಾರರಿಗೆ ಕೆಲಸ ನೀಡುವಂತಾಗಬೇಕೆಂದು ಒತ್ತಡ ಹೇರಿದರು. ಕೂಲಿಕಾರರ ಒತ್ತಡಕ್ಕೆ ಮಣಿದಿರುವ ತಹಶೀಲ್ದಾರರು ಸೂಕ್ತ ಕ್ರಮ ಕೈಗೊಂಡು ಕೃಷಿ-ಕೂಲಿಕಾರರಿಗೆ ಕೆಲಸ ಒದಗಿಸುವುದಾಗಿ ಭರವಸೆ ನೀಡಿದ್ದಾರೆ. ಮುಂದೆ ಏನಾಗುವುದೋ ನೋಡಬೇಕಾಗಿದೆ, ಆಳುವ ಕೈಗಳು ಎಲ್ಲವನ್ನೂ ಮಂಗಮಾಯ ಮಾಡುವ ಕಲೆಯನ್ನು ಎಲ್ಲಿ ಹೇಗೆ ಪ್ರದರ್ಶಿಸುತ್ತವೆ ಎಂಬುದನ್ನು.

ಕೂಲಿ ಹಣ ಕೇಳಿದಕ್ಕೆ ಜೀವ ಬೆದರಿಕೆ

ಖಾಸಗಿ ಸಂಸ್ಥೆ ಅಡಿ ರಸ್ತೆ ನಿರ್ಮಾಣ ಕೆಲಸಕ್ಕೆ ಸಂಡೂರಿಗೆ ಹೋಗಿದ್ದ ಕುಷ್ಟಗಿ ತಾಲೂಕಿನ ಲಿಂಗದಹಳ್ಳಿ ಗ್ರಾಮದ ಸುಮಾರು 40 ಜನ ಕೃಷಿ ಕೂಲಿಕಾರರು ಕೂಲಿಹಣ ಕೇಳಿದ್ದಕ್ಕೆ ಜೀವ ಬೆದರಿಕೆ ಹಾಕಿ ಬರಿಗೈಯಲ್ಲಿ ವಾಪಸ್ಸು ಕಳುಹಿಸಿದ ಘಟನೆ ನಡೆದಿದೆ.

ಬಳ್ಳಾರಿ ಎನ್ನೋಬಲ್ ಇಂಡಿಯಾ ಕಂಪನಿ ಅಂಗ ಸಂಸ್ಥೆಯಾದ ಶ್ರೀ ರಾಘವೇಂದ್ರ ಕನ್‌ಸ್ಟ್ರಕ್ಷನ್ (ಪ್ರೈ) ಲಿಮಿಟೆಡ್ ಅಡಿ ಸಂಡೂರು- ಹೊಸಪೇಟೆ ರಸ್ತೆ ನಿರ್ಮಾಣ ಕೆಲಸಕ್ಕೆ ಹೋಗಿದ್ದರು. ಅವ[illegible] ದಿನನಿತ್ಯದ ಆಹಾರಕ್ಕಾಗಿ ಮಾತ್ರ ಹ[illegible] ನೀಡುತ್ತಿದ್ದರೇ ವಿನಾ ಕೂಲಿ ಹಣ ನೀಡಲಿಲ್ಲ. ಜೊತೆಗೆ ಕೂಲಿಕಾರರೊಬ್ಬರಿಗೆ ರೋಡ್‌ರೋಲ[illegible] ತಗುಲಿ ಕಾಲಿಗೆ ಗಾಯವಾದಾಗಲೂ ಅದ[illegible] ಚಿಕಿತ್ಸೆಗಾಗಿ ಹಣ ನೀಡಲಾಗಿಲ್ಲ. ಇಂತ[illegible] ಪರಿಸ್ಥಿತಿಯಿಂದ ತೀವ್ರವಾಗಿ ನೊಂದ ಕೂಲಿಕಾರ[illegible] ತಮ್ಮ ಊರುಗಳಿಗೆ ವಾಪಸ್ಸು ಹೋಗುವುದಾ[illegible] ತಿಳಿಸಿ ಕೂಲಿ ಹಣ ಕೇಳಿದಾಗ ಬೆದರಿಸಿ ಬ[illegible] ಕೈಯಲ್ಲಿ ಕಳುಹಿಸಲಾಗಿದೆ.

ಕೃಷಿಕೂಲಿಕಾರರು ಪ್ರಾಂತ ಕೃಷಿ ಕೂಲಿಕಾ[illegible] ಸಂಘಟನೆ ಮುಖಂಡರಾದ ಶಂಕರ[illegible] ಆರ್.ಕೆ.ದೇಸಾಯಿ ಮತ್ತು ರಾಜ್ಯ ಪ್ರಧಾ[illegible] ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೇರಾ ಮ[illegible] ಜಿ.ನಾಗರಾಜ ಅವರ ನೇತೃತ್ವದಲ್ಲಿ ಕು[illegible] ಪೋಲಿಸ್ ಠಾಣೆಗೆ ದೂರು ನೀಡಿ ತಮ್ಮ ನ್ಯಾ[illegible] ದೊರಕಿಸಿಕೊಡುವಂತೆ ಮನವಿ ಸಲ್ಲಿಸಿದ್ದಾರೆ.

ಜಿಲ್ಲಾ ಪಂಚಾಯತ್ - ಪಿಡಬ್ಲ್ಯೂಡಿ ಇಲಾಖೆ ಹಗರಣ

ಸ್ವತಂತ್ರ ಬಂದು 55 ವರ್ಷ ಗತಿಸಿದರೂ ಗ್ರಾಮಗಳಲ್ಲಿ ರಸ್ತೆ, ಕುಡಿಯುವ ನೀರು, ಶೌಚಾಲಯ, ವಿದ್ಯುತ್ ಇತ್ಯಾದಿಗಳ ಸಮಸ್ಯೆ ಇನ್ನೂ ಬಗೆಹರಿದಿಲ್ಲ. ಕೇಂದ್ರ-ರಾಜ್ಯ ಸರ್ಕಾರಗಳು ಗ್ರಾಮೀಣಾಭಿವೃದ್ಧಿಗಾಗಿ ಪ್ರತಿವರ್ಷ ಕೋಟ್ಯಾಂತರ ರೂಪಾಯಿಗಳನ್ನು ಬಿಡುಗಡೆ ಮಾಡುತ್ತಿರುತ್ತವೆ. ಆದರೆ ಕಣ್ಣಿಗೆ ಯಾವ ಅಭಿವೃದ್ಧಿಯೂ ಕಾಣುವುದಿಲ್ಲ. ಆಳುವ ಜನಗಳು ಮತ್ತು ಅಧಿಕಾರಿಗಳ ಅಭಿವೃದ್ಧಿ ಮಾತ್ರ ಕಣ್ಣಿಗೆ ರಾಚುತ್ತದೆ. ಗಂಗಾವತಿ ತಾಲೂಕಿನ ಜಿಲ್ಲಾ ಪಂಚಾಯತ್‌ನ 2001-02 ರ ಅಭಿವೃದ್ಧಿ ಯೋಜನೆಯ ಕಾಮಗಾರಿಗಳ ಪ್ರಗತಿ ವರದಿ ನೋಡಿದರೆ ತಿಳಿಯುತ್ತದೆ ಕೋಟ್ಯಾಂತರ ರೂಪಾಯಿಗಳನ್ನು ನುಂಗಿಹಾಕಿರುವ ವಿಷಯ. ಎಲ್ಲಿ ಎಷ್ಟು ಹಣ ಖರ್ಚಾಗಿದೆ ಮತ್ತು ಎಷ್ಟು ನುಂಗಲಾಗಿದೆ ಎಂಬುದರ ವಿವರಗಳು ಇಲ್ಲಿವೆ.

■ ಆರ್‌ಐಡಿಪಿ ಯೋಜನೆ ಅಡಿಯಲ್ಲಿ ವಡ್ಡರಹಟ್ಟಿಯಿಂದ ಆರ್ಹಾಳ ವರೆಗೆ ರಸ್ತೆ ಸುಧಾರಣೆ, ಡಾಂಬರೀಕರಣ ಕಾರ್ಯಕ್ಕೆ 0 ಕಿ.ಮಿ.ದಿಂದ 5.30 ಕಿ.ಮಿ. ಗೆ 32 ಲಕ್ಷ ರೂಪಾಯಿ ಮಂಜೂರು. ಆದರೆ ವಡ್ಡರಹಟ್ಟಿ 1 ಕಿ.ಮಿ. ಮತ್ತು ಆರಾಳ 1 ಕಿ.ಮಿ. ಡಾಂಬರೀಕರಣ ಪೂಣಗೊಂಡಿದೆ. ಇನ್ನು ಮಧ್ಯದಲ್ಲಿ ಉಳಿದ 3.30 ಕಿ.ಮಿ. ಪೂರ್ಣಗೊಳಿಸದೇ ಲಕ್ಷಾಂತರ ರೂಪಾಯಿ ಗುಳುಂ.

■ ಸಿದ್ದಾಪುರದಿಂದ ಉಳೆನೂರು, ಬೆನ್ನೂರು, ನಂದಿಹಳ್ಳಿ 0. ಕಿ.ಮಿ. ದಿಂದ 15 ಕಿ.ಮಿ. ವರೆಗೆ ರಸ್ತೆ ಸುಧಾರಣೆಗಾಗಿ ಒಂದು ಲಕ್ಷದ ಮೂವತ್ತು ಸಾವಿರ ರೂಪಾಯಿ ಬಿಡುಗಡೆಗೊಂಡಿದೆ. ಆದರೆ ಈ ಮೇಲಿನ ರಸ್ತೆಗಳ ಡಾಂಬರೀಕರಣ 1998-99 ಸಾಲಿನಲ್ಲಿ ಪೂರ್ಣಗೊಂಡಿದ್ದು ಈಗ ಮತ್ತೆ ಅದೆ ಹೆಸರಿನಲ್ಲಿ ಬಿಲ್ ಮಾಡಲಾಗಿದೆ.

■ ಪರಪೂರ ಗ್ರಾಮದಲ್ಲಿ ಸಾಮೂಹಿಕ ನೀರಾವರಿ ಯೋಜನೆಗಾಗಿ (ಗಂಗಾ ಕಲ್ಯಾಣ ಯೋಜನೆ) 2 ಲಕ್ಷ ರೂಪಾಯಿ ಹಣ ಎತ್ತಿದ್ದಾರೆ. ಆದರೆ ಆ ಊರಿನಲ್ಲಿ ಯಾವುದೇ ಸಾಮೂಹಿಕ ನೀರಾವರಿ ಯೋಜನೆ ಆಗಿಲ್ಲ. ಆ ಊರ ಜ[illegible] 'ಇಲ್ಲಿ ಅಂತಹ ಸ್ಕೀಂ ಯಾವುದು ಬಂದಿಲ್ಲ ಬಿ[illegible] ಎನ್ನುತ್ತಾರೆ.

■ ಬೆನ್ನೂರು ಗ್ರಾಮದ ಒಳರಸ್ತೆ ಡಾಂಬರೀಕರಣಕ್ಕಾಗಿ ಒಂದು ಲಕ್ಷ ನಲ್ವತ್ತೈದು ಸಾವಿರ ರೂಪಾಯಿ ಮಂಜೂರಾಗಿದೆ. ಊರಿನ ಒಳರಸ್ತೆಗೆ ಡಾಂಬರೀಕರಣ[illegible] ಸುವಾಸನೆಯೇ ಇಲ್ಲ.

■ ಮಲ್ಲಕನ ಮರಡಿ, ಹಿರೇಖೇಡಾ ಗ್ರಾಮ[illegible] ರಸ್ತೆ ಸುಧಾರಣೆಗಾಗಿ ಒಂದು ಲಕ್ಷ 25 ಸಾವಿ[illegible] ಇಲ್ಲಿ ಡಾಂಬರೀಕರಣ ಕೆಲಸ ನಡೆದಿಲ್ಲ. ಬ[illegible] ಧೂಳಿನಿಂದ ಕೂಡಿದ ರಸ್ತೆಯಾಗಿದೆ.

■ ಚಿಕ್ಕ ಮದಿನಾಳ ದಿಂದ ರಾಮದುರ್ಗಾ[illegible] ಮೆಟಲಿಂಗ್ ನಡೆಯದಿಲ್ಲ, ಒ[illegible] ಬಂಡಿಯಿಂದ ರಾಮದುರ್ಗಾ[illegible] ಡಾಂಬರೀಕರಣಕ್ಕಾಗಿ ಹಣ ಬಿಡುಗಡೆಗೊಂಡ[illegible] ರಸ್ತೆ ಅಭಿವೃದ್ಧಿಗೊಳ್ಳದೇ ಇರುವುದು.

ಮೇ 21 - ಭಾರತ ಜನತೆಯ ಪ್ರತಿಭಟನೆಯ ಮಹಾಪೂರ

ಮೇ 21, 2003 ದೇಶದಾದ್ಯಂತ ಪ್ರತಿಭಟನೆಯ ಮಹಾಪೂರವೇ ಹರಿದುಬರಲಿದೆ. ಕೇಂದ್ರ ಸರಕಾರವು ಅನುಸರಿಸುತ್ತಿರುವ ಆರ್ಥಿಕ ನೀತಿಗಳ ವಿರುದ್ಧ ಭಾರತದ ದೇಶವಾಸಿಗಳು, 'ಇನ್ನು ನಾವು ಸಹಿಸೋದಿಲ್ಲ' ಎಂಬ ಸ್ಪಷ್ಟ ಸಂದೇಶವನ್ನು ಆಳುವ ಸರಕಾರಗಳಿಗೆ ನೀಡಲಿದ್ದಾರೆ. ಕರ್ನಾಟಕದಲ್ಲಿಯೂ ನಗರ-ಗ್ರಾಮಗಳಲ್ಲಿ ಎಂದಿಲ್ಲದ ಉತ್ಸಾಹದ ಸಿದ್ಧತೆ ನಡೆದಿದೆ. ಜನತಾದಳ(ಎಸ್), ಸಿಪಿಐ(ಎಂ), ಸಿಪಿಐ ಪಕ್ಷಗಳು ಬೆಂಬಲಿಸಿವೆ.

ಒಂದಡೆ, ಬಿಜೆಪಿ ನೇತೃತ್ವದ ಕೇಂದ್ರ ಸರಕಾರ, ಐದು ವರ್ಷದ ಆಡಳಿತವನ್ನು ಪೂರ್ಣಗೊಳಿಸಿದ ಹುಮ್ಮಸ್ಸಿನಿಂದ ಬೀಗುತ್ತಾ ಅಲ್ಲಲ್ಲಿ ಸ್ವಘೋಷಿತ ಆಚರಣೆಗಳನ್ನು ನಡೆಸುತ್ತಿದ್ದಾರೆ. ಇನ್ನೊಂದೆಡೆ ಐದು ವರ್ಷಗಳ ಆಡಳಿತದಿಂದ ಕಂಗೆಟ್ಟು ದೇಶಪ್ರೇಮಿ ಭಾರತೀಯರು 'ನಿಮ್ಮ ಆಡಳಿತದಿಂದ ದೇಶದ ಆರ್ಥಿಕ ಸ್ವಾವಲಂಬನೆಗೆ ಗಂಡಾಂತರ ಬರ್‍ತಿದೆ. ಗ್ರಾಮೀಣ ಪ್ರದೇಶದ ಜನತೆ, ಪಟ್ಟಣದ ಸ್ಲಂಗಳಲ್ಲಿರುವ ಬಡಜನರು ಕೆಲಸ ಕಳೆದುಕೊಂಡು, ಹೊಸ ಕೆಲಸವಿಲ್ಲದೆ ಹೊಟ್ಟೆ ತುಂಬಿಕೊಳ್ಳುವುದೂ ಸಾಧ್ಯವಾಗದೇ ಹಸಿವಿನಿಂದ ಬಳಲುತ್ತಿದ್ದಾರೆ. ಆದ್ದರಿಂದ ನಿಮ್ಮ ನೀತಿಯನ್ನು ಬದಲಿಸಿಕೊಳ್ಳಿ ಇಲ್ಲವಾದಲ್ಲಿ ಜನತೆಯ ಪ್ರತಿರೋಧವನ್ನು ತಡೆಯಲು ಸಾಧ್ಯವಿಲ್ಲ' ಎಂದು ಘಂಟಾಘೋಷವಾಗಿ ಹೇಳಲಿದ್ದಾರೆ.

ಐಕ್ಯ ಮುಷ್ಕರ

ಮೇ 21 ರ ಪ್ರತಿಭಟನೆ ಕೇವಲ ಕಾರ್ಮಿಕರ, ನೌಕರರ ಮುಷ್ಕರಕ್ಕೆ ಸೀಮಿತವಾಗಿಲ್ಲ. ರೈತರೂ ಈ ಮುಷ್ಕರಕ್ಕೆ ಬೆಂಬಲ ನೀಡಲಿದ್ದಾರೆ. ಕೇಂದ್ರ ಸರಕಾರದ ನೀತಿಯ ಪರಿಣಾಮವಾಗಿ ಬಹುರಾಷ್ಟ್ರೀಯ ಕಂಪನಿಗಳು ನುಸುಳಿ, ದೇಶೀಯ ಕೈಗಾರಿಕೆಗಳನ್ನು ನಾಶ ಮಾಡುತ್ತಿರುವ ಸಂದರ್ಭದಲ್ಲಿ ಲಾಭದಾಯಕವಾದ ಸಾರ್ವಜನಿಕ ಉದ್ದಿಮೆಗಳಲ್ಲಿ ಅತ್ಯಲ್ಪ ಬೆಲೆಗೆ ದೊಡ್ಡ ತಿಮಿಂಗಿಲಗಳಿಗೆ ಮಾರಾಟ ಮಾಡುತ್ತಿರುವ ಸಂದರ್ಭದಲ್ಲಿ, ತಮ್ಮ ಹಕ್ಕುಗಳನ್ನು ರಕ್ಷಿಸಿಕೊಳ್ಳಲು ಹಾಗೂ ದೇಶದ ಆರ್ಥಿಕ ಸ್ವಾವಲಂಬನೆಯನ್ನು ಉಳಿಸಿಕೊಳ್ಳಲು ವಿವಿಧ ಸಂಘಟನೆಗಳಿಗೆ ಸೇರಿದ ಕಾರ್ಮಿಕ ವರ್ಗ ಐಕ್ಯ ಮುಷ್ಕರವನ್ನು ನಡೆಸಲಿದ್ದಾರೆ.

ಅದೇ ಸಂದರ್ಭದಲ್ಲಿ ವಾಜಪೇಯಿ ಸರಕಾರದಿಂದ ಕೃಷಿ ಕ್ಷೇತ್ರವು ನಾಶವಾಗಿ, ರೈತರು ಯಾವದಾರಿಯೂ ತೋಚದೆ, ಆತ್ಮಹತ್ಯೆಗೆ ಶರಣು ಹೋಗುತ್ತಿರುವ ಸಂದರ್ಭದಲ್ಲಿ ದೇಶದಾದ್ಯಂತ ಸಮರಶೀಲ ರಸ್ತಾ ರೋಕೋ, ಗ್ರಾಮೀಣ ಬಂದ್ ನಡೆಸುವುದರ ಮೂಲಕ ಮುಷ್ಕರ ನಡೆಸುತ್ತಿರುವ ಕಾರ್ಮಿಕರಿಗೆ ಸೌಹಾರ್ದ ಬೆಂಬಲವನ್ನು ಸೂಚಿಸಲಿದ್ದಾರೆ. 'ನಮ್ಮ ದಾರಿ ಹೋರಾಟದ ದಾರಿ, ಆತ್ಮಹತ್ಯೆಯಲ್ಲ' ಎಂಬ ಘೋಷಣೆಯಲ್ಲಿ ಎಲ್ಲಾ ಹಳ್ಳಿಗಳಲ್ಲಿ, ಪಟ್ಟಣ ಪ್ರದೇಶಗಳಲ್ಲೂ ರಣಕಹಳೆ ಮೊಳಗಿಸಲಿದ್ದಾರೆ. ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರದ ಅವಧಿಯಲ್ಲಿ 'ಇಷ್ಟೊಂದು ಆತ್ಮಹತ್ಯೆ, ಹಸಿವಿನಿಂದ ಸಾವು' ಎಂದೆಂದೂ ನಡೆದಿರಲಿಲ್ಲ. ಇದು ವಾಜಪೇಯಿ ಸರಕಾರ ನಾಚಿಕೆ ಇಲ್ಲದೆ ಆಚರಿಸುತ್ತಿರುವ 5 ವರ್ಷದ ಅವಧಿಯಲ್ಲಿ ಮಾತ್ರ ಸಾಧ್ಯವಾಗಿದೆ.

ಈ ಅವಧಿಯಲ್ಲಿ ಸರಕಾರದ ಉದಾರೀಕರಣ, ಖಾಸಗೀಕರಣದ ವಿರುದ್ಧ ಸಾಕಷ್ಟು ಹೋರಾಟಗಳು ನಡೆದಿವೆ. ಕಲ್ಲಿದ್ದಲು ನೌಕರರ 3 ದಿನಗಳ ಮುಷ್ಕರ, ಬ್ಯಾಂಕು, ಎಲ್.ಐ.ಸಿ ನೌಕರರ ಮುಷ್ಕರ, ಸಾರ್ವಜನಿಕ ಉದ್ದಿಮೆಗಳ ನೌಕರರ ಮುಷ್ಕರ, ಹೆಚ್‌ಪಿಸಿಎಲ್, ಬಿಪಿಸಿಎಲ್ ಖಾಸಗೀಕರಣದ ವಿರುದ್ಧ 27 ನೌಕರರ ಸಂಘಟನೆಗಳ 3 ದಿನಗಳ ಮುಷ್ಕರ ಹೀಗೆ ಮುಷ್ಕರಗಳ ಮಹಾಪೂರವೇ ನಡೆದಿದೆ. ಈ ಮುಷ್ಕರಗಳು ಆಯಾ ವಿಭಾಗದ ಕಾರ್ಮಿಕರು ನೌಕರರು ನಡೆಸಿದ್ದಾರೆ.

ಮೇ 21 ರಂದು ಅವರೆಲ್ಲಾ ಒಂದಾಗಿ 'ಶೋಷಣೆಗೆ ಒಳಗಾದ ನಾವೆಲ್ಲ ಒಂದೇ' ಎಂಬ ಘೋಷಣೆಯೊಂದಿಗೆ ಐಕ್ಯ ಪ್ರದರ್ಶನವನ್ನು ನಡೆಸಲಿದ್ದಾರೆ. ಇದೇ ಸಂದರ್ಭದಲ್ಲಿ, ರೈತರು, ಕೂಲಿಕಾರರು ತಮ್ಮ ತಮ್ಮ ಬೇಡಿಕೆಗಳಿಗಾಗಿ ಹಲವಾರು ಹೋರಾಟ ನಡೆಸಿದ್ದಾರೆ. ವಿದ್ಯುತ್ ದರ ಏರಿಕೆ, ಬೆಳೆಗಳ ನಾಶ, ನೀರಾವರಿ ಯೋಜನೆಗಾಗಿ, ಬರಗಾಲದ ಬವಣೆಯಿಂದ ಪರಿಹಾರ, ಬೆಳೆದ ಬೆಳೆಗೆ ತಕ್ಕ ಬೆಲೆ. ಹೀಗೆ ಹತ್ತು ಹಲವು ಬೇಡಿಕೆಗಳಿಗಾಗಿ ಹೋರಾಟ ನಡೆಸಿದ್ದಾರೆ. ಇವೆಲ್ಲವೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನೀತಿಗಳಿಂದ ಉಂಟಾದ ಪರಿಣಾಮ ಎಂಬುದನ್ನು ಅರಿತುಕೊಂಡಿದ್ದಾರೆ.

ಎಚ್ಚರಿಕೆ

ಗ್ರಾಮೀಣ ಜನತೆಯ ಪ್ರತಿಭಟನೆ, ಕಾರ್ಮಿಕ ವರ್ಗದ ಮುಷ್ಕರದೊಂದಿಗೆ ಸಮ್ಮಿಳಿತಗೊಂಡು, ವಿದೇಶಿ ಬಂಡವಾಳ ಮತ್ತು ಭಾರತದ ದೊಡ್ಡ ಬಂಡವಾಳಗಾರ ಪರ ನೀತಿಯನ್ನು ಧಿಕ್ಕರಿಸುವ ಎಚ್ಚರಿಕೆಯ ನೋಟೀಸನ್ನು ಮೇ 21 ರಂದು ನೀಡಲಿದ್ದಾರೆ. ವಿದ್ಯಾರ್ಥಿ, ಯುವ ಜನರು, ಮಧ್ಯಮವರ್ಗದ ಜನರು, ಮಹಿಳೆಯರು ಸಹ ಈ ಹೋರಾಟವನ್ನು ಬೆಂಬಲಿಸಿದ್ದಾರೆ. ಒಟ್ಟಾರೆಯಾಗಿ ಹೇಳುವುದಾದರೆ, ದೇಶದ ಆರ್ಥಿಕ ಸ್ವಾವಲಂಬನೆ ಮತ್ತು ಜನರ ಹಿತಾಸಕ್ತಿಯಲ್ಲಿ ನಂಬಿಕೆ ಉಳ್ಳವರೆಲ್ಲರೂ ಈ ಹೋರಾಟದಲ್ಲಿ ಭಾಗವಹಿಸಲಿದ್ದಾರೆ. ತಮ್ಮ ವೈಯಕ್ತಿಕ ಲಾಭಕ್ಕಾಗಿ ದೇಶದ ಶತ್ರುಗಳಿಗೆ ತಮ್ಮನ್ನು ಮಾರಿಕೊಂಡವರನ್ನು ಬಿಟ್ಟರೆ ಉಳಿದವರೆಲ್ಲರೂ ಈ ಹೋರಾಟದಲ್ಲಿ ಭಾಗಿಗಳಾಗಲಿದ್ದಾರೆ.

ಅನುಭವದಿಂದ ಕಲಿತ ಪಾಠ

ಈ ಹೋರಾಟದ ತಯಾರಿಯಲ್ಲಿ ಜನತೆ ಹಲವು ಪಾಠಗಳನ್ನು ಕಲಿತಿದ್ದಾರೆ. ರಸ್ತೆಗಳಲ್ಲಿ, ಫ್ಯಾಕ್ಟರಿಗಳಲ್ಲಿ, ಕಛೇರಿಗಳಲ್ಲಿ ಬೇಸಾಯ ಮಾಡುವ ಗದ್ದೆಗಳಲ್ಲಿಯೂ ಎಷ್ಟು ಹೋರಾಟ ನಡೆಸಿದರೂ, ಕೇಂದ್ರ ಮತ್ತು ರಾಜ್ಯ ಸರಕಾರಗಳ ನೀತಿಗಳ ವಿರುದ್ಧ ಹೋರಾಟ ಮಾಡುವ ಪ್ರತಿನಿಧಿಗಳನ್ನು ಆಯ್ಕೆ ಮಾಡಿ ಕಳುಹಿಸದಿದ್ದಲ್ಲಿ ನಮಗೆ ಕೇಡು ಎನ್ನುವ ಪ್ರಜ್ಞೆ ದಿನದಿಂದ ದಿನಕ್ಕೆ ಬಲಿಯುತ್ತಿದೆ. ವಿಮಾ ಖಾಸಗೀಕರಣ ಮಸೂದೆಯ ಸಂದರ್ಭದಲ್ಲಿ ಆಯ್ಕೆಯಾದ ಬಹುತೇಕ ಪ್ರತಿನಿಧಿಗಳು ಅದನ್ನು ಬೆಂಬಲಿಸಿದುದನ್ನು ಅವರು ಅನುಭವದಿಂದ ಕಂಡುಕೊಂಡಿದ್ದಾರೆ. ಮೇ 21 ರ ಮುಷ್ಕರ ಜನತೆಯ ಐಕ್ಯತೆಯನ್ನು ಸಾರುವ ಮಂತ್ರವಾಗಲಿದೆ. ಕೋಮುವಾದದ ನೆಲೆಯಲ್ಲಿ ಜನರ ಐಕ್ಯತೆಯನ್ನು ಮುರಿದು ಆಳುವವರ ಹಿತಾಸಕ್ತಿಯನ್ನು ಕಾಪಾಡುವ ಬಿಜೆಪಿ, ಆರ್.ಎಸ್.ಎಸ್. ಸಂಘ ಪರಿವಾರಕ್ಕೆ ಎಚ್ಚರಿಕೆಯ ನೋಟೀಸು ಕೂಡಾ ಆಗಲಿದೆ. ಸಾಂಸ್ಕೃತಿಕ ರಾಷ್ಟ್ರೀಯತೆಯ ಹೆಸರಿನಲ್ಲಿ ಹಿಂದುತ್ವವನ್ನು ಎತ್ತಿ ಹಿಡಿಯುವ ಕೋಮುಶಕ್ತಿಗಳಿಗೆ ಬದಲಾಗಿ ಎಲ್ಲಾ ಧರ್ಮಕ್ಕೆ ಸೇರಿದ ಎಲ್ಲಾ ಜನಾಂಗಕ್ಕೆ ಸೇರಿದ, ವಿವಿಧ ಭಾಷೆಗಳನ್ನು ಮಾತನಾಡುವ ದುಡಿಯುವ ಜನ ನಾವೆಲ್ಲ ಒಂದೇ ಎಂಬುದನ್ನು ತೋರಿಸಲಿದ್ದಾರೆ. ಈ ಮುಷ್ಕರದಿಂದಾಗಿ ಕೋಟ್ಯಾಂತರ ರೂಪಾಯಿ ನಷ್ಟವಾಗುತ್ತದೆ ಎಂಬ ಕೂಗು ಅಲ್ಲಲ್ಲಿ ಕೇಳಬಹುದು. ನಷ್ಟ ಯಾರಿಗೆ ಎಂದು ನಾವು ಪ್ರಶ್ನಿಸಬೇಕಾಗಿದೆ. ದಿನ ಬೆಳಗಾದರೆ, ಜನತೆಯನ್ನು ಲೂಟಿ ಮಾಡುವ ಬಹುರಾಷ್ಟ್ರೀಯ ಕಂಪನಿಗಳಿಗೆ, ಹಿರಿಯ ಬಂಡವಾಳಿಗರಿಗೆ ಇದು ನಷ್ಟವಾಗ ಬಹುದು. ಆದರೆ ಬಹುಸಂಖ್ಯಾತ ಭಾರತೀಯರು ವಾಜಪೇಯಿ ಸರಕಾರಕ್ಕೆ ನೀಡುವ ಎಚ್ಚರಿಕೆಯ ನೋಟೀಸು ಇದಾಗಿದ್ದು, ಈ ಸರಕಾರ ತನ್ನ ನೀತಿಗಳನ್ನು ಬದಲಿಸಿಕೊಳ್ಳದಿದ್ದಲ್ಲಿ, 'ಖುರ್ಚಿ ಬಿಟ್ಟು ತೊಲಗಿ' ಎಂದು ಘೋಷಣೆ ನೀಡುವ ಬೃಹತ್ ಹೋರಾಟ ಮೇ 21 ರಂದು ನಡೆಯಲಿದೆ.

ಅದರ ಯಶಸ್ಸಿಗಾಗಿ ದುಡಿಯೋಣ

ಜನಗಳ ಬೆನ್ನ ಹಿಂದೆ ಬಿಜೆಪಿಯ ಕುತಂತ್ರದಾಟ



ಭಾರತ-ಪಾಕಿಸ್ತಾನಗಳ ನಡುವಿನ ಮಾತುಕತೆಗಳ ಬೆನ್ನ ಹಿಂದೆ ಬಿಜೆಪಿಯ ನೇತೃತ್ವದ ಕೇಂದ್ರ ಸರ್ಕಾರ ಅಪಾಯಕಾರಿ ಆಟದಲ್ಲಿ ತೊಡಗಿದೆ. ದಿನಬೆಳಗಾದರೆ ಅಮೆರಿಕನ್ ಅಧಿಕಾರಿಗಳು ದೆಹಲಿಯಲ್ಲಿಯೂ, ಭಾರತದ ಅಧಿಕಾರಿಗಳು ಅಮೆರಿಕಾದಲ್ಲಿಯೂ ಕಾಣಿಸಿಕೊಂಡು ಮಾತುಕತೆ ಆಡುತ್ತಿದ್ದಾರೆ. ಅಮೆರಿಕನ್ ಸಾಮ್ರಾಜ್ಯಶಾಹಿಗಳ ಪರವಾಗಿರುವ ವಿದೇಶಾಂಗ ನೀತಿ, ಭಾರತದ ಭವಿಷ್ಯತ್ತಿಗೆ ಮಾರಕವಾದ ಕುತಂತ್ರಗಳೇನು?

ಹರ್ಕಿಶನ್ ಸಿಂಗ್ ಸುರ್ಜಿತ್

ಭಾರತ-ಪಾಕಿಸ್ತಾನದ ಮಾತುಕತೆಗಳ ಪ್ರಕ್ರಿಯೆಯನ್ನು ಪುನರಾರಂಭಿಸಲು ಭಾರತ ಸರಕಾರ ಕೆಲವು ಸಕಾರಾತ್ಮಕ ಹೆಜ್ಜೆಗಳನ್ನಿಟ್ಟಿತು. ಅದಕ್ಕೆ ಆ ಕಡೆಯಿಂದ ಅಷ್ಟೇ ಸಕಾರಾತ್ಮಕ ಸ್ಪಂದನವೂ ದೊರೆಯಿತು. ಆದರೆ ಇದೇ ವೇಳೆಗೆ ಬಿಜೆಪಿ ನೇತೃತ್ವದ ಆಡಳಿತ ಜನಗಳ ಬೆನ್ನಹಿಂದೆ ಇನ್ನೊಂದು ಆಟ ಆಡುತ್ತಿರುವಂತೆ ಕಾಣುತ್ತಿದೆ. ಅದೊಂದು ದುಷ್ಟ ಆಟ. ನಮ್ಮ ಈ ದೇಶವನ್ನು ಅಮೇರಿಕಾದ ಸಾಮ್ರಾಜ್ಯಶಾಹಿಗಳ ಬಾಲಂಗೋಚಿಯಾಗಿಸುವ ಆಟ.

ಇನ್ನೆಲ್ಲಿ ಅಲಿಪ್ತ ವಿದೇಶಾಂಗ ನೀತಿ?

ಇದರಲ್ಲಿ ಆಶ್ಚರ್ಯವೂ ಇಲ್ಲ. ಬಿಜೆಪಿ ಅದರ ಹಿಂದಿನ ಅವತಾರವಾದ ಜನಸಂಘ ನಮ್ಮ ಅಲಿಪ್ತ ಸ್ವಾತಂತ್ರ ನೀತಿ ಬಿಟ್ಟು ಅಮೇರಿಕಾದೊಡನೆ ಕೈಜೋಡಿಸಬೇಕು ಎಂದು ಪ್ರತಿಪಾದಿಸುವ ಪಕ್ಷ. ಈ ಕೇಸರಿ ವಿದೇಶಾಂಗ ನೀತಿ ಭಾರತ ಸ್ವಾತಂತ್ರ್ಯಪ್ರಿಯ, ಅಲಿಪ್ತ, ಸಾಮ್ರಾಜ್ಯಶಾಹಿ ವಿರೋಧಿ ದೇಶವೆಂಬ ಪ್ರತಿಷ್ಠೆಯನ್ನು ಪಣಕ್ಕೊಡ್ಡಿದೆ ಎಂಬುದನ್ನು ಈಗಾಗಲೇ ನೋಡಿದ್ದೇವೆ. ಕಳೆದವಾರ ಮತ್ತೊಮ್ಮೆ ಈ ಕೇಸರಿ ವಿದೇಶಾಂಗ ನೀತಿಯ ವಂಚನೆ ಕಾಣಬಂದಿದೆ. ಕಳೆದ ವಾರ ಅಮೆರಿಕಾದ ಉಪ ವಿದೇಶಾಂಗ ಸಚಿವ ರಿಚರ್ಡ್ ಆರ್ಮಿಟೇಜ್ ಮೊದಲು ಪಾಕಿಸ್ತಾನದ, ನಂತರ ಭಾರತದ ಮುಖಂಡರೊಡನೆ ಚರ್ಚೆ ನಡೆಸುತ್ತಿದ್ದಾಗ ವಾಜಪೇಯಿ ಆಡಳಿತದ ಪ್ರಮುಖ ವ್ಯಕ್ತಿಯೊಬ್ಬರು ದಿಲ್ಲಿಯಿಂದ ನಾಪತ್ತೆಯಾಗಿದ್ದರು. ಪ್ರಧಾನ ಮಂತ್ರಿಗಳ ಮುಖ್ಯ ಕಾರ್ಯದರ್ಶಿ ಹಾಗೂ ಭದ್ರತಾ ಸಲಹೆಗಾರ ಬ್ರಿಜೇಶ್ ಮಿಶ್ರಾ ಆಗ ವಾಶಿಂಗ್‌ಟನ್‌ನಲ್ಲಿದ್ದರು. ಅಲ್ಲಿನ ಅಧ್ಯಕ್ಷರ ಭದ್ರತಾ ಸಲಹೆಗಾರ್ತಿ ಕೊಂಡೊಲೇಝಾ ರೈಸ್‌ರೊಡನೆ ಗುಪ್ತ ಮಾತುಕತೆ ನಡೆಸುತ್ತಿದ್ದರು. ನಂತರ ಅಮೇರಿಕಾ ವಿದೇಶಾಂಗ ಸಚಿವ, ಉಪರಕ್ಷಣಾ ಸಚಿವ ಹಾಗೂ ಸ್ವತಃ ಅಧ್ಯಕ್ಷ ಬುಶ್‌ರೊಡನೆಯೂ 15 ನಿಮಿಷ ಮಾತುಕತೆ ನಡೆಸಿದರಂತೆ. ಆರ್ಮಿಟೇಜ್ ಭಾರತೀಯ ಮುಖಂಡರೊಡನೆ ಏನೆಲ್ಲಾ ಚರ್ಚಿಸಿದರು ಎಂಬುದಕ್ಕೆ ಭಾರೀ ಪ್ರಚಾರ ದೊರೆತಿದೆ. ಆದರೆ ಬ್ರಿಜೇಶ್ ಮಿಶ್ರಾ ವಾಶಿಂಗ್ಟನ್‌ನಲ್ಲಿ ಏನು ಮಾಡಿದರೆಂಬುದನ್ನು ನಮ್ಮ ಜನರಿಂದ ಗುಟ್ಟಾಗಿ ಇಡಲಾಗಿದೆ. ಏಕೆ? ಅವರು ಏನು ಮಾತನಾಡಿರಬಹುದು? ಮುಖ್ಯವಾಗಿ ಗಡಿಯಾಚೆಯ ಭಯೋತ್ಪಾದನೆ, ಜತೆಗೆ ಇರಾಕ್, ಅಫಘಾನಿಸ್ತಾನ ಇತ್ಯಾದಿ ಬಗ್ಗೆ ಚರ್ಚಿಸಲಾಯಿತು ಎಂದು ಪ್ರತ್ರಿಕಾ ಹೇಳಿಕೆ ತಿಳಿಸುತ್ತದೆ. ಆದರೆ ಇಲ್ಲಿ ಒಂದು ಮುಖ್ಯ ಪ್ರಶ್ನೆಗೆ ಉತ್ತರ ಸಿಗುವುದಿಲ್ಲ. ಅರ್ಮಿಟೇಜ್ ಅದೇ ಪ್ರಶ್ನೆಗಳನ್ನು ಚರ್ಚಿಸಲು ಇಲ್ಲಿಗೆ ಬಂದಿರುವಾಗ ಮಿಶ್ರಾರವರು ನಮ್ಮ ಜನರಿಂದ ಸಾವಿರಾರು ಮೈಲುಗಳ ದೂರದಲ್ಲಿ, ಶ್ವೇತಭವನದಲ್ಲಿ ಅದನ್ನು ಚರ್ಚಿಸಲು ಹೋಗುವ ಅವಶ್ಯಕತೆಯಿತ್ತೇ?

ಆತಂಕದ ಛಾಯೆ

ಈ ಎರಡು ಚರ್ಚೆಗಳ ಬಗ್ಗೆ ಮಾಧ್ಯಮಗಳಲ್ಲಿ ಎದ್ದಿರುವ ಸುದ್ದಿಗಳು ಆತಂಕಕಾರಿ. ತಾವು ಸಾಮಾನ್ಯವಾಗಿ ಇರಾಕ್ ಯುದ್ಧದ ನಂತರದ ಪರಿಸ್ಥಿತಿ, ಅಲ್ಲಿನ ಪುನರ್ರಚನೆಯ ಬಗ್ಗೆ ಮಾತನಾಡಿದ್ದಾಗಿ ಅರ್ಮಿಟೇಜ್ ಹೇಳುತ್ತಾ "ನಾವೇನೂ ನಿರ್ದಿಷ್ಟ ಕೋರಿಕೆಗಳನ್ನು ಮುಂ[illegible]ಲ್ಲ" ಎಂದರೆ ಭಾರತ ಸರಕಾರ ತಡಮಾಡದೆ ಸ್ಪಷ್ಟೀಕರಣ ನೀಡುತ್ತಾ ಯುದ್ಧಗ್ರಸ್ತ ಇರಾಕ್‌ಗೆ ಭಾರತ ತನ್ನ ಪಡೆಗಳನ್ನು ಅಮೇರಿಕಾದ ಕೋರಿಕೆಯ ಮೇರೆಗೆ ಕಳಿಸುವುದಿಲ್ಲ, ವಿಶ್ವಸಂಸ್ಥೆ ಅಧಿಕಾರ ನೀಡಿದರೆ ಮಾತ್ರ ಕಳಿಸುತ್ತದೆ ಎಂದಿದೆ. ಅಮೇರಿಕಾದಿಂದ 'ನಿರ್ದಿಷ್ಟ ಕೋರಿಕೆ' ಯಿಲ್ಲದಿದ್ದರೆ ತರಾತುರಿಯ ಸ್ಪಷ್ಟೀಕರಣವಾದರೂ ಏತಕ್ಕೆ?

ಇನ್ನೂ ಒಂದು ವಿಷಯ ವಿಶ್ವ ಸಂಸ್ಥೆ ಹೇಳಿದರೂ ಭಾರತದ ಪಡೆಗಳು ಇರಾಕ್‌ಗೆ ಏನು ಮಾಡಲು ಹೋಗಬೇಕು? ಇರಾಕ್‌ನ ಮೇಲೆ ಅಮೇರಿಕಾ ಬ್ರಿಟನ್ ನಡೆಸಿದ್ದು ಆಕ್ರಮಣ. ವಿಶ್ವಸಂಸ್ಥೆಯ ಅನುಮತಿ ಇದಕ್ಕಿರಲಿಲ್ಲ. ಈಗಲೂ ಅಲ್ಲಿ ಅಮೇರಿಕನ್ನರ ಇರುವು ಕಾನೂನು ಬಾಹಿರ. ಅವರ ವಿರುದ್ಧ ಇರಾಕಿಗಳ ದ್ವೇಷದ ಅಲೆ ಮೂಡಿಬರುತ್ತಿದೆ. ಇಂತಹ ಸನ್ನಿವೇಶದಲ್ಲಿ ಭಾರತದ ಪಡೆಗಳು ಇರಾಕಿಗಳ ಈ ಸಾಮೂಹಿಕ ದ್ವೇಷ, ಪ್ರತಿರೋಧದಿಂದ ಕಾನೂನು ಬಾಹಿರವಾಗಿ ಅಲ್ಲಿ ಇರುವ ಅಮೇರಿಕನ್ನರನ್ನು ರಕ್ಷಿಸುವುದಲ್ಲದೆ

ಪುಟ 9 ಕ್ಕೆ

ಬರವ್ಯೋ ! ಸರ್ಕಾರವೇ ಬ

ನೀರು, ಗಾಳಿ, ಆಹಾರ ಮನುಷ್ಯನ ಅತ್ಯಂತ ಅವಶ್ಯಕತೆಗಳು. ಇವುಗಳ ಜೊತೆ ಸೇರುವ ಮೂಲಭೂತ ಸೌಲಭ್ಯಗಳು, ಮನುಷ್ಯನ ನಾಗರಿಕ ಜೀವನವನ್ನು ನಿರ್ಧರಿಸುವ ಇನ್ನುಳಿದ ಅಂಶಗಳು. 5000 ವರ್ಷಗಳ ನಾಗರಿಕತೆಯ ಹೆಗ್ಗಳಿಕೆಯನ್ನು ಹೊಂದಿರುವ ನಮ್ಮ ಸಮಾಜದಲ್ಲಿ ಬಹುಸಂಖ್ಯಾತ ಜನರಿಗೆ ನೀರು, ಆಹಾರವೇ ಇಲ್ಲದಂತಾಗಿದೆ. ಅಂತರಿಕ್ಷ ಯಾನಗಳಿಗೆ ಬರವಿಲ್ಲ. ಐಟಿ, ಬಿಟಿ ತಂತ್ರಜ್ಞಾನಕ್ಕೆ ಕೊರತೆಯಿಲ್ಲ. ಕಂಪ್ಯೂಟರ್ ಮುಂದೆ ಕೂತು ಜಗತ್ತನ್ನೇ ವೀಕ್ಷಿಸುವ ಅವಕಾಶಕ್ಕೆ ಎಣೆಯಿಲ್ಲ. ಆದರೆ ದೇಶದ ಅಸಂಖ್ಯಾತ ಮಕ್ಕಳು, ಮಹಿಳೆಯರು, ವೃದ್ಧರು, ರೈತರು, ಕೃಷಿ ಕಾರ್ಮಿಕರು, ದುಡಿಯುವ ಜನತೆಗೆ ಹೊಟ್ಟೆಗೇ ಇಲ್ಲ.


ಇವರೇ ದುಡಿದ ಟನ್ನುಗಟ್ಟಲೇ ಆಹಾರ ಸರ್ಕಾರದ ಗೋದಾಮುಗಳಲ್ಲಿ ಬಂಧಿಯಾಗಿದೆ. ಹಸಿವು, ಬರ ಜನತೆಯನ್ನು ಆವರಿಸಿರುವಾಗ ಈ ಆಹಾರ ಇವರ ಬಾಯಿ ಸೇರದಾಗಿದೆ. ವಂಚಕ ಸರ್ಕಾರಗಳೇ ಸೃಷ್ಟಿಸಿರುವ 'ಆಹಾರ ಕ್ಷಾಮದ' ಒಂದು ವರದಿ ಇಲ್ಲಿದೆ.


ಅಂದು ಯುಗಾದಿ. ಹಬ್ಬಗಳ ರಾಜ ಯುಗಾದಿಯನ್ನು ಆಚರಿಸಲು ಬೆಂಗಳೂರಿನಿಂದ ಸ್ವಂತ ಊರಿಗೆ ಹೊರಟೆ. ಅಂದು ಊರಿಗೆ ನೇರ ಬಸ್ಸು ಸಿಗದೇ ಹೋದ ಕಾರಣ ಮಧ್ಯದ ಊರೊಂದರಲ್ಲಿ ಇಳಿದು ಮತ್ತೊಂದು ಬಸ್ಸಿಗೆ ಕಾಯುತ್ತಾ ನಿಂತೆ. ಯಲಹಂಕ ಪೊಲೀಸ್ ಠಾಣೆಯ ಎದುರಿನಲ್ಲಿ ಬಸ್ಸಿನ ನಿರೀಕ್ಷೆಯಲ್ಲಿದ್ದ ನನಗೆ ಅನಿರೀಕ್ಷಿತ ಪ್ರಸಂಗವೊಂದು ಎದುರಾಯಿತು. ನಾನು ನಿಂತಿದ್ದ ಜಾಗದಲ್ಲಿಯೇ ಸಾಧಾರಣ 17 ಅಥವಾ 18ರ ಪ್ರಾಯದ ಹುಡುಗನೊಬ್ಬ ಕಣ್ಣಾಲಿಗಳನ್ನು ಮೇಲಕ್ಕೂ ಕೆಳಕ್ಕೂ ತೇಲಿಸುತ್ತಾ ಅದೇ ಮಾದರಿಯಲ್ಲಿ ತಾನೂ ತೇಲಾಡುತ್ತಿದ್ದ. ಏಳುವುದು, ಏಳಲು ಹೋಗಿ ಬೀಳುವುದು ಹೀಗೆ ನಾಲ್ಕಾರು ಬಾರಿ ಎದ್ದು ಬಿದ್ದ ನಂತರ ಅಂಗಾತ ಮಲಗಿ ಆಕಾಶದ ಕಡೆ ಮುಖ ಮಾಡಿದ. ಬಸ್ಸಿನ ಕಡೆ ಒಂದು ಕಣ್ಣು, ಇವನ ಕಡೆ ಮತ್ತೊಂದು ಕಣ್ಣು ನೆಟ್ಟಿದ್ದ ನನಗೆ ಈ ಹುಡುಗನ ಮೇಲೆ ಸಿಟ್ಟು ಬಂದು 'ಏನಪ್ಪಾ ನಾಚಿಕೆಯಾಗಲ್ವ ನಿನಗೆ ಈ ವಯಸ್ಸಿಗಾಗಲೇ ಇಷ್ಟೊಂದು ಕುಡಿತ ಕಲ್ತಿದ್ದೀಯಲ್ಲಾ ನಿನ್ನ ಹೆತ್ತವರ ಗತಿಯೇನು' ಎಂದೆ. ಈ ಮಾತು ಕೇಳಿದ ಕೂಡಲೆ ಆ ಹುಡುಗ ಸಣ್ಣ ಸ್ವರದಲ್ಲಿ ಅಳಲು ಪ್ರಾರಂಭಿಸಿದ. ಮಾತಾಡಲು ಕಷ್ಟವಾಗಿದ್ದ ಆತನ ಸ್ವರ ಮೆಲ್ಲಗೆ ನುಡಿಯಲಾರಂಭಿಸಿತು. 'ಅಕ್ಕಾ ನಾನು ಅಂತ ಹುಡುಗ ಅಲ್ಲ ಮೊನ್ನೆ ಬೆಳಿಗ್ಗೆ ಒಂದಿಷ್ಟು ಊಟ ಮಾಡಿದ್ದೆ. ಇಲ್ಲೀಗಂಟ ಏನು ತಿಂದಿಲ್ಲ ನಾನು ಕುಡುಕ ಅಲ್ಲಕ್ಕ' ಅಂದ. ಅವನ ಉತ್ತರ ಛಾಟಿ ಏಟಿನಂತಾಗಿ ಕಲ್ಲಿನಂತೆ ನಿಂತೆ. ಕಲ್ಲು ತಿಂದು ಕಲ್ಲು ಕರಗಿಸುವ 18 ರ ಪ್ರಾಯದ ಯುವಕನೊಬ್ಬ ಹಬ್ಬದ ದಿವಸ ಹೊಟ್ಟೆಗಿಲ್ಲದ ಸಂಕಟದಲ್ಲಿ ಬೀದಿ ಮೇಲೆ ಧೂಳಾಗಿದ್ದ. ಈ ಸಮಾಜ, ಈ ವ್ಯವಸ್ಥೆ ಆಳುವ ದೊರೆಗಳ ದಗಲುಬಾಜಿತನ, ದಗಾಕೋರತನಗಳೆಲ್ಲ ಕಣ್ಮುಂದೆ ಬಂದು ವಾಕರಿಕೆ ಬಂತು. ಹೊಟ್ಟೆಯೊಳಗಿನ ಕರುಳು ಹೊರನುಗ್ಗಿ ಬಂದಂತೆ ಭಾಸವಾಗಿ ಚೀಲದಲ್ಲಿದ್ದ ಹಣ್ಣನ್ನು ತೆಗೆದು ಹುಡುಗನ ಕೈಗಿಟ್ಟು ಊರಿನ ಕಡೆ ಬಸ್ಸಿಡಿದೆ.

ದೇಶವನ್ನೇ ಖರೀದಿಸಬಹುದಾದಷ್ಟು ಖಾಸಗಿ ಆಸ್ತಿಯನ್ನು ಗಳಿಸುವ ಹಕ್ಕನ್ನು ನೀಡಿರುವ ನಮ್ಮ ದೇಶದಲ್ಲಿ ಆಹಾರದ ಹಕ್ಕನ್ನು ಏಕಿಷ್ಟು ನಿಕೃಷ್ಟಗೊಳಿಸಲಾಗಿದೆ ಎನ್ನುವ ಪ್ರಶ್ನೆ ಹಿಂದೆಂದಿಗಿಂತಲೂ ಈಗ ಹೆಚ್ಚು ಪ್ರಸ್ತುತವಾಗಿದೆ.

ದೇಶದ ಬಹುಪಾಲು ಜನರನ್ನು ಆಹಾರ, ಬಟ್ಟೆ, ಶಿಕ್ಷಣ, ಉದ್ಯೋಗ, ವಸತಿಯಂಥ ಮೂಲಭೂತ ಸೌಕರ್ಯಗಳಿಂದ ವಂಚಿಸಿ ಶೇ. 3 ಅಥವಾ 5 ರಷ್ಟು ಶ್ರೀಮಂತರು ನಡೆಸುವ ವಹಿವಾಟಿನ ಆಧಾರದಲ್ಲಿ ದೇಶದ ಪರಿಸ್ಥಿತಿ, ಭವಿಷ್ಯವನ್ನು ಲೆಕ್ಕಾಚಾರ ಹಾಕುವುದು ಯಾವ ಸೀಮೆಯ ಅರ್ಥಶಾಸ್ತ್ರ.

ಉಪಪ್ರಧಾನಿಗಳು, ಕೇಂದ್ರದ ಗೃಹ ಸಚಿವರು ಆಗಿರುವ ಅದ್ವಾನಿಯವರು ಮಾಧ್ಯಮಗಳಿಗೆ ಇತ್ತೀಚೆಗೆ ಹೇಳಿಕೆಯೊಂದನ್ನು ನೀಡಿದರು.





ಮುಂದಿನ ಇಪ್ಪತ್ತು ವರ್ಷಗಳಲ್ಲಿ ಭಾರತ ಅಭಿವೃದ್ಧಿ ಹೊಂದಿದ ದೇಶಗಳ ಪ್ರಥಮ ಸಾಲಿನಲ್ಲಿರುತ್ತದೆಂಬ ಘೋಷಣೆ ಅದಾಗಿತ್ತು.

100 ಕೋಟಿಗೂ ಮೀರಿದ ಜನಸಂಖ್ಯೆಯನ್ನು ಹೊಂದಿರುವ, ಅತಿ ದೊಡ್ಡ ಪ್ರಜಾಪ್ರಭುತ್ವ ದೇಶವೊಂದರ ಅತಿ ಉನ್ನತ ಸ್ಥಾನದಲ್ಲಿ ನಿಂತು ಆಧಾರರಹಿತ ಮಾತುಗಳನ್ನಾಡುವ ಇವರಿಗೆ 'ಅಭಿವೃದ್ಧಿ' ಎಂದರೇನು ಎನ್ನುವ ಸಣ್ಣ ಕಲ್ಪನೆಯಾದರು ಇದೆಯೆ ಎನ್ನುವ ಸಂಶಯ ಈ ಮಾತನ್ನು ಕೇಳಿದ ಯಾರಿಗಾದರು ಕಾಡುತ್ತದೆ. ಬಾಯಿಗೆ ಬಂದದ್ದನ್ನು ಹೇಳುವುದೇ ಅಭಿವೃದ್ಧಿ ಎಂದು ಈ ಮಹಾನ್ ನಾಯಕರು ಭಾವಿಸಿದಂತಿದೆ. ಅಥವಾ ಬಡವರನ್ನೇ ಶ್ರೀಮಂತರೆಂದು ಘೋಷಿಸಿಬಿಟ್ಟರು ಅಭಿವೃದ್ಧಿ ಆದಂತೆಯೆ ಎನ್ನುವ ತೀರ್ಮಾನವು ಇವರದ್ದಾಗಿದೆ. ಬಡವರನ್ನು ಸುತ್ತುವರೆದಿದ್ದ ಬಡತನದ ರೇಖೆಯನ್ನು ಸಣ್ಣದೊಂದು ಸಮೀಕ್ಷೆ ನಡೆಸಿ ಅಳಿಸಿ ಹಾಕಿ ಅವರೆಲ್ಲರು ಶ್ರೀಮಂತರೆಂದು ಘೋಷಣೆ ಹೊರಡಿಸಿದ್ದು ಅಭಿವೃದ್ಧಿ ಸಂಕೇತವೆ.

ಬಡವರಿಂದ ದೂರ ಸರಿದ ಬಡತನದ ರೇಖೆ

ಹಸಿವು ಮತ್ತು ಹಸಿವಿನ ಸಾವುಗಳು ಸಂಭವಿಸದಂತೆ ಎಚ್ಚರವಹಿಸಿ ದೇಶದ ಜನತೆಗೆ ಆಹಾರ ಭದ್ರತೆ ಒದಗಿಸಬೇಕು ಹಾಗೂ ಸರಿಯಾದ ಸಮೀಕ್ಷೆ ನಡೆಸಿ ಬಿ.ಪಿ.ಎಲ್ ಪಟ್ಟಿ ತಯಾರಿಸಿ ಬಿ.ಪಿ.ಎಲ್ ಕುಟುಂಬಗಳಿಗೆ ವಿಶೇಷ ಸೌಲಭ್ಯಗಳನ್ನು ನೀಡಬೇಕೆನ್ನುವ ಸುಪ್ರೀಂ ಕೋರ್ಟಿನ ಮಧ್ಯಂತರ ಆದೇಶಗಳನ್ನು ಘನ ಸರ್ಕಾರಗಳು ಜಾರಿ ಮಾಡಿದ್ದಾದರು ಹೇಗೆ?

ಏನೀ ಮಾನದಂಡ ?

ಕುಟುಂಬದಲ್ಲಿ ವಾಸಮಾಡುವ ಜನರ ಸಂಖ್ಯೆ ಎಷ್ಟು? ಭೂಮಿ ಇದೆಯೇ? ಆದಾಯ ಎಷ್ಟು? ಉದ್ಯೋಗವೇನು? ಕುಟುಂಬದ ಜನ ಸಂಖ್ಯೆಗೆ ಆದಾಯಕ್ಕೂ ಹೋಲಿಕೆಯಿದೆಯೆ?, ವಾಸಕ್ಕೆ ಮನೆಯಿದೆಯೆ? ಮುಂತಾದ ಅಂಶಗಳ ಆಧಾರದಲ್ಲಿ ಎಪಿಎಲ್ - ಬಿಪಿಎಲ್ ಪಟ್ಟಿ ತಯಾರಾಗಲಿಲ್ಲ. ಬದಲಿಗೆ ಮನೆಯಲ್ಲಿ ಕಪ್ಪು ಬಿಳುಪು ಟಿ.ವಿ ಇದೆಯೆ? ಸೈಕಲ್ ಇದೆಯೇ? ಗ್ಯಾಸ್ ಸಿಲಿಂಡರ್ ಇದೆಯೆ? ಪ್ರತ್ಯೇಕ ಅಡುಗೆ ಕೋಣೆ,ಶೌಚಾಲಯ ಇದೆಯೆ? ಎನ್ನುವ ಅಂಶಗಳ ಆಧಾರದಲ್ಲಿ ಸಮೀಕ್ಷೆ ನಡೆಯಿತು.

ಇವೆಲ್ಲಾ ಇದ್ದವರು ರಾತ್ರೋರಾತ್ರಿ ಶ್ರೀಮಂತರೆಂದು ಘೋಷಿಸಲ್ಪಟ್ಟರು. ಇಲ್ಲ ಎಂದ ಕೋಟಿಗೊಬ್ಬರು ಬಿಪಿಎಲ್ ಪಟ್ಟಿಯಲ್ಲಿ ಉಳಿದರು. ಇಂತಹ ಮಾನದಂಡಗಳಿಂದ ಅಭಿವೃದ್ಧಿಯನ್ನು ಗುರುತಿಸುವುದಾದರೆ ಮಾನ್ಯ ಅಡ್ವಾನಿಯವರು ಇನ್ನೂ ಉತ್ತಮವಾದ ಹೇಳಿಕೆಯನ್ನೇ ನೀಡಬಹುದಾಗಿತ್ತು. ಇಪ್ಪತ್ತು ವರ್ಷಗಳ ತನಕ ಕಾಯುವುದೇನು, ಸದ್ಯ... ಜಗತ್ತಿನಲ್ಲಿ ಅಮೇರಿಕಾ ನಂತರ ನಾವೇ ಎರಡನೆಯ ಸ್ಥಾನದಲ್ಲಿರುವವರು ಎಂದಿದ್ದರು ನಡೆಯುತ್ತಿತ್ತು. ಈ ಹೇಳಿಕೆ ನೀಡಲು ಅದ್ವಾನಿಯವರಿಗೆ ಜಾರ್ಜ್... ಬುಷ್ ಏನಂದಾರೋ ಎನ್ನುವ ಭಯವಿರಬಹುದು. ಪಾಪ. ಬಿ.ಪಿ.ಎಲ್. ಕುಟುಂಬಗಳಿಗೆ ಹಾಗೂ ತೀರ ಕೆಳಸ್ತರದ ಶೇ. 4 ಭಾಗವಿರುವ ನಿರ್ಗತಿಕರಿ... ಗೋದಾಮುಗಳಲ್ಲಿ ಸಂಗ್ರಹ ಮಾಡಿಟ್ಟಿರುವ ಆಹಾ...

ರೇಷನ್ ಕಾರ್ಡ್

ಜೂನ್ ... ಸತ್ಯಾ...

ರೇಷನ್ ಕ... ಕಾರ್ಡ್ ಕಡಿತ... ಕಾರ್ಡ್ ಸಿಗುವ... ರಿಂದ 9 ರವರೆ... ಕೂಲಿಕಾರ-... ಸಂಘಟನೆಗಳು...

ಉದ್ಯೋಗ ಅರಸಿ ರಾಜಧಾನಿಗೆ ಹರಿಯುತ್ತಿರುವ ಜನ ಪ್ರವಾಹ-ಕೂಲಿಗಾಗಿ ಕಾಳು ಯಾರ ಮಡಿಲಿಗೆ?

ಬರಗಾಲ ಆವರಿಸಿದೆ. ಹಳ್ಳಿಗಳಲ್ಲಿ ಬೇಸಾಯವಿಲ್ಲವಾಗಿ ಜನ ಉದ್ಯೋಗ ಹುಡುಕಿಕೊಂಡು ಸಾಲುಗಟ್ಟಿ ಬೆಂಗಳೂರಿಗೆ ಬಂದಿಳಿಯುತ್ತಿದ್ದಾರೆ. 3 ಕಾಸಿನ ಕೂಲಿಗೆ ಕಟ್ಟಡ, ರಸ್ತೆ, ಮೋರಿ, ಸೇತುವೆ ನಿರ್ಮಾಣದ ಕೆಲಸಗಳಿಗೆ ಸೇರುತ್ತಿದ್ದಾರೆ. ತೋಟಗಳಲ್ಲಿ, ಸಣ್ಣಪುಟ್ಟ ಕಾರ್ಖಾನೆಗಳಲ್ಲಿ ಸೇರಿಕೊಂಡು ದುಡಿಯುತ್ತಿದ್ದಾರೆ. ಇವರ ಸಲುವಾಗಿಯೇ ಘೋಷಿಸಲ್ಪಟ್ಟ ಕೂಲಿಗಾಗಿ ಕಾಳು ಯಾರ ಮಡಿಲ ಸೇರಿದೆ.?

ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಸಿ.ಪಿ.ಎಂ. ಪಕ್ಷದ ಪಂಚಾಯ್ತಿ ಸದಸ್ಯರ ಮನೆಗೊಮ್ಮೆ ಸಭೆಗಾಗಿ ಹೋಗಿದ್ದೆವು. ಚಿಕ್ಕದಾದ ಅವರ ಮನೆಯಲ್ಲಿ ಅಕ್ಕಿ ಮೂಟೆಗಳನ್ನು ತುಂಬಿದ್ದರು. ಏನಿದು ಇಷ್ಟು ಮೂಟೆ ಎಂದು ವಿಚಾರಿಸಿದಾಗ "ಇದು ಕೂಲಿಗಾಗಿ ಕಾಳು ಯೋಜನೆಗೆ ಬಂದಿರುವ ಅಕ್ಕಿ. ಆದರೆ ಇದನ್ನು ಹಂಚುವಂತೆ ಮಾಡುವ ಯೋಜನೆಯೆ ತೀರ್ಮಾನವಾಗಿಲ್ಲ. ನಿರ್ದಿಷ್ಟ ಯೋಜನೆಯೇ ಇಲ್ಲದೆ ಅಕ್ಕಿ ಮೂಲೆ ಸೇರಿದೆ. ಗೋಡನ್‌ನಲ್ಲಿರುವ ಬದಲು ಇಲ್ಲಿದೆಯಷ್ಟೆ" ಎಂದರು. ಒಂದು ಕಡೆ ಹಸಿದ ಹೊಟ್ಟೆ ಮತ್ತೊಂದು ಕಡೆ ಮನೆಯಲ್ಲಿ ಮೂಟೆ ಇದು ನನಗಂತೂ ಮೂಕ ವೇದನೆ ತರಿಸಿದೆ, ನೋಡುವ ತನಕ ನೋಡಿ ಹಂಚಿಬಿಡುತ್ತೇನೆ ಎಂದರು. ಉಳಿದವರೆಲ್ಲಾ ಏನು ಮಾಡುತ್ತಿದ್ದಾರೆಂಬ ಪ್ರಶ್ನೆಗೆ ವಾಪಸ್ಸು ಅಂಗಡಿಗಳಿಗೆ ಮಾರಾಟ ಮಾಡುತ್ತಿದ್ದಾರೆ. ಬಂದ ಹಣದಲ್ಲಿ ಬೇರೆ ಏನಾದರೂ ಕೆಲಸ ಮಾಡಿಸುತ್ತಾರೆ ಎಂದರು. ಬಹುಶಃ ದೇಶಾದ್ಯಂತ ಕೂಲಿಗಾಗಿ ಕಾಳು ಯೋಜನೆ ಇದೇ ಪ್ರಕಾರವೇ ಜಾರಿಯಾಗಿರಬಹುದೆಂದು ಊಹಿಸುವುದು ಕಷ್ಟವೇನಲ್ಲ. ಆದರಿಂದಲೆ ಇದರ ಫಲ ಉಣ್ಣಬೇಕಾದ ಫಲಾನುಭವಿಗಳು ಗಂಜಿಪಾಡಿಗಾಗಿ ನಗರಗಳಿಗೆ ವಲಸೆ ಹೊರಟಿರುವುದು. ಕೂಲಿಗಾಗಿ ಕಾಳು ಯೋಜನೆಯಡಿಯಲ್ಲಿ ಬಿಡುಗಡೆಯಾದ ಆಹಾರ ಧಾನ್ಯಗಳು ಕಾಳಸಂತೆಕೋರರ, ಖದೀಮರ ಮಡಿಲನ್ನು ಸೇರಿದ್ದು ಈಗ ಗೋಪ್ಯವಾಗೇನು ಉಳಿದಿಲ್ಲ ಬಡವರ, ಹಸಿದವರ ಹೆಸರೇಳಿ ಇದರಲ್ಲೂ ಲಾಭ ಮಾಡಿದವರಿಗೇನು ಕೊರತೆಯಿಲ್ಲ.



...ವ ಕ್ಷಾಮವೋ !

...ಳನ್ನು ಪೂರೈಸಬೇಕೆಂಬ ಸುಪ್ರೀಂ ಕೋರ್ಟಿನ ...ವನ್ನು ಕಸದ ಬುಟ್ಟಿಗೆ ಹಾಕಿರುವ ಕೇಂದ್ರ ... ಸರ್ಕಾರಗಳು ಸಾರ್ವಜನಿಕ ಪಡಿತರ ...ಯನ್ನೆ ಬುಡಮೇಲು ಮಾಡಿವೆ.

...ರ್ವಜನಿಕ ಪಢಿತರ ವ್ಯವಸ್ಥೆಯನ್ನು, ಸಮಗ್ರ ...ಅಭಿವೃದ್ಧಿ ಯೋಜನೆಯನ್ನು ವಿಸ್ತರಿಸುವುದು ... ಮಕ್ಕಳಿಗೆ ಮಧ್ಯಾಹ್ನದ ಊಟ ಪೂರೈಸು ...ಸೇರಿದಂತೆ ಎಂಟು ಪೌಷ್ಠಿಕ ಯೋಜನೆಗಳನ್ನು ...ೂಳಿಸುವಂತೆ ಸುಪ್ರೀಂ ಕೋರ್ಟ್ ಕೇಂದ್ರ ... ಸರ್ಕಾರಗಳಿಗೆ ನಿರ್ದೇಶನ ನೀಡಿದೆ. ಬರ ... ಪ್ರದೇಶಗಳಲ್ಲಿ ವಿಶೇಷ ಕಾಮಗಾರಿಗಳನ್ನು ...ಡಿಸುವುದು ಉದ್ಯೋಗಗಳನ್ನು ಕಲ್ಪಿಸುವುದು ... ಪ್ರಮುಖ ಅಂಶವಾಗಿದೆ.

...ಮಮಂದಿರ ನಿರ್ಮಾಣಕ್ಕೆ ಅನುಮತಿ ... ಅರ್ಜಿ ಮೇಲೆ ಅರ್ಜಿ ಹಾಕಿ ...ಾಲಯದ ತಲೆ ಮೇಲೆ ಕೂತು ಸವಾರಿ ...ುವ ಸರ್ಕಾರಕ್ಕೆ ಅಸಂಖ್ಯಾತ ಜನತೆಯ ...ಗಿ ಬಂದ ತೀರ್ಪೊಂದನ್ನು ಜಾರಿ ಮಾಡುವ ...ಇಲ್ಲವೆಂದ ಮೇಲೆ ಹಸಿವಿನ ಪ್ರಶ್ನೆಯನ್ನು ...ರ್ಪಡಿಸುವ ಆಸೆಯಿಲ್ಲವೆಂದ ಮೇಲೆ ರಾಮ ...ರ ಕಟ್ಟುವುದು ಯಾರ ಸಲುವಾಗಿ? ಯಾರ ... ಒಳಿತಿಗಾಗಿ?

ಇಷ್ಟಕ್ಕೂ ಸುಪ್ರೀಂ ಕೋರ್ಟಿನ ...ನಿರ್ದೇಶನಗಳನ್ನು ಪಾಲಿಸಲು ಇರುವ ...ಕೆಗಳೇನು? ಆಹಾರದ ಕೊರತೆಯೇ? ...ಾಮುಗಳು ಖಾಲಿಯಾಗಿ ವೆಯೇ? ಅಥವಾ WTO ಒಪ್ಪಿಗೆ ಬೇಕೆ? ಏನು ಸಮಸ್ಯೆ?

ಸ್ವದೇಶಿ ಜನರ ಮೇಲಿಲ್ಲದ ಪ್ರೀತಿ ಅಮೇರಿಕಾದ ಹಂದಿ-ಹಸುಗಳ ಮೇಲೆ

ಪ್ರಧಾನ ಮಂತ್ರಿಗಳು ದಿನ ಬೆಳಗಾದರೆ ಬೊಬ್ಬೆಯಿಡುತ್ತಾರೆ. ಜನ ಗಾಬರಿಯಾಗುವುದು ಬೇಡ, ನಮ್ಮ ಬಳಿ ಹೇರಳ ಪ್ರಮಾಣದಲ್ಲಿ ಆಹಾರ ಧಾನ್ಯಗಳ ಸಂಗ್ರಹಣೆ ಇದೆ. ಗೋಧಿ ಇದೆ, ಅಕ್ಕಿ ಇದೆ, ಸಕ್ಕರೆ, ಬೆಲ್ಲ ಎಲ್ಲಾ ಇದೆ. ಗೋದಾಮುಗಳಲ್ಲಿ ರೇಷನ್ ತುಂಬಿದೆ ಅದಿದೆ ಇದಿದೆ ಮತ್ತೊಂದಿದೆ ಎನ್ನುವ ಮಾತುಗಳನ್ನು ಕೇಳಿ ಕೇಳಿ ನಮ್ಮ ದೇಶದ ಹಸಿದ ...ೆ ಕಿವಿ ತುಂಬಿ ಹೋಗಿದೆ. ಇರುವ ...ಳು ಹೊಟ್ಟೆ ತನಕ ಬರಲಿಲ್ಲವಷ್ಟೆ. ಬರಗಾಲ ...ಶ್ಲೆಲ್ಲಾ ಆವರಿಸಿದೆ. ಎಲ್ಲೆಡೆ ಅನ್ನ ಆಹಾರಕ್ಕೆ ...ಾರ ಎದ್ದಿದೆ. ದೇಶದ ಉಚ್ಚ ನ್ಯಾಯಾಲಯ ...ನ್ನೆಲೆಯಲ್ಲಿ ಹಸಿವನ್ನು ಇಂಗಿಸುವಂತೆ ...ಕ್ಕೆ ಸ್ಪಷ್ಟ ಆದೇಶ ನೀಡಿರುವಾಗ ಕೇಂದ್ರ ...ರವು ಭಾರತ ಮಾತೆಯ ಮಕ್ಕಳಿಗೆ ...ವುಣಿಸುವ ಬದಲು ಗೋದಾಮುಗಳಲ್ಲಿ ...ುವ ಸರಕನ್ನು ಅಮೇರಿಕಾಕ್ಕೆ ಮಾರಾಟ ...ು ಮುಂದಾಗಿದೆ. ಅದೂ ಕೆ.ಜಿ. ವೊಂದಕ್ಕೆ ...ಪಾಯಿಗಳಂತೆ. ಅಮೇರಿಕಾದ ಜನ ...ದು ಬಡವರಾದರೆ ಎಂದು ಆಶ್ಚರ್ಯ ...ಡ. ಅಗ್ಗದ ದರದಲ್ಲಿ ಖರೀದಿ ಮಾಡಿದ ... ಧಾನ್ಯಗಳನ್ನು ಹಂದಿ ಪಶು- ಪಕ್ಷಿಗಳಿಗೆ ...ತ್ತಾರಂತೆ. ಇಂತಹ ಒಪ್ಪಂದವೊಂದಕ್ಕೆ ...ಸರ್ಕಾರ ಮುಂದಾಗಿ ಅಮೇರಿಕಾದ ಪಶು ... ಹಸಿವನ್ನು ಇಂಗಿಸಲಿದೆಯಂತೆ. ಹೇಗಿದೆ ... ಪ್ರೇಮ'. WTO ನಿರ್ದೇಶನ ಹೀಗಿರು ...ನಮ್ಮ ದೇಶದ ಮಕ್ಕಳು, ಮಹಿಳೆಯರು, ...ರು, ಬಡವರ ಹಸಿವನ್ನು ನೀಗುವುದು ತಾನೆ ...ಸಾಧ್ಯ? ಬರಗಾಲದ ಹಿನ್ನೆಲೆಯಲ್ಲಿ ... ಮಾಹಿತಿ ಸಂಗ್ರಹಿಸಿದ ಸರ್ಕಾರವೇ ...ಮಾಡಿದ್ದ ಅಭಿಜಿತ್ ಸೇನ್ ಸಮಿತಿಯು, ಆಹಾರದ ಕ್ಷಾಮ ಹಾಗೂ ಜನತೆಯ ಪರಿಸ್ಥಿತಿಯನ್ನು ಪರಿಗಣಿಸಿ ಸರ್ಕಾರಿ ಗೋದಾಮುಗಳಲ್ಲಿ ತುಂಬಿತುಳುಕುತ್ತಿರುವ ಆಹಾರ ಧಾನ್ಯಗಳನ್ನು ಬಡವರಿಗೆ ಹಂಚಲು ಸರ್ಕಾರಕ್ಕೆ ಶಿಫಾರಸ್ಸು ಮಾಡಿತ್ತು. ಕೂಲಿಗಾಗಿ ಕಾಳು ಯೋಜನೆಯ ಮೂಲಕ ವ್ಯಾಪಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸೂಚಿಸಿತ್ತು. ಇದನ್ನು ಮಾಡದೇ ಹೋದರೆ ಶೇಖರಿಸಿರುವ ಆಹಾರ ಧಾನ್ಯಗಳನ್ನು ಸಮುದ್ರಕ್ಕೆ ಬಿಸಾಡಿ ಗೋದಾಮುಗಳನ್ನು ಖಾಲಿ ಮಾಡಿ ಎನ್ನುವ ಸಲಹೆ ನೀಡಿತ್ತು. ಎನ್.ಡಿ.ಎ. ಸರ್ಕಾರ ಅಭಿಜಿತ್ ಸೇನ್ ಸಮಿತಿಯ ಉಳಿದೆಲ್ಲ ಶಿಫಾರಸುಗಳನ್ನು ಮೂಲೆಗೆ ತಳ್ಳಿ ಗೋದಾಮು ಖಾಲಿ ಮಾಡುವ ಏಕೈಕ ಶಿಫಾರಸ್ಸನ್ನು ಆಯ್ಕೆ ಮಾಡಿಕೊಂಡಿದೆ. ಹೀಗಾಗಿಯೆ ಅಮೇರಿಕಾ ದೊಂದಿಗೆ 4 ರೂಪಾಯಿ ಕೆ.ಜಿ.ಗೆ ಮಾರಾಟ ಮಾಡುವ ವ್ಯವಹಾರ ಕುದುರಿಸಿದೆ.


ಸತ್ಯಾಂಶವೆಂದರೆ ಬಡವರೆ ದುಡಿದು ಸಂಪಾದಿಸಿದ ಆಹಾರ ಧಾನ್ಯಗಳನ್ನು ಬಡವರಿಗೆ ಇಲ್ಲದಂತೆ ಮಾಡಿ ಗೋದಾಮುಗಳಲ್ಲಿಟ್ಟು ಅದನ್ನು ಸಂರಕ್ಷಿಸುವ ಹೆಸರಿನಲ್ಲಿ ಸರ್ಕಾರ ಮತ್ತೂ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡುವ ಪ್ರಮೇಯವಿಲ್ಲ. ಅದಕ್ಕಿಂತ ಸಮುದ್ರಕ್ಕೆಸೆಯುವುದು ಲೇಸೆಂಬುದು ಸಮಿತಿಯ ಅಭಿಪ್ರಾಯವಾಗಿತ್ತು. ಇದರ ಮೂಲ ಆಶಯವನ್ನು ಬಿಟ್ಟು ಖಾಲಿ ಮಾಡುವ ಏಕೈಕ ನಿರ್ಧಾರ ಆರಿಸಿದ್ದು ಎಷ್ಟು ಸರಿ. ಎಷ್ಟಾದರು ತಿರುಚುವ ಕೆಲಸದಲ್ಲಿ ಬಿ.ಜೆ.ಪಿ. ದೊರೆಗಳು ಎತ್ತಿದ ಕೈಯ್ಯಲ್ಲವೆ.?

ಆದಾಯ, ಉದ್ಯೋಗಾವಕಾಶಗಳು ಕುಸುಯುತ್ತಿವೆ. ಆದರೆ ಬೆಲೆಗಳು ಏರುತ್ತಿವೆ. ಅದು ಎಷ್ಟು ಪ್ರಮಾಣದಲ್ಲಿ?

93-94ರ ಅಭಿವೃದ್ಧಿ ಸೂಚ್ಯಂಕದ ನಂತರ ಡಿಸೆಂಬರ್ 2002ರ ವರೆಗೆ ಗೋಧಿಯ ಬೆಲೆ 100ಕ್ಕೆ 179 ಏರಿದೆ. ಅಕ್ಕಿಯ ಬೆಲೆ 166 ಕ್ಕೆ ಬೇಳೆ 181ಕ್ಕೆ ಕಡೆಲೆಕಾಯಿ ಎಣ್ಣೆ 175 ಹಾಗೂ ಅಡುಗೆ ಎಣ್ಣೆ 147 ರಷ್ಟು ಏರಿದ್ದರೆ, ಕಾಟನ್ ಬಟ್ಟೆ 162 ಹಾಗೂ ಸಕ್ಕರೆ 128 ಪ್ರಮಾಣಕ್ಕೆ ಏರಿದೆ.

1998-99 ಮತ್ತು 2000-2001ರ ನಡುವೆ ಎ.ಪಿ.ಎಲ್. ನ ದರಗಳು, ಗೋಧಿಯ ಮೇಲೆ ಶೇ. 85ಕ್ಕೇರಿದರೆ ಅಕ್ಕಿಯ ದರ ಶೇ. 61ಕ್ಕೇರಿದ್ದು ಬಿ.ಪಿ.ಎಲ್.ನ ದರಗಳೂ ಏರದೆ ಇರಲಿಲ್ಲ, ಬಿ.ಪಿ.ಎಲ್.ನ ಗೋಧಿ ಶೇ. 66 ಕ್ಕೇರಿ ಅಕ್ಕಿಯ ದರ ಶೇ. 62 ಹೆಚ್ಚಾಯಿತು. 1998ರಲ್ಲಿ 27.1 ಮಿಲಿಯನ್ ಟನ್ ಇದ್ದ ಆಹಾರ ಸಂಗ್ರಹಣೆಯು 2002ರಲ್ಲಿ 60 ಮಿಲಿಯನ್ ಟನ್‌ಗೇರಿದಾಗ ಈ ಬದಲಾವಣೆಯಾದದ್ದನ್ನು ಗಮನಿಸಬೇಕಾಗಿದೆ. ಬರ ಪರಿಹಾರವಾಗಿ ಬಿಡುಗಡೆ ಮಾಢಿದ ನಂತರವೂ 44 ಮಿಲಿಯನ್ ಟನ್‌ಗಿಂತ ಹೆಚ್ಚಿನ ಆಹಾರ ಸಂಗ್ರಹವಾಗಿದೆ. 3000 ಟನ್ ಆಹಾರ ಧಾನ್ಯ ಆಂಧ್ರಪ್ರದೇಶದ ಮುಕ್ತ ಮಾರುಕಟ್ಟೆಯಲ್ಲಿ ಮಾರಾಟಗೊಂಡಿದೆ. ಎಷ್ಟೊ ಸಂದರ್ಭಗಳಲ್ಲಿ ಸರ್ಕಾರಿ ಅಂಗಡಿಗಳ ಬೆಲೆಗಳು ಮುಕ್ತಮಾರುಕಟ್ಟೆಯ ಬೆಲೆಗಳಿಗಿಂತ ಹೆಚ್ಚಾದದ್ದಿದೆ. ಹೀಗಾಗಿ ಬಡಜನತೆ ರೇಷನ್ ಕೊಳ್ಳುವ ಶಕ್ತಿಯನ್ನು ಕಳೆದುಕೊಂಡಿದ್ದಾರೆ. ಹೀಗಾಗಿಯೆ ಒರಿಸ್ಸಾದ ಕಾಳಹಸ್ತಿಯಂಥಹ ಪಾರಂಪರಿಕ ಪ್ರದೇಶಗಳಿಗೆ ಮಾತ್ರವೆ ಸೀಮಿತಗೊಂಡಿದ್ದ ಹಸಿವಿನ ಸಾವುಗಳು ಇದೀಗ ಎಲ್ಲೆಡೆ ಸಂಭವಿಸುತ್ತಿವೆ. ಹಿಮಾಚಲ ಪ್ರದೇಶದ ಹೇರಳವಾಗಿ ಅಕ್ಕಿ ಬೆಳೆಯುವ ಕಾಂಗ್ರಾ ಜಿಲ್ಲೆಯಲ್ಲಿಯೂ ಹಸಿವಿನ ಸಾವುಗಳು ಸಂಭವಿಸಿವೆಯೆಂದ ಮೇಲೆ ಆಹಾರದ ಕ್ಷಾಮ ಎಷ್ಟಿರಬಹುದು ನೀವೇ ಊಹಿಸಿ.

ಬೆಂಬಲ ಬೆಲೆ ನೀಡಿ ರೈತರಿಂದ ಖರೀದಿಸುವ, ಸಂರಕ್ಷಿಸುವ ಆಹಾರ ಧಾನ್ಯಗಳ ಪ್ರಮಾಣವು ಕಡಿಮೆಯಾಗಿದೆ. ಈನಿಟ್ಟಿನಲ್ಲಿ 2001-02ರಲ್ಲಿ 206.30 ಲಕ್ಷ ಗೋಧಿ ಸಂಗ್ರಹಣೆ ಮಾಡಿದ್ದರೆ 2002-03ರಲ್ಲಿ ಈ ಪ್ರಮಾಣ 182.65 ಲಕ್ಷ ಟನ್‌ಗೆ ಕುಸಿದಿದೆ.




ಬಡವರು ಸತ್ತಾರೆ ಸುಡಲಿಕ್ಕ ಸೌದಿಲ್ಲ ಬಡವಂಗೆ ಸಾವ ಕೊಡಬ್ಯಾಡೋ.....

ಒಮ್ಮೆ ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನಲ್ಲಿ 'ಜನವಾದಿ'ಯ ತಾಲ್ಲೂಕು ಸಮಿತಿ ಸಭೆ ನಡೆಯುತ್ತಿತ್ತು. ರೇಷನ್ ಸಮಸ್ಯೆಯ ಅಜೆಂಡಾವನ್ನಿಟ್ಟು ಚರ್ಚೆ ಮಾಡುವಾಗ ತಾಲ್ಲೂಕು ಸಮಿತಿ ಸದಸ್ಯೆ ರತ್ನಮ್ಮ ಎಂಬಾಕೆ ಅಳುವುದಕ್ಕೇ ಪ್ರಾರಂಭಿಸಿಬಿಟ್ಟರು. ಕಾರಣವೇನೆಂದರೆ ಆಕೆ ವಾಸ ಮಾಡುವ (ಮಾಗನೂರು) ಕೇರಿ ಪೂರ್ತಿ ಖಾಲಿಯಾಗಿ ಊರು ಭಣಗುಟ್ಟುತ್ತಿರುವುದು. ಅವರೆಲ್ಲರು ಬೇಸಾಯಕ್ಕೆ ಪೂರಕವಾದ ಬಿದರಿನ ಕೆಲಸ ಮಾಡುತ್ತಿದ್ದವರು. ಬರ ಆವರಿಸಿದ ಹಿನ್ನೆಲೆಯಲ್ಲಿ ಬೇಸಾಯ ನಿಂತು ಇವರು ತಯಾರಿಸಿದ ಸಾಮಗ್ರಿಗಳನ್ನು ಕೊಳ್ಳುವಂತಿಲ್ಲದಾದರು. ಹಸಿವಿನ ಪ್ರಶ್ನೆ ಎದುರಾಗಿ ಎಲ್ಲರೂ ಊರು ಬಿಡುವ ನಿರ್ಧಾರ ಮಾಡಿ ಬೆಂಗಳೂರನ್ನು ಸೇರಿ ಕೂಲಿ ಮಾಡತೊಡಗಿದರು. ಸಣ್ಣ ಪುಟ್ಟ ಶೆಡ್ಡುಗಳಲ್ಲಿ ವಾಸವಿದ್ದು ಕೂಲಿ ಮಾಡುವ ಇವರನ್ನು ನೆನೆದು ರತ್ನಮ್ಮ ಬಿಕ್ಕಿ ಬಿಕ್ಕಿ ಅತ್ತಳು. ಇದೇ ಊರಿನ ಯುವತಿ ಅಂಬುಜಾಕ್ಷಿ ಎನ್ನುವವಳು ಬಡತನದ ಬೇಗೆ ತಾಳಲಾರದೆ ಕುಡುಕ ಗಂಡ ಎರಡು ಮುದ್ದು ಮಕ್ಕಳನ್ನು ಬಿಟ್ಟು ಉರುಳಿಗೆ ಶರಣಾದಳು. ಅಂತ್ಯ ಸಂಸ್ಕಾರ ಮಾಡುವಾಗ ವಿಧಿಗಾಗಿ ಮನೆಯೆಲ್ಲಾ ಜಾಲಾಡಿದರು ನಾಲ್ಕು ಕಾಳು ಅಕ್ಕಿ ಸಿಗದೆ ವಿಧಿಯಿಲ್ಲದೆ ಮಣ್ಣು ಮಾಡಿದರು. ಬಡವರು ಬದುಕಿದರೂ ಕಷ್ಟ ಸತ್ತರೂ ಕಷ್ಟ. ಒಂದು ಬಲವಾದ ಪ್ರಶ್ನೆ ಎಲ್ಲರನ್ನು ಕಾಡುತ್ತಿದೆ. "ಇದು ಪ್ರಾಕೃತಿಕ ಬರಗಾಲವೊ ಸರ್ಕಾರಿ ನಿರ್ಮಿತ ಕ್ಷಾಮವೊ"

ಮಕ್ಕಳಿಗಿಲ್ಲದ ಆಹಾರ ಇಲಿ ಹೆಗ್ಗಣಗಳಿಗೇಕೆ...

6-14 ವಯಸ್ಸಿನ ಶೇ. 63 ಕ್ಕಿಂತ ಹೆಚ್ಚಿನ ಮಕ್ಕಳು ಖಾಲಿ ಹೊಟ್ಟೆಯಲ್ಲಿ ಪ್ರತಿದಿನ ಶಾಲೆಗೆ ಹೋಗುತ್ತಾರೆ. 40 ಮಿಲಿಯನ್ ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ. ಈ ಮಕ್ಕಳ ಸಲುವಾಗಿ ಮಧ್ಯಾಹ್ನದ ಬಿಸಿ ಊಟಕ್ಕೆ ವ್ಯವಸ್ಥೆ ಮಾಡಿ ಪೌಷ್ಠಿಕ ಹಾಗೂ ಶೈಕ್ಷಣಿಕ ಗುಣಮಟ್ಟವನ್ನು ಉತ್ತಮಪಡಿಸಲು ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ. ಎಲ್ಲ ರಾಜ್ಯಗಳು ಇದನ್ನು ಏಕಪ್ರಕಾರವಾಗಿ ಜಾರಿಗೊಳಿಸಲಿಲ್ಲ. ಕೋರ್ಟಿನ ನಿರ್ದೇಶನಕ್ಕಿಂತ ಮುಂಚಿತವಾಗಿಯೇ ಈ ಯೋಜನೆಯನ್ನು ಜಾರಿಗೊಳಿಸಿದ್ದ ಕೇರಳ, ತಮಿಳುನಾಡುಗಳನ್ನು ಹೊರತುಪಡಿಸಿ ಕೆಲವೇ ರಾಜ್ಯಗಳು ಕೋರ್ಟಿನ ನಿರ್ದೇಶನಕ್ಕೆ ಮಾನ್ಯತೆ ನೀಡಿವೆ. ಕರ್ನಾಟಕ ಸರ್ಕಾರವು ಉತ್ತರ ಕರ್ನಾಟಕದ ಕೆಲವೇ ಜಿಲ್ಲೆಗಳಲ್ಲಿ ಇದನ್ನು ಜಾರಿಗೆ ತಂದಿದೆ. ಫ್ಲೇವಿನ್ ಲಾಟರಿಯ ಆದಾಯದಲ್ಲಿ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಊಟ ನೀಡುವ ವ್ಯವಸ್ಥೆ ಸಾಧ್ಯವಾಗುತ್ತಿದೆಯೆಂದು ಹೇಳಲಾಗುತ್ತಿದೆ. ಹಾಗಿದ್ದರೆ ಗೋಡಾನಿನಲ್ಲಿರುವ ಆಹಾರ ಇಲಿ ಹೆಗ್ಗಣಗಳ ಹೊಟ್ಟೆ ತುಂಬಿಸುವುದಕ್ಕಾ. ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ಆಹಾರ ಧಾನ್ಯಗಳನ್ನು ಬಿಡುಗಡೆ ಮಾಡಿಸಿ ಕನಿಷ್ಠ ಮಕ್ಕಳ ಹಸಿವನ್ನಾದರೂ ನೀಗಬೇಕಾದ ಜವಾಬ್ದಾರಿ ರಾಜ್ಯ ಸರ್ಕಾರಕ್ಕಿದೆ. ಬಿಡುಗಡೆ ಮಾಡಬೇಕಾದ ಹೊಣೆಗಾರಿಕೆ ಕೇಂದ್ರ ಸರ್ಕಾರಕ್ಕಿದೆ. ಪಡಿತರ ವ್ಯವಸ್ಥೆಯನ್ನು ವಿಸ್ತರಿಸುವ ನಿಟ್ಟಿನಲ್ಲಿ ಹೆಚ್ಚೆಚ್ಚು ಹಸಿರು ಹಳದಿ ಕಾರ್ಡುಗಳನ್ನು ವಿತರಿಸುವ ಬದಲು ಪ್ರಸ್ತುತ ಸರ್ಕಾರಗಳು ಕುತಂತ್ರ ನೀತಿಗಳನ್ನು ಅನುಸರಿಸುತ್ತಿರುವುದು ಖಂಡನೀಯ ವಿಚಾರ. ಹಸಿರು ಕಾರ್ಡು ನೀಡುವ ಹೆಸರಿನಲ್ಲಿ ಕೆಂಪು ಕಾರ್ಡನ್ನು, ಹಳದಿ ಕಾರ್ಡನ್ನು ನೀಡುವ ಹೆಸರಿನಲ್ಲಿ ಹಸಿರು ಕಾರ್ಡನ್ನು ಕಸಿಯಲು ಸರ್ಕಾರ ಹೊರಟಿವೆ. ಕಾರ್ಡುದಾರರ ಸಂಖ್ಯೆಯನ್ನು ಕಡಿತಗೊಳಿಸಲು ಯೋಜಿಸಲಾಗಿದೆ.



ದೇಶವೆಲ್ಲಾ ಬರಾವೃತವಾಗಿರುವಾಗ ಅಂತ್ಯೋದಯ ಯೋಜನೆಯನ್ನು ದೇಶದೆಲ್ಲೆಡೆ ಹೆಚ್ಚೆಚ್ಚು ವಿಸ್ತರಿಸುವ ಕೆಲಸವನ್ನು ಕೈಗೆತ್ತಿಕೊಳ್ಳಬೇಕು. ಕೂಲಿಗಾಗಿ ಕಾಳು ಯೋಜನೆಯನ್ನು ಭ್ರಷ್ಟ ಮುಕ್ತಗೊಳಿಸಿ ಜನರ ಬಳಿಗೆ ಕೊಂಡೊಯ್ಯಬೇಕು, ಹೊಸ ಹೊಸ ಉದ್ಯೋಗಗಳು ಕಾಮಗಾರಿಗಳನ್ನು ರೂಪಿಸಬೇಕು, ಭೂಹಂಚಿಕೆಯ ಮೂಲಕ ಬಡವರ ಬದುಕನ್ನು ಕಾಪಾಡಬೇಕು. ಮಕ್ಕಳಲ್ಲಿ ಪೌಷ್ಠಿಕತೆಯನ್ನು ಹೆಚ್ಚಿಸುವ ಕಾರ್ಯಕ್ರಮಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು. ಇವೆಲ್ಲ ಸಾಕಾರಗೊಳ್ಳುವ ನಿಟ್ಟಿನಲ್ಲಿ ಶೇಖರಣೆಯಾಗಿರುವ 6 ಕೋಟಿ ಟನ್ ಆಹಾರ ಧಾನ್ಯಗಳನ್ನು ಗೋಧಾಮುಗಳಿಂದ ಬಿಡುಗಡೆಗೊಳಿಸಬೇಕು. ಇಲ್ಲವಾದರೆ 'ಆಹಾರದ ಹಕ್ಕು' ಜನರಿಂದ ದೂರವಾಗಿ ಇಲಿ ಹೆಗ್ಗಣಗಳ ಪಾಲಾಗುತ್ತದೆ.

ಹೊಟ್ಟೆ ಮತ್ತು ರೊಟ್ಟಿ

ಕವಿತೆ ಎಂದರೆ
ನನಗೆ ಪಂಚಪ್ರಾಣ
ರೊಟ್ಟಿ ಅದರ ತ್ರಾಣ

ಮಹಾಕಾವ್ಯ ಮತ್ತು ರೊಟ್ಟಿ
ಎರಡರಲ್ಲಿ ಒಂದರ ಆಯ್ಕೆ
ಎಂದಾದರೆ
ನನಗೆ ರೊಟ್ಟಿಯೇ ಇರಲಿ.

ಹೊಟ್ಟೆ
ಬೆನ್ನಿಗೆ ಹತ್ತಿದಾಗ
ನೆತ್ತಿ ಕಾಲ ಕೆಳಗಿರುತ್ತದೆ.

ಖಾಲಿ ಹೊಟ್ಟೆಯ ಕಂಡು
ಕಿಲ ಕಿಲ ನಕ್ಕೋತ
ಒಣ ಕರುಳುಗಳ ಒಳಗೆ
ಕಿಡಿಯೆಬ್ಬಿಸುವ ಬೆಳದಿಂಗಳು
ಚಂದಪ್ಪ... ಸೆಟ್‌ದ್ಹೋಗ
ನಿನ್ನ ಹೆಣ ಎತ್ತಾ.

ಬಿ.ಪೀರ್‌ಬಾಷ
ಹೂವಿನ ಹಡಗಲಿ

ಕೇರಳದ ತ್ರಿಶೂರ್‌ನಲ್ಲಿ ಜರುಗಿದ ಕೃಷಿ ಕೂಲಿಕಾರರ ಅಖಿಲ ಭಾರತ ಸಮ್ಮೇಳನವು ದೇಶದ ಕಾರ್ಷಿಕ ರಂಗದ ಹಾಗೂ ಅತ್ಯಂತ ಶೋಷಣೆಗೆ ಒಳಗಾದ ಕೃಷಿ ಕೂಲಿಕಾರರ ಪ್ರಮುಖ ಸಮಸ್ಯೆಗಳ ಬಗ್ಗೆ ಆಳವಾಗಿ ವಿಶ್ಲೇಷಿಸಿತು. ಇಂತಹ ಸಂದರ್ಭದಲ್ಲಿ ಬೆಳೆಯುತ್ತಿರುವ ಧೀರೋದ್ಧಾತ ಚಳುವಳಿ, ಮುಂದಿನ ಹಾದಿ ಬಗ್ಗೆ ಸಮ್ಮೇಳನದ ವರದಿಯಿಲ್ಲಿದೆ

ವರದಿ - ನಿತ್ಯಾನಂದಸ್ವಾಮಿ



ಕೃಷಿ ಕೂಲಿಕಾರರ 5ನೇ ಅಖಿಲ ಭಾರತ ಸಮ್ಮೇಳನದ ಉದ್ಘೋಷ

ಅವಿರತ ಹೋರಾಟಕ್ಕೆ ಪರ್ಯಾಯವಿಲ್ಲ

ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ 5ನೇ ಅಖಿಲ ಭಾರತ ಸಮ್ಮೇಳನವು ಕೇರಳದ ತ್ರಿಶ್ಶೂರ್‌ನಲ್ಲಿ 2003 ಏಪ್ರಿಲ್ 4 ರಿಂದ 6 ವರೆಗೆ ಯಶಸ್ವಿಯಾಗಿ ಜರಗಿತು. ಸಮ್ಮೇಳನವು ಭಾರತದ ಅತ್ಯಂತ ಹೆಚ್ಚು ಶೋಷಣೆಗೊಳಗಾದ ಕೃಷಿ ಕೂಲಿಕಾರರ ಮತ್ತು ಬಡರೈತರ ಅನೇಕ ಪ್ರಮುಖ ಸಮಸ್ಯೆಗಳ ಕುರಿತು ವಿವರವಾದ ವಿಮರ್ಶೆ ನಡೆಸಿತು.

ಸಂಘದ 28 ಲಕ್ಷ ಸದಸ್ಯರನ್ನು ಪ್ರತಿನಿಧಿಸಿ 561 ಪ್ರತಿನಿಧಿಗಳು ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು. ಇವರಲ್ಲಿ 47 ಜನ ಮಹಿಳಾ ಪ್ರತಿನಿಧಿಗಳು. ಒಟ್ಟು 449 ಪ್ರತಿನಿಧಿಗಳು ಕೃಷಿ ಕೂಲಿಕಾರ ಮತ್ತು ಬಡ ರೈತ ಕುಟುಂಬಗಳಿಂದ ಬಂದವರಾಗಿದ್ದರು.

ಕೃಷಿ ಕ್ಷೇತ್ರದ ಬಿಕ್ಕಟ್ಟು ಆಳವಾಗುತ್ತಿದ್ದಂತೆ ದೇಶದಲ್ಲಿ ಇಂದು ಕೃಷಿ ಕೂಲಿಕಾರರ ಸಂಖ್ಯೆ ದಿನದಿಂದ ದಿನಕ್ಕೆ ಬೆಳೆಯುತ್ತಾ ಹೋಗುತ್ತಿದೆ. ಆರ್ಥಿಕವಾಗಿ ದಿವಾಳಿಯಾಗುತ್ತಿರುವ ಸಣ್ಣ ಮತ್ತು ಅಂಚಿನ ರೈತರು ತಮ್ಮ ಅಲ್ಪಸ್ವಲ್ಪ ಭೂಮಿಯನ್ನು ಮಾರಾಟಮಾಡಿ ಶ್ರೀಮಂತರೈತರ ಮತ್ತು ಭೂಮಾಲಕರ ಭೂಮಿಯಲ್ಲಿ ಕೂಲಿಕಾರರಾಗಿ ದುಡಿಯಬೇಕಾದ ಪರಿಸ್ಥಿತಿ ಉಂಟಾಗಿದೆ. 1951ರ ಜನಗಣತಿಯಲ್ಲಿ ಸುಮಾರು 3 ಕೋಟಿಯಷ್ಟು ಇದ್ದ ಕೃಷಿ ಕೂಲಿಕಾರರ ಸಂಖ್ಯೆ 2001ರ ಜನಗಣತಿಯಲ್ಲಿ 11 ಕೋಟಿಗೆ ಏರಿದೆ. 1991-2001ರ ನಡುವಿನ 10 ವರ್ಷಗಳ ಅವಧಿಯಲ್ಲಿ ಕೃಷಿ ಕೂಲಿಕಾರರ ಸಂಖ್ಯೆ ಸುಮಾರು 3 ಕೋಟಿಯಷ್ಟು ಹೆಚ್ಚಾಗಿದೆ. ಭೂಮಿ ಕಳೆದುಕೊಂಡ ಸಣ್ಣರೈತರು ಮಾತ್ರವಲ್ಲದೆ, ಒಕ್ಕಲೆಬ್ಬಿಸಲ್ಪಟ್ಟ ಗೇಣಿದಾರರು, ಒಕ್ಕಲೆಬ್ಬಿಸಲ್ಪಟ್ಟ ಅರಣ್ಯ ಭೂಮಿ ಸಾಗುವಳಿದಾರರು, ಮತ್ತು ಮುಚ್ಚಿದ ಸಣ್ಣ ಮತ್ತು ಮಧ್ಯಮ ಗಾತ್ರದ ಕಾರ್ಖಾನೆಗಳ ಕಾರ್ಮಿಕರು, ನೇಕಾರರು, ಕೃಷಿ ಕೂಲಿಕಾರರ ಸೈನ್ಯವನ್ನು ಅನಿವಾರ್ಯವಾಗಿ ಸೇರುತ್ತಿದ್ದಾರೆ.

ಗ್ರಾಮೀಣ ಬಡವರ ಸಮಸ್ಯೆಗಳು

ಸಮ್ಮೇಳನವು ಗ್ರಾಮೀಣ ಬಡವರ ಬದುಕಿನ ಬವಣೆಯನ್ನು ಗ್ರಹಿಸಿಕೊಳ್ಳುವ ಹೆಚ್ಚಿನ ಸಮಯವನ್ನು ವಿನಿಯೋಗಿಸಿತು. ಕೇಂದ್ರದಲ್ಲಿ ಕ್ರಮಾಗತವಾಗಿ ಅಧಿಕಾರವಹಿಸಿಕೊಂಡ ಸರ್ಕಾರಗಳು ಅನುಸರಿಸಿಕೊಂಡು ಬಂದ ಆರ್ಥಿಕ ನೀತಿಗಳಿಂದಾಗಿ, ಬಹುತೇಕ ರಾಜ್ಯಗಳಲ್ಲಿ ಕೃಷಿಕೂಲಿಕಾರರ ಉದ್ಯೋಗದ ಅವಕಾಶದಲ್ಲಿ ತೀವ್ರ ಕುಸಿತ ಉಂಟಾಗಿದೆ. ಕೃಷಿ ಉತ್ಪನ್ನಗಳ ಬೆಲೆ ಕುಸಿತದಿಂದ ಸಣ್ಣ ರೈತರು ಬಾರೀ ಹಾನಿ ಅನುಭವಿಸುವಂತಾಗಿದೆ. ಜನ ಹೊಟ್ಟೆಗಿಲ್ಲದೆ ಸಾಯುವ ಪರಿಸ್ಥಿತಿಯನ್ನು ಉಂಟುಮಾಡಿದ ಭೀಕರ ಬರ ಗ್ರಾಮೀಣ ಬಡವರ ಸಂಕಷ್ಟಗಳನ್ನು ಇನ್ನಷ್ಟು ತೀವ್ರಗೊಳಿಸಿದೆ.

ಕೇರಳ, ಪಶ್ಚಿಮ ಬಂಗಾಳ, ತ್ರಿಪುರಾ ರಾಜ್ಯಗಳನ್ನು ಹೊರತು ಪಡಿಸಿ ಬೇರೆ ಯಾವ ರಾಜ್ಯದಲ್ಲೂ ಕೃಷಿ ಕೂಲಿಕಾರರಿಗಾಗಿ ಸರ್ಕಾರ ನಿಗದಿಪಡಿಸಿದ ಕನಿಷ್ಟ ವೇತನ ಜಾರಿಯಲ್ಲಿಲ್ಲ. ಮಹಿಳಾ ಕೃಷಿ ಕೂಲಿಕಾರರಿಗೆ ಪುರುಷರೊಂದಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಲಾಗುವುದಿಲ್ಲ. ಕೃಷಿಕೂಲಿಕಾರರಿಗೆ ಯಾವುದೇ ಕಾನೂನು ರಕ್ಷಣೆ ಇಲ್ಲ. ಕಾರ್ಮಿಕರಿಗೆ ಅನ್ವಯಿಸುವ ಯಾವುದೇ ಕಲ್ಯಾಣ ಕಾರ್ಯಕ್ರಮ ಕೃಷಿ ಕೂಲಿಕಾರರಿಗೆ ವಿಸ್ತರಿಸಲಾಗಿಲ್ಲ.

ವಾಜಪೇಯಿ ಸರ್ಕಾರವು ಕೃಷಿ ಕೂಲಿಕಾರರಿಗೆ ಒಂದು ಸಮಗ್ರ ಕೇಂದ್ರೀಯ ಶಾಸನವನ್ನು ನಿರಾಕರಿಸುತ್ತಿರುವ ಪ್ರಥಮ ಸರ್ಕಾರ. ಅಂತಹ ಒಂದು ಕಾನೂನನ್ನು ಜಾರಿಗೆ ತಂದರೆ ಕಾರ್ಷಿಕ ಕ್ಷೇತ್ರದಲ್ಲಿ ಅಶಾಂತಿ ತಲೆದೋರುತ್ತದೆ ಎಂದು ಶ್ರೀಮಂತರ ಪರವಾದ ಬಿಜೆಪಿ ಸರ್ಕಾರ ವಾದಿಸುತ್ತಿದೆ. ಕೇರಳ ರಾಜ್ಯದಲ್ಲಿ ಇಂತಹ ಒಂದು ಕಾನೂನು 1974ರಿಂದಲೇ ಜಾರಿಯಲ್ಲಿದೆ. ಅಂದಿನಿಂದ ಗ್ರಾಮೀಣ ಕೇರಳದಲ್ಲಿ ಕಾರ್ಷಿಕ ಅಶಾಂತಿ ಮಾಯವಾಗಿ ಸಾಮಾಜಿಕ ನ್ಯಾಯ ನೆಲೆನಿಲ್ಲುವಂತಾಗಿದೆ. ಕೇರಳದ ಕೃಷಿ ಕೂಲಿಕಾರರ ಬಲಿಷ್ಠ ಸಂಘಟನೆ ಮತ್ತು ಸಮರಧೀರ ಹೋರಾಟಗಳ ಸಾಧನೆ ಇದಾಗಿದೆ. ಕೇರಳದ ಕೃಷಿ ಕಾರ್ಮಿಕರು ಇಂದು ಪಡೆಯುತ್ತಿರುವ ನಿವೃತ್ತಿವೇತನ ಮೊದಲಾದ ಕಲ್ಯಾಣ ಕಾರ್ಯಕ್ರಮಗಳು ಅಲ್ಲಿ ಅಧಿಕಾರಕ್ಕೆ ಬಂದಿದ್ದ ಸಿಪಿಐ(ಎಂ) ನೇತೃತ್ವದ ಎಡ ಪ್ರಜಾಸತ್ತಾತ್ಮಕ ರಂಗದ ಸರ್ಕಾರಗಳ ಕೊಡುಗೆಯಾಗಿದೆ.

ಕೃಷಿ ಕೂಲಿಕಾರರಿಗಾಗಿ ಒಂದು ಸಮಗ್ರ ಕೇಂದ್ರೀಯ ಕಾನೂನು ಸೇರಿದಂತೆ ಅವರಿಗೆ ಜೀವನಾವಶ್ಯಕ ಕನಿಷ್ಠ ಕೂಲಿ ಮತ್ತಿತರ ಸೌಲಭ್ಯಗಳಿಗಾಗಿ ದೇಶಾದ್ಯಂತ ವ್ಯಾಪಕವಾದ ಸಮರಧೀರ ಹೋರಾಟಗಳನ್ನು ನಡೆಸಲು ಸಮ್ಮೇಳನ ತೀರ್ಮಾನಮಾಡಿದೆ.


ಹೋರಾಟಗಳ ವರದಿ :

ಸಮ್ಮೇಳನದ ಚರ್ಚೆಯು ಕಳೆದ ಸಮ್ಮೇಳನದ ನಂತರದ ಐದಾರು ವರ್ಷಗಳಲ್ಲಿ ದೇಶಾದ್ಯಂತ ನಡೆಸಲಾದ ಅನೇಕ ಧೀರೋದಾತ್ತ ಹೋರಾಟಗಳ ಮೇಲೆ ಬೆಳಕು ಚೆಲ್ಲಿತು. ಕನಿಷ್ಠ ವೇತನ ಜಾರಿಗೆ ಒತ್ತಾಯಿಸಿ ಹಾಗೂ ಕೂಲಿ ಹೆಚ್ಚಳಕ್ಕೆ ಒತ್ತಾಯಿಸಿ ಈ ಅವಧಿಯಲ್ಲಿ ದೇಶಾದ್ಯಂತ 11 ಸಾವಿರಕ್ಕೂ ಹೆಚ್ಚು ಗ್ರಾಮಗಳಲ್ಲಿ ಚಳುವಳಿ ನಡೆಸಲಾಗಿದೆ. ತಮಿಳುನಾಡಿನಲ್ಲಿ 2000ನೇ ಸಾಲಿನಲ್ಲಿ ಕೃಷಿ ಕೂಲಿಕಾರರ ವೇತನ ಹೆಚ್ಚಳಕ್ಕಾಗಿ ವ್ಯಾಪಕ ಆಂದೋಲನವನ್ನು ನಡೆಸಲಾಗಿದೆ. ಸುಮಾರು 1200 ಗ್ರಾಮಗಳಲ್ಲಿ ಕೃಷಿ ಕೂಲಿಕಾರರಿಗೆ ಕೂಲಿ ಹೆಚ್ಚಳ ದೊರಕುವಂತಾಗಿದೆ.

2001ರಲ್ಲಿ ಸಂಘವು ಮಹಾರಾಷ್ಟ್ರದ ನಾಂದೇಡ್ ಮತ್ತು ಹಿಂಗೋಳಿ ಜಿಲ್ಲೆಗಳ ಬಾಳೆ ತೋಟ ಕೂಲಿಕಾರರ ಪ್ರಶ್ನೆಯನ್ನು ಎತ್ತಿಕೊಂಡಿತ್ತು. ಜಲಗಾಂವ್ ಜಿಲ್ಲೆಯಲ್ಲಿಯೂ ಇದೇ ರೀತಿಯ ಹೋರಾಟವನ್ನು ನಡೆಸಲಾಯಿತು. ಹೋರಾಟದ ಯಶಸ್ಸಿನಿಂದಾಗಿ ಕೂಲಿಕಾರರಿಗೆ ದಿನಗೂಲಿಯಲ್ಲಿ ಹತ್ತು ರೂಪಾಯಿಗಳಷ್ಟು ಹೆಚ್ಚಳ ದೊರೆಯಿತು.

ಆಂಧ್ರಪ್ರದೇಶದಲ್ಲಿ 2002ರಲ್ಲಿ, ಕೂಲಿ ಹೆಚ್ಚಳವನ್ನು ಒತ್ತಾಯಿಸಿ 2394 ಗ್ರಾಮಗಳಲ್ಲಿ ಕೃಷಿಕೂಲಿಕಾರರ ಸಂಘವು ಯಶಸ್ವಿ ಹೋರಾಟವನ್ನು ನಡೆಸಿತು. ಮುಂದಿನ ಅಖಿಲ ಭಾರತ ಸಮ್ಮೇಳನದ ಹೊತ್ತಿಗೆ ನಮ್ಮ ಚಟುವಟಿಕೆ ಮತ್ತು ಹೋರಾಟಗಳನ್ನು 30 ಸಾವಿರ ಗ್ರಾಮಗಳಿಗೆ ವಿಸ್ತರಿಸಲು ಸಮ್ಮೇಳನ ತೀರ್ಮಾನಮಾಡಿದೆ.

ಅಖಿಲ ಭಾರತ ಕೃಷಿ ಕೂಲಿಕಾರರ ಸಂಘವು 2001ರ ಸೆಪ್ಟೆಂಬರ್ ತಿಂಗಳಲ್ಲಿ ಭಾರತ ಆಹಾರ ನಿಗಮದ ಗೋದಾಮುಗಳಿಗೆ ಮುತ್ತಿಗೆ ಹಾಕಲು ಕರೆನೀಡಿದಾಗ ದೇಶಾದ್ಯಂತ 75 ಸಾವಿರಕ್ಕೂ ಹೆಚ್ಚು ಜನ ಕೂಲಿಕಾರರು ಈ ಚಳುವಳಿಯಲ್ಲಿ ಭಾಗವಹಿಸಿದ್ದರು. ಆರ್ಥಿಕ ಉದಾರೀಕರಣದ ನೀತಿಗಳನ್ನು ಅಂಗೀಕರಿಸಿದಂದಿನಿಂದ, ಬಡವರ ಆಹಾರ ಸಬ್ಸಿಡಿಯನ್ನು ಕಡಿತ ಮಾಡುವ ಮತ್ತು ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಕಳಚಿಹಾಕುವ ವ್ಯವಸ್ಥಿತ ಪಿತೂರಿ ನಡೆದಿದ[e] ಬಡವರ ಕೊಂಡುಕೊಳ್ಳುವ ಸಾಮರ್ಥ್ಯ ಕುಸಿಯುತ್ತಿರುವುದನ್ನು ಗಣನೆಗೆ ತೆಗೆದುಕೊಂಡ[u] ಸರ್ಕಾರ ರೇಷನ್ ದರಗಳನ್ನು ಇಳಿಸಬೇಕೆಂ[du] ಸಮ್ಮೇಳನವು ಸರ್ಕಾರವನ್ನು ಆಗ್ರಹಿಸಿದೆ. ಎ[ಲ್ಲಾ] ಕೃಷಿ ಕೂಲಿಕಾರರಿಗೆ 'ಅಂತ್ಯೋದಯ['] ದರಗಳಲ್ಲಿಯೇ ಆಹಾರದಾನ್ಯಗಳನ್ನು ಒದಗಿಸಬೇಕೆಂದು ಸಮ್ಮೇಳನವು ಒತ್ತಾಯಿಸಿ[ದೆ]. ಬರಗಾಲ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಂ[ಡು] ತಕ್ಷಣವೇ ದೇಶವ್ಯಾಪಿಯಾಗಿ ಕೂಲಿಗಾಗಿ ಕಾ[ಳು] ಯೋಜನೆಯನ್ನು ವ್ಯಾಪಕವಾಗಿ ಅನುಷ್ಠಾನಕ್ಕೆ ತಂ[ದು] ಕೃಷಿ ಕೂಲಿಕಾರರಿಗೆ ಬದಲಿ ಕೆಲಸದ ವ್ಯ[ವಸ್ಥೆ] ಮಾಡಬೇಕೆಂದು ಸಮ್ಮೇಳನವು ಕೇಂ[ದ್ರ] ಸರ್ಕಾರವನ್ನು ಆಗ್ರಹಪಡಿಸಿದೆ.



ನೂತನ ಅಧ್ಯಕ್ಷರಾಗಿ ಕಾಮ್ರೇಡ್ ಪಿ. ರಾಮಯ್ಯ ಪ್ರಧಾನ ಕಾರ್ಯದರ್ಶಿಯಾಗಿ ಕಾಮ್ರೇಡ್ ಎ. ವಿಜಯರಾಘವನ್ ಆಯ್ಕೆಯಾದರು


ಭೂಮಿ ಹೋರಾಟ

ಭೂಸುಧಾರಣೆಗಳ[ನ್ನು] ವಿಪರ್ಯಾಸಗೊಳಿಸುವ ಮತ್ತು ಮೂಲಕ ಭೂಮಿತಿ ಕಾನೂನುಗಳ[ನ್ನು] ಭೂಮಾಲಿಕರ ಪರವಾ[ಗಿ] ಬದಲಾಯಿಸುವ ಧೋರಣೆಗಳ ಕುರಿ[ತು] ಸಮ್ಮೇಳನ ಚರ್ಚಿಸಿತು. ಬಹುರಾಷ್ಟ್ರೀ[ಯ] ಕಂಪೆನಿಗಳು ಮತ್ತು ಶ್ರೀಮಂತ ತೋ[ಟ] ಮಾಲಿಕರ ಲಾಭಗಳು ಸಕಾ[ರ] ಭೂಮಿಯನ್ನು ಕಬಳಿಸ[ಲು] ಹೊಂಚುಹಾಕುತ್ತಿವೆ. ಕೈಗಾರೀಕರಣ ಹಾ[ಗೂ] ಅಭಿವೃದ್ಧಿ ಯೋಜನೆಗಳ ಹೆಸರಿನಲ್ಲಿ ಇದುವ[ರೆಗೆ] ಶೇ. 15 ರಷ್ಟು ಆದಿವಾಸಿಗಳನ್ನು ಅವ[ರು] ಶತಮಾನಗಳಿಂದ ವ್ಯವಸಾಯ ಮಾಡುತ್ತಾ ಬ[ಂದ] ಭೂಮಿಯಿಂದ ಹೊರಹಾಕಲಾಗಿದೆ. ಬಿ.ಜೆ.[ಪಿ.] ನೇತೃತ್ವದ ಕೇಂದ್ರ ಸರ್ಕಾರವು 2002, ಮೇ[...] ರಂದು ಒಂದು ಆದೇಶ ಹೊರಡಿಸಿ ಸುಮಾ[ರು] 13 ಲಕ್ಷ ಹೆಕ್ಟೇರ್ ಭೂಮಿಯಲ್ಲಿ ವ್ಯವಸಾ[ಯ] ಮಾಡಿಕೊಂಡು ಬಂದಿದ್ದ ಸುಮಾರು 15 [...] ಆದಿವಾಸಿಗಳನ್ನು ಮತ್ತಿತರ ಹಿಂದುಳಿದ ವರ್ಗ[ದ] ಜನರನ್ನು ಒಕ್ಕಲೆಬ್ಬಿಸಲು ಮುಂದಾಗಿದೆ. ಕೇರ[ಳದ] ಕಾಂಗ್ರೆಸ್ ನೇತೃತ್ವದ ಸರ್ಕಾರ ಆದಿವಾಸಿಗಳ [...] ಹೋರಾಟವನ್ನು ಪೊಲೀಸ್ ದೌರ್ಜನ್ಯದ ಮೂ[ಲಕ] ಹತ್ತಿಕ್ಕುವ ಪ್ರಯತ್ನ ಮಾಡಿತು.

ಇತ್ತೀಚಿನ ವರ್ಷಗಳಲ್ಲಿ ಯಶಸ್ವಿ [...] ಹೋರಾಟಗಳನ್ನು ನಡೆಸಿ ಸಾವಿರಾರು ಹೆಕ್ಟೇ[ರ್] ಹೆಚ್ಚುವರಿ ಭೂಮಿಯನ್ನು ಹಾಗೂ ಸಕಾ[ರ] ಭೂಮಿಯನ್ನು ವಶಪಡಿಸಿಕೊಂಡ ಅಖಿಲ ಭಾ[ರತ] ಕೃಷಿ ಕೂಲಿಕಾರರ ಸಂಘದ ಬಿಹಾರ, ಉ[ತ್ತರ] ಪ್ರದೇಶ, ಆಂಧ್ರಪ್ರದೇಶ, ತಮಿಳುನಾಡು ರಾ[ಜ್ಯ] ಘಟಕಗಳನ್ನು ಸಮ್ಮೇಳನ ಅಭಿನಂದಿಸಿ[ತು]. ಮುಂದಿನ ದಿನಗಳಲ್ಲಿ ಈ ಹೋರಾಟ[ಗಳನ್ನು] ಇನ್ನುಳಿದ ರಾಜ್ಯಗಳಲ್ಲಿಯೂ ವಿಸ್[ತರಿಸಿ] ತೀವ್ರಗೊಳಿಸಬೇಕೆಂದು ಸಮ್ಮೇಳನ ನಿರ್ಧರಿ[ಸಿತು].

ಯಾಂತ್ರೀಕರಣದ ವಿರುದ್ಧ :

ಪುಟ 1



ಪ್ರತಿನಿಧಿಗಳನ್ನುದ್ದೇಶಿಸಿ ಮಾತನಾಡುತ್ತಿರುವ ಸುರ್ಜಿತ್

ಬಿಜೆಪಿಯ ಇನ್ನೊಂದು ಕುತಂತ್ರದಾಟ

ಪುಟ 5 ರಿಂದ

ಬೇರೇನು ಮಾಡಬೇಕು? ನೇರವಾಗಿ ಕೇಳುವುದಾದರೆ ಭಾರತದ ಪಡೆಗಳು ಅಲ್ಲಿ ಬಾಡಿಗೆ ಸೈನಿಕರಂತೆ ವರ್ತಿಸಬೇಕೇ?

ತುಂಡಿಗಾಗಿ

ಆದರೂ ನಮ್ಮನ್ನಾಳುವ ಮಂದಿಗೆ ಮುಜುಗರವೇನೂ ಆಗುತ್ತಿಲ್ಲ. ಅಮೇರಿಕಾ ಇರಾಕಿನ ಮೇಲೆ ಯುದ್ಧವನ್ನು ಹರಿಯಬಿಡುವ ಮೊದಲೇ ಸಿಐಐ ಅಸೋಚಾಮ್ (assucham) ಮುಂತಾದ ದೊಡ್ಡ ಬಂಡವಾಳಶಾಹಿಗಳ ಸಂಸ್ಥೆಗಳು ಇರಾಕಿನ ಪುನರ್ರಚನೆಯ ಹೆಸರಲ್ಲಿ ತಮಗೂ ಕಾಂಟ್ರಾಕ್ಟ್‌ಗಳಲ್ಲಿ ಪಾಲು ಸಿಗಬಹುದೆಂದು ಆಶಿಸಿದ್ದರು. ಇವರಿಗೆ ಸಿಗಬಹುದಾದ್ದು ಕೆಲವು ರೊಟ್ಟಿ ತುಣುಕುಗಳಷ್ಟೇ ಎಂದು ನಂಬಲು ಆಗಲೂ ಬಹಳ ಕಾರಣಗಳಿದ್ದವು. ಬಹುಶಃ ನಮ್ಮ ದೊಡ್ಡ ಬಂಡವಾಳಶಾಹಿಗಳಿಗೆ ಇಷ್ಟು ಸಿಕ್ಕರೂ ಸಾಕು. ಇಂತಹ ಸನ್ನಿವೇಶದಲ್ಲಿ ಭಾರತ ಸರಕಾರ ತನ್ನ ಪಡೆಗಳನ್ನು ಇರಾಕಿಗೆ ಕಳಿಸುವುದು ಭಾರತದ ದೊಡ್ಡ ಬಂಡವಾಳಶಾಹಿಗಳ ಹಿತಾಸಕ್ತಿಗಳನ್ನು ಪೋಷಿಸಲಷ್ಟೆಯಲ್ಲದೆ ಬೇರೆ ರೀತಿಯಲ್ಲಿ ಭಾವಿಸಲು ಸಾಧ್ಯವೇ? ಆದರೆ ಇದು ಭಾರತ ದೀರ್ಘಕಾಲದಿಂದ ಯಾವ ಆದರ್ಶಗಳಿಗಾಗಿ ಹೋರಾಡುತ್ತಿತ್ತೋ ಅದಕ್ಕೆ ಅನುಗುಣವಾಗಿದೆಯೇ? ಬಿಜೆಪಿ ಮುಖಂಡರಿಗೆ ಇದರ ಬಗ್ಗೆ ಎಳ್ಳಷ್ಟು ಬೇಸರವಿದ್ದಂತಿಲ್ಲ. ನಿಜವಾಗಿ ಅಮೇರಿಕಾದೊಡನೆ ಕೈಜೋಡಿಸಿದ ಬ್ರಿಟಿಶರೇ ಈ ಬಗ್ಗೆ ಅವರಿಗಿಂತ ಹೆಚ್ಚು ಪ್ರಜ್ಞಾಶೀಲರಾಗಿದ್ದಾರೆ. ಈ ವಾರದ ವೇಳೆಗೆ ಇರಾಕ್ ವಿಷಯದ ಮೇಲೆ ಬ್ರಿಟಿಶ್ ಸಂಪುಟವನ್ನು ತೊರೆದವರ ಸಂಖ್ಯೆ ಮೂರಕ್ಕೇರಿದೆ.

ಹೊಲಸು ಕೂಟ

ಬ್ರಿಜೇಶ್ ಮಿಶ್ರ ತನ್ನ ಇತ್ತೀಚಿನ ಅಮೇರಿಕನ್ ಯಾತ್ರೆಯ ವೇಳೆಗೆ ಅಮೆರಿಕನ್ ಯೆಹೂದಿ ಸಮಿತಿಯ ಎದುರು ಒಂದಿಷ್ಟು ಸೂಚನೆಯನ್ನು ಮಂಡಿಸುವುದಾಗಿ ವರದಿಯಾಗಿದೆ. ಅದೆಂದರೆ ಅಮೇರಿಕಾ, ಇಸ್ರೇಲ್ ಮತ್ತು ಭಾರತ ಭಯೋತ್ಪಾದನೆಯ ವಿರುದ್ಧ ಒಂದು ಸಮರೂಪದ ಮಿಶ್ರಕೂಟವನ್ನು ರಚಿಸಬೇಕಂತೆ, ಈಗಿರುವ ಮಿಶ್ರಕೂಟ ವಿಷಯರೂಪದ್ದಂತೆ. ನಿರೀಕ್ಷಿಸಿದಂತೆ ಭಾರತ ಸರಕಾರ ಇಂತಹ ಯಾವುದೇ ಕೂಟವಿಲ್ಲ ಎಂದು ನಿರಾಕರಿಸಿದರೂ ಅದನ್ನು ಯಾರೂ ನಂಬುವ ಸ್ಥಿತಿಯಲಿಲ್ಲ. ಸೆಪ್ಟೆಂಬರ್ 11ರ ಘಟನೆಯ ಮೊದಲೇ ಈ ಸರಕಾರ ಭಯೋತ್ಪಾದನೆಯ ವಿರುದ್ಧ ಭಾರತ- ಇಸ್ರೇಲ್ ಸಹಕಾರದ ಮಾತಾಡುತ್ತಿತ್ತು. ಅದರರ್ಥ ಪ್ಯಾಲೆಸ್ಟೇನಿಯನ್ ಸ್ವಾತಂತ್ರ್ಯ ಹೋರಾಟಗಾರರು ಇಸ್ರೇಲಿ ಝಿಯೋನಿಸ್ಟರ ಮತ್ತು ನಮ್ಮ ಕೇಸರಿವಾಲಾಗಳ ಕಣ್ಣಲ್ಲಿ ಭಯೋತ್ಪಾದಕರು. ಇಸ್ರೇಲಿನ ಝಿಯೋನಿಸ್ಟರ ಬಗ್ಗೆ ಕೇಸರಿ ಪಡೆಗಳ ವಿಶೇಷ ಪ್ರೀತಿ ಹೊಸದೇನಲ್ಲ.


ಅಮೇರಿಕನ್ ಇಬ್ಬಂದಿತನ

ಇನ್ನು ಕಾಶ್ಮೀರದ ವಿಷಯದಲ್ಲಿ ಮಧ್ಯಸ್ಥಿಕೆ ನಡೆಸಲು ಅಮೆರಿಕಾ ಸಿದ್ಧವಿದೆ ಎಂಬ ಸೂಚನೆಗಳಿವೆ. ಆರ್ಮಿಟೇಜ್ ದಿಲ್ಲಿಯಲ್ಲಿ ಈ ಬಗ್ಗೆ ಏನೂ ಹೇಳಿಲ್ಲ ಎಂದು ವಿದೇಶಾಂಗ ವಕ್ತಾರರು ದೇಶಿಯರೂ ಅದು ನಂಬಲರ್ಹ ರೀತಿಯಲ್ಲಿಲ್ಲ. ಕಾಶ್ಮೀರದ ಬಗ್ಗೆ ಅಮೇರಿಕನ್ 'ಚಿಂತನಕಾರ'ನ ಇತ್ತೀಚಿನ ಯೋಜನೆಯೇನೆಂದು ತಿಳಿದಿಲ್ಲ. ಆದರೆ ಒಂದಂತೂ ಸ್ಪಷ್ಟ ಭಾರತ - ಪಾಕಿಸ್ತಾನ ಸಂಬಂಧಗಳನ್ನು ಕುರಿತಂತೆ ಅಮೆರಿಕಾ ಇಬ್ಬಂದಿ ನಿಲುವು ತಳೆದಿದೆ. ಭಾರತ ಸರಕಾರಕ್ಕೆ ಇನ್ನೂ ಇದರ ಅರಿವಾದಂತಿಲ್ಲ. (ಅಥವಾ ಅದು ಅರಿಯಬಯಸುವುದಿಲ್ಲವೇ) ಎರಡು ವಾರಗಳ ಹಿಂದೆಯಷ್ಟೇ ಅಮೇರಿಕನ್ ವಿದೇಶಾಂಗ ಇಲಾಖೆ ಪಾಕಿಸ್ತಾನ ಗಡಿಯಾಚೆ ಭಯೋತ್ಪಾದನೆಗೆ ಪ್ರೋತ್ಸಾಹ ನೀಡುತ್ತಿದೆ ಎಂದು ಆಪಾದಿಸುತ್ತಾ, ಅದೇ ಉಸಿರಿನಲ್ಲಿ ಪಾಕಿಸ್ತಾನ ಭಯೋತ್ಪಾದನೆಯ ವಿರುದ್ಧ ಜಾಗತಿಕ ಸಮರದಲ್ಲಿ ಸಹಕರಿಸುತ್ತಿರುವುದರಿಂದ ಅದರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳಲು ಸಾಧ್ಯವಿಲ್ಲ ಎಂದಿದೆ. ಮೇ 7 ರಂದು, ಆರ್ಮಿಟೇಜ್ ನಮ್ಮ ಉಪಖಂಡದಲ್ಲಿ ಬಂದಿಳಿಯುವ ಒಂದು ದಿನದ ಹಿಂದೆಯಷ್ಟೇ ಅಮೇರಿಕನ್ ಸಂಸದೀಯ ಸಮಿತಿ ಒಂದು ತಿದ್ದುಪಡಿಯನ್ನು ಶಿಫಾರಸು ಮಾಡಿದೆ. ಪಾಕಿಸ್ತಾನ ತನ್ನ ಪ್ರದೇಶದಲ್ಲಿ ಭಯೋತ್ಪಾದಕ ತರಬೇತಿ ಕೇಂದ್ರಗಳನ್ನು ಕಳಚಿಹಾಕದಿದ್ದರೆ, ಭಾರತದೊಡನೆ ನುಸುಳಿಸುವುದನ್ನು ನಿಲ್ಲಿಸದಿದ್ದರೆ ಮತ್ತು 'ಪಟಿಂಗ' ದೇಶಗಳಿಗೆ ಪರಮಾಣು ತಂತ್ರಜ್ಞಾನಗಳನ್ನು ಒದಗಿಸುತ್ತಲೇ ಇದ್ದರೆ ಹೆಚ್ಚಿನ ಒತ್ತಡ ಎದುರಿಸಬೇಕಾಗುತ್ತದೆ ಎಂದು ಈ ತಿದ್ದುಪಡಿ ಹೇಳಿದರೂ ಭಯೋತ್ಪಾದನೆಯ ವಿರುದ್ಧ ಅದರ ಪಾತ್ರವನ್ನು ಹಾಡಿ ಹೊಗಳಿದೆ. ಅಷ್ಟೇ ಅಲ್ಲ, ಪಾಕಿಸ್ತಾನ ಮೇಲೆ ಹೇಳಿದ ಮೂರು ಶರತ್ತುಗಳನ್ನು ಪಾಲಿಸದಿದ್ದರೆ ಯಾವ ರೀತಿಯ ಒತ್ತಡ ಹಾಕಲಾಗುತ್ತದೆ ಎಂಬುದನ್ನು ಈ ತಿದ್ದುಪಡಿ ಸ್ಪಷ್ಟಪಡಿಸುವುದಿಲ್ಲ.

ಇದರರ್ಥ ಸ್ಪಷ್ಟ ಅಮೆರಿಕನ್ ಸಾಮ್ರಾಜ್ಯಶಾಹಿಗಳು ಭಾರತವನ್ನು ತಮ್ಮ ಪ್ರಭಾವ ವಲಯದೊಳಗೆ ಸೆಳೆಯಬಯಸುತ್ತಾರೆ, ಆದರೆ ಪಾಕಿಸ್ತಾನವನ್ನು ಕೈಬಿಡಲು ಅಥವಾ ಒಂದು ಮಟ್ಟದ ನಂತರ ನೋಯಿಸಲು ಕೂಡ ಸಿದ್ದರಿಲ್ಲ. ಏಕೆಂದರೆ ಅದು ಈ ಉಪಖಂಡದಲ್ಲಿ ಅದರ ನಂಬಿಕಸ್ತ ಮಿತ್ರವಾಗಿದೆ. ಭಾರತ ಸರಕಾರ ಇದರಿಂದ ಪಾಠ ಕಲಿಯಲು ಸಿದ್ಧವಿಲ್ಲ. ತಾನು ವಾಷಿಂಗ್ಟನ್ ಎದುರು ಸಾಷ್ಟಾಂಗ ನಮಸ್ಕಾರ ಹಾಕಿದರೆ ಪಾಕಿಸ್ತಾನದೊಂದಿಗೆ ತಿಕ್ಕಾಟದಲ್ಲಿ ಭಾರತವನ್ನು ಅಮೆರಿಕಾ ಬೆಂಬಲಿಸಬಹುದೆಂದು ವ್ಯರ್ಥ ನಿರೀಕ್ಷೆ ಈ ಸರಕಾರದ್ದು.

ಮಂದದೃಷ್ಟಿ

ಬ್ರಿಜೇಶ್ ಮಿಶ್ರರ ಸೂಚನೆಯ ಹಿಂದಿರುವುದು ಕೂಡ ಇದೇ ಆಶಯ. "ಭಯೋತ್ಪಾದನೆಯ ವಿರುದ್ಧ ಪ್ರಸಕ್ತ ಮಿತ್ರಕೂಟ ವಿಷಮರೂಪದ್ದಾಗಿದೆ., ಏಕೆಂದರೆ ಅದರಲ್ಲಿ ಭಾರತದ ಬದಲು ಪಾಕಿಸ್ತಾನವಿದೆ. ಪಾಕಿಸ್ತಾನವನ್ನು ಹೊರಗೆಸೆದು ಭಾರತವನ್ನು



ಸೇರಿಸಿಕೊಳ್ಳಿ, ಆ ಮಿತ್ರಕೂಟ ಸಮರೂಪದ್ದಾಗುತ್ತದೆ'! ಇದು ಬ್ರಿಜೇಶ್ ಮಿಶ್ರರ ಯೋಜನೆಯಿರಬೇಕು. ಒಟ್ಟಾರೆಯಾಗಿ ಹೇಳುವುದಾದರೆ ಈ ಭಯೋತ್ಪಾದನೆಯ ವಿರುದ್ಧ ಮಿತ್ರಕೂಟ' ಪಾಕಿಸ್ತಾನ - ವಿರೋಧಿ, ಇಸ್ಲಾಂ-ವಿರೋಧಿ ಉದ್ದೇಶದಿಂದ ರಚಿಸುವ ಕೂಟ. ಈಗ ಅಡ್ವಾಣಿಯವರು ಅಮೆರಿಕನ್ ಉಪಾಧ್ಯಕ್ಷ ಡಿಕ್ ಚೆನಿಯರ ಅತಿಥಿಯಾಗಿ ವಾಶಿಂಗ್ಟನ್‌ಗೆ ಹೋಗಲು ಒಪ್ಪಿದ್ದಾರೆ. ಬ್ರಿಜೇಶ್ ಮಿಶ್ರಾರ 'ಸಮರೂಪದ ಕೂಟ' ಯೋಜನೆಗೆ ಅವರೇನು ರೂಪ ಕೊಡುತ್ತಾರೆ ನೋಡೋಣ. ಆದರೂ ಭಾರತ ಸರಕಾರದ ಈ ವ್ಯರ್ಥ ನಿರೀಕ್ಷೆಗೆ ಅಮೆರಿಕಾ ತಣ್ಣೀರೆರಚಿದರೆ, ಅದಾಗ ಫಲವಿಲ್ಲದ ವಾದ ಎನಿಸಿಕೊಳ್ಳಲಿಕ್ಕಿಲ್ಲವೇ?

ಭಾರತ ಸರಕಾರದ ಈ ನಿಲುವಿನಲ್ಲಿನ ಒಂದೇ ಸಮಸ್ಯೆಯೆಂದರೆ ಅದು ಭಾರತದ ದೀರ್ಘ ಕಾಲದ ಸರ್ವಸಮ್ಮತಿಯ ವಿದೇಶಾಂಗ ಧೋರಣೆಯ ತತ್ವಗಳಿಗೆ ವಿರುದ್ಧವಾಗಿದೆ. ಈ ಧೋರಣೆಯಿಂದ ಭಾರತಕ್ಕೆ ಬಹಳ ಪ್ರಯೋಜನವಾಗಿದೆ. ಬೇರೆ ವಿಷಯಗಳಲ್ಲಿ ನಮ್ಮ ಭಿನ್ನಾಭಿಪ್ರಾಯಗಳೇನೇ ಇದ್ದರೂ ಸಾಮ್ರಾಜ್ಯಶಾಹಿ ವಿರೋಧ, ರಾಷ್ಟ್ರೀಯ ವಿಮೋಚನಾ ಆಂದೋಲನಗಳಿಗೆ ಬೆಂಬಲ, ಸಂಪೂರ್ಣ ನಿಶ್ಶಸ್ತ್ರೀಕರಣ ಮತ್ತು ವಿಶ್ವ ಶಾಂತಿಯ ಪ್ರಶ್ನೆಗಳ ಮೇಲೆ ಭಾರತದ ಸಾರ್ವಜನಿಕ ಅಭಿಪ್ರಾಯ ಒಂದೇ ಆಗಿತ್ತು. ಕೆಲವು ಸಣ್ಣ ಪುಟ್ಟ ಗುಂಪುಗಳನ್ನು ಬಿಟ್ಟರೆ ಇದು ವಿಶ್ವದಲ್ಲಿ ಭಾರತಕ್ಕೆ ಅಪಾರ ಪ್ರತಿಷ್ಠೆ ತಂದಿತ್ತು. ನೆಲ್ಸನ್ ಮಂಡೇಲಾ ಜೈಲಿನಿಂದ ಹೊರಬಂದಮೇಲೆ ಅವರ ಪ್ರಥಮ ವಿದೇಶಿ ಪ್ರಯಾಣ ಭಾರತಕ್ಕೇ ಮತ್ತು ನಮೀಬಿಯಾದ ಸ್ವಾತಂತ್ರ್ಯ ಸಮಾರಂಭದಲ್ಲಿ ಭಾರತದ ಮುಖಂಡರು ಗೌರವಾನ್ವಿತ ಅತಿಥಿಗಳಾಗಿದ್ದರು. ಆದರೆ ಈಗ ಈ ಎಲ್ಲದಕ್ಕೆ ಸಂಚಕಾರ ಬಂದಿದೆ. ನವದೆಹಲಿಯಲ್ಲಿ ಇಂದು ಸ್ವತಂತ್ರ ಭಾರತದ ಅತ್ಯಂತ ನಾಚಿಕೆಹೀನ ಸಾಮ್ರಾಜ್ಯಶಾಹಿ ಪರ ಆಡಳಿತವಿದೆ.

ಆದರೆ ಜನರೂ ನಿದ್ದೆಮಾಡುತ್ತಿಲ್ಲ. ನಮ್ಮ ಅಂತರ್ರಾಷ್ಟ್ರೀಯ ಪ್ರತಿಷ್ಟೆಗೆ ಬಂದಿರುವ ಸಂಚಕಾರದ ಅರಿವು ಭಾರತದ ಪ್ರಜ್ಞಾವಂತರಿಗಿದೆ. ಇರಾಕ್ ವಿರುದ್ಧ ಅಮೆರಿಕಾ ಬ್ರಿಟನ್ ಆಕ್ರಮಣದ ವಿರುದ್ಧ ಇತರ ದೇಶಗಳಂತೆ ಭಾರತದಲ್ಲೂ ವ್ಯಾಪಕ ಪ್ರತಿಭಟನೆ ವ್ಯಕ್ತವಾಗಿದೆ. ವೆಬ್‌ಸೈಟ್‌ಗಳಲ್ಲಿ ಪತ್ರಿಕೆಯ ಅಭಿಪ್ರಾಯ ಸಂಗ್ರಹಣೆ, ಪತ್ರಿಕೆಯ ಕಾಲಂಗಳಲ್ಲಿ ವ್ಯಕ್ತವಾದ ಅಭಿಪ್ರಾಯಗಳು, ಟಿ.ವಿ. ಚಾನೆಲ್‌ಗಳಲ್ಲಿನ ವಿವಿಧ ಕಾರ್ಯಕ್ರಮಗಳಲ್ಲಿ ಭಾರತ ಸರಕಾರ ಸಾಮ್ರಾಜ್ಯಶಾಹಿಗಳಿಗೆ ಅಡಿಬಿದ್ದಿರುವ ಬಗ್ಗೆ ಜಿಗುಪ್ಸೆ ಸಾಕಷ್ಟು ಪ್ರಮಾಣದಲ್ಲಿ ಮುಕ್ತವಾಗಿದೆ.

ನಮ್ಮ ಜನಗಳಲ್ಲಿ ಇರುವ ಈ ಜಿಗುಪ್ಸೆಯನ್ನು ಕ್ರೋಢೀಕರಿಸಲು ಪ್ರಜಾಪ್ರಭುತ್ವವಾದಿ ಶಕ್ತಿಗಳು ಮುಂದೆ ಬರುತ್ತವೆಯೇ? ■

ಸಂಭ್ರಮದ ಮೇ ದಿನಾಚರಣೆ

'ನೀನು ಹರಿಸಿದ ರಕ್ತ ವ್ಯರ್ಥವಲ್ಲವೋ ಅಣ್ಣಾ, ಆ ನಿಮ್ಮ ತ್ಯಾಗದ ಸಂಕೇತ ಈ ನಮ್ಮ ಸಂಘಟನೆ' ಮೇ ದಿನದಂದು ಜಗತ್ತಿನಾದ್ಯಂತ ಮೊಳಗಿದ ಘೋಷಣೆಯ ಪ್ರತೀಕ ಇದು.

ಕರ್ನಾಟಕದಲ್ಲಿಯೂ ಈ ಬಾರಿ ವಿಶೇಷ ವಿಜೃಂಭಣೆಯಿಂದ ಮೇ ದಿನಾಚರಣೆಗಳು ನಡೆದ ವರದಿಗಳು ಬಂದಿವೆ. ಈ ಬಾರಿಯ ವಿಶೇಷವೆಂದರೆ ಕಾರ್ಮಿಕರಲ್ಲದೆ ರೈತ ಕೃಷಿ ಕೂಲಿಕಾರರ ಸಂಘಟನೆಗಳು ಮೇ ದಿನ ಆಚರಣೆ ನಡೆಸಿವೆ. ಸಾಮಾನ್ಯವಾಗಿ ಮೇ ದಿನದಿಂದ ದೂರವಿರುತ್ತಿದ್ದ ಜನತಾದಳ, ಕಾಂಗ್ರೆಸ್, ಪಕ್ಷಗಳೂ ತಮ್ಮ ಕಚೇರಿಗಳಲ್ಲಿ ಮೇ ದಿನವನ್ನು ಆಚರಿಸಿವೆ. ದುಡಿಯುವ ಜನರ ಧ್ವನಿಗೆ ಇನ್ನಷ್ಟು ಪ್ರೇರಣೆ ಸಿಕ್ಕಿದಂತಾಯ್ತು.

ಬಿಜೆಪಿ ನೇತೃತ್ವದ ಕೇಂದ್ರ ಸರಕಾರವು ಅನುಸರಿಸುತ್ತಿರುವ ಐ.ಎಂ.ಎಫ್. ವಿಶ್ವಬ್ಯಾಂಕ್, ಡಬ್ಲ್ಯುಟಿಓ ಎಂಬ ತ್ರಿಮೂರ್ತಿಗಳಿಂದ ಪ್ರೇರಿತವಾದ ಆರ್ಥಿಕ ನೀತಿಯ ವಿರುದ್ಧ ಮೇ 21 ರಂದು ದೇಶದಾದ್ಯಂತ ಮುಷ್ಕರ ನಡೆಸುವ ಕಾರ್ಮಿಕ ಸಂಘಗಳ ನಿರ್ಧಾರದ ಹಿನ್ನೆಲೆಯಲ್ಲಿ ಮೇ ದಿನಾಚರಣೆಗೆ ಇನ್ನಷ್ಟು ಮಹತ್ವ ಬಂದಿತ್ತು. ಅಮೇರಿಕಾದ ಯುದ್ಧ ಕೋರ ನೀತಿಯ ವಿರುದ್ಧ, ಜನರ ಐಕ್ಯತೆ ಮುರಿಯುವ ಕೋಮುವಾದದ ವಿರುದ್ಧ ಹೋರಾಟ ಮಾಡಿಗಳಿಸಿದ ಹಕ್ಕುಗಳನ್ನು ಕಸಿದುಕೊಳ್ಳಲು ಕಾರ್ಮಿಕ ಕಾನೂನುಗಳ ತಿದ್ದುಪಡಿ ವಿರುದ್ಧ ಸಮರ ಸಾರಬೇಕೆಂದು ಕಾರ್ಮಿಕರು ಪ್ರತಿಜ್ಞೆ ಕೈಗೊಂಡರು. ಅಂತಿಮವಾಗಿ ವಿವಿಧ ಬಣ್ಣದ ಬಾವುಟ ಹೊಂದಿದ್ದ ಕಾರ್ಮಿಕ ಸಂಘಗಳು ಒಟ್ಟಾಗಿ ಸೇರಿ ರಚಿಸಿಕೊಂಡಿದ್ದ ಕಾರ್ಮಿಕ ಸಂಘಗಳ ಜಂಟಿ ಸಮಿತಿ (ಜೆ.ಸಿ.ಟಿ.ಯು)ಯ ನೇತೃತ್ವದಲ್ಲಿ ಹಲವಾರು ಕಡೆಗಳಲ್ಲಿ ಸಭೆ ನಡೆದಿವೆ.

ಕುಂದಾಪುರದಲ್ಲಿ ವಿಜೃಂಭಣೆಯಿಂದ ಮೇ ದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಖಾನೆಗಳ ಗೇಟಿನ ಮುಂದೆಹಾಗೂ ಆಟೋರಿಕ್ಷಾ ನಿಲ್ದಾಣದ ಬಳಿ ಕೆಂಪುಬಾವುಟ ಹಾಗೂ ಕೆಂಪು ಕಾಗದಗಳಿಂದ ಅಲಂಕಾರಮಾಡಲಾಗಿತ್ತು. ಮೆರವಣಿಗೆಯಲ್ಲಿ ಸಿಡಿಮದ್ದು ಸಿಡಿಸಿ ಘೋಷಣೆ ಕೂಗುತ್ತಾ, ಹಂಚುಕಾರ್ಮಿಕರು, ಬೀಡಿಕಾರ್ಮಿಕರು, ಕೃಷಿ ಕೂಲಿಗಾರರು ಹಾಗೂ ಆಟೋರಿಕ್ಷಾ ಚಾಲಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಮೆರವಣಿಗೆಯಲ್ಲಿ ಬ್ಯಾಂಡುಗಳಿದ್ದು ಹಬ್ಬದ ವಾತಾವರಣ ನಿರ್ಮಾಣವಾಗಿತ್ತು.

ಮಧ್ಯಾಹ್ನ ಬೇರೆ ಬೇರೆ ಫ್ಯಾಕ್ಟರಿಗಳಿಂದ ಹಾಗೂ ಪ್ರದೇಶಗಳಿಂದ ಮೆರವಣಿಗೆ ಹೊರಟು ಕುಂದಾಪುರ ಪೇಟೆಯ ಸುತ್ತಾ ಬಂದು ಕುಂದಾಪುರ ಗಾಂಧಿ ಮೈದಾನದಲ್ಲಿ ಸಾರ್ವಜನಿಕ ಸಭಾ ಸ್ಥಳಕ್ಕೆ ಬಂದು ಸೇರಿದರು. ಆಟೋರಿಕ್ಷಾ ಚಾಲಕರು ಕುಂದಾಪುರದಿಂದ ಕೋಟೇಶ್ವರದವರೆಗೆ ಮೆರವಣಿಗೆ ತೆಗೆದು ಗಾಂಧಿ ಮೈದಾನದಲ್ಲಿ ಬಂದು ಸೇರಿದರು. ಸಂಜೆ ಸಾರ್ವಜನಿಕ ಸಭೆ ನಡೆಯಿತು. ಎಚ್. ನರಸಿಂಹ ಸ್ವಾಗತಿಸಿ ಮೇ ದಿನದ ಮಹತ್ವವನ್ನು ವಿವರಿಸಿದರು. ಸಾರ್ವಜನಿಕ ಸಭೆಯ ಅಧ್ಯಕ್ಷತೆಯನ್ನು ಮಾಜಿ ಪುರಸಭಾ ಅಧ್ಯಕ್ಷರಾದ ವಿ. ನರಸಿಂಹ ವಹಿಸಿದ್ದರು. ಸಭೆಯನ್ನುದ್ದೇಶಿಸಿ ಕೃಷಿ ಕೂಲಿಗಾರರ ಸಂಘದ ರಾಜ್ಯ ಉಪಾಧ್ಯಕ್ಷ ಹಾಗೂ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್‌ರವರು ಮೇ ದಿನದ ಮಹತ್ವವನ್ನು ವಿವರಿಸಿ, ಅಂತರಾಷ್ಟ್ರೀಯವಾಗಿ ಕಾರ್ಮಿಕ ವರ್ಗದ ಸೌಹಾರ್ದತಾ ದಿನವಾದ ಮೇ ದಿನದ ಆಚರಣೆಯ ಈ ಸಂದರ್ಭ, ಸಾಮ್ರಾಜ್ಯಶಾಹಿ ಅಮೆರಿಕದ ದುರಾಕ್ರಮಣವನ್ನು ಖಂಡಿಸಿದರು. ಇರಾಕ್‌ನ ಮೇಲಿನ ಯುದ್ಧ ಅತೀ ಖಂಡನೀಯ, ಹಿಂದೆಂದಿಗಿಂತಲೂ ಜಾಗೃತಿಕವಾಗಿ ವಿರೋಧ ಹೆಚ್ಚು ಬಂದಿದ್ದು ಸಮಾಧಾನಕರ ಸಂಗತಿಯಾಗಿದೆ ಎಂದು ಹೇಳಿದರು.

ಜಾಗತೀಕರಣ, ಖಾಸಗೀಕರಣ ಹಾಗೂ ಉದಾರೀಕರಣವನ್ನು ವಿರೋಧಿಸಿ ದೇಶವ್ಯಾಪಿ ಹೋರಾಟ ಬೆಳೆದು ಬರುತ್ತಿರುವುದು, ಮೇ 21ರ ಸಾರ್ವತ್ರಿಕ ಮುಷ್ಕರ" ಯಶಸ್ವಿಗೊಳಿಸುವ ಮಹತ್ವವನ್ನು ವಿವರಿಸಿ ಕೋಮುವಾದದ ವಿರುದ್ಧ ಹೋರಾಟ ತೀವ್ರಗೊಳಿಸಬೇಕೆಂದರು. ಸಿಐಟಿಯುವಿನ ರಾಜ್ಯ ಉಪಾಧ್ಯಕ್ಷರಾದ ಕೆ. ಶಂಕರ್ ಸಭೆಯನ್ನುದ್ದೇಶಿಸಿ ಮಾತನಾಡಿ, ದೇಶದ ಎಲ್ಲಾ ವಿಭಾಗದ ಜನತೆಯನ್ನು ಭಾದಿಸುವ ಮುಖ್ಯ ಎಂಟು ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಮೇ 21ರ ಸಾರ್ವತ್ರಿಕ ಮುಷ್ಕರವನ್ನು ಯಶಸ್ವಿಗೊಳಿಸಬೇಕೆಂದರು.

ಬಳ್ಳಾರಿಯಲ್ಲಿ ಮೇ ದಿನಾಚರಣೆಯ ಸಂಭ್ರಮ





ಜಿ.ಎಸ್.ಮಣಿ

ಅವರಿಗಾಗಿ ನಾವು ಬೆಳವ ಪದ್ಧತಿ - ಕಾಂಟ್ರಾಕ್ಟ್ ಬೆಳೆ

ಇದೊಂದು ಹೊಸ ಪದ್ಧತಿ. ಬೇರೆಯವರಿಗಾಗಿ ಅಂದರೆ ಬೇರೆ ದೇಶದವರಿಗಾಗಿ ಅಥವಾ ದೊಡ್ಡ ಕಂಪನಿಗಳಿಗಾಗಿ ನಾವು ಅಂದರೆ ನಮ್ಮ ರೈತರು ಬೆಳೆ ಬೆಳೆವ ಪದ್ಧತಿ. ಈ ಪದ್ಧತಿ ರೈತ ಮತ್ತು ಕಂಪನಿಯ ನಡುವಿನ ಒಪ್ಪಂದದ ಪ್ರಕಾರ ಕಂಪನಿ ಹೇಳುವ ಬೆಳೆಯನ್ನು ಅವರು ಹೇಳಿದ ರೀತಿಯಲ್ಲಿ ರೈತ ಬೆಳೆದುಕೊಡುವುದು. ಮೊದಲೇ ನಿರ್ಧಾರವಾದ ಬೆಲೆಯನ್ನು ಕಂಪನಿ ನೀಡುತ್ತದೆ.

ಇದರಲ್ಲೇನು ತೊಡರು ಎಂದು ನೀವು ಕೇಳಬಹುದು. 'ಬಾಳ ಚಲೋ ಆತಲ್ಲ' ಎನ್ನಬಹುದು. ಇದರೊಳಗೆ ಅಪಾಯ ಅಡಗಿದೆ ಎಂಬುದನ್ನು ನಾವು ತಿಳಿಯಬೇಕಾಗಿದೆ. ವಿಶ್ವ ವ್ಯಾಪಾರ ಸಂಸ್ಥೆಯು ಮೂಲಕ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಮೇಲೆ ಒತ್ತಡ ಹೇರುತ್ತಿರುವ ಪಾಶ್ಚಾತ್ಯ ದೇಶಗಳು ಅಭಿವೃದ್ಧಿಶೀಲ ದೇಶಗಳು ತಮಗೆ ಬೇಕಾದುದನ್ನು ಬೆಳೆದು ಕಡಿಮೆ ಬೆಲೆಗೆ ಮಾರುವ ವಸಾಹತುಗಳಾಗಲಿ ಎಂದು ಬಯಸುತ್ತಿವೆ. ನಮ್ಮಲ್ಲಿ ಕಾಂಟ್ರಾಕ್ಟ್ ಬೆಳೆ ಪದ್ಧತಿ ಜಾರಿಗೆ ಬಂದರೆ ಅವರಿಗೆ ಅನುಕೂಲ. ಆದ್ದರಿಂದಲೇ ಅವರು ಇಂತಹ ಪದ್ಧತಿಗೆ ಪ್ರೋತ್ಸಾಹ ನೀಡುತ್ತಿದ್ದಾರೆ.

ಈಗ ಸಮಸ್ಯೆ ಬಂದಿರುವುದು. ಪಶ್ಚಿಮ ಬಂಗಾಳದಲ್ಲಿ ರಫ್ತಿಗಾಗಿ ಬಾಸ್ಮತಿ ಅಕ್ಕಿಯನ್ನು ಕಾಂಟ್ರಾಕ್ಟ್ ಪದ್ಧತಿಯಲ್ಲಿ ಬೆಳೆಯಲಿ ಎಂದು ಪೆಪ್ಸಿಕೊ ಎಂಬ ಬಹುರಾಷ್ಟ್ರೀಯ ಕಂಪನಿ ಬಯಸಿದೆ. ಇದನ್ನು ಪ.ಬಂಗಾಳದ ಮಾರ್ಕ್ಸ್‌ವಾದಿಗಳು ವಿರೋಧಿಸುತ್ತಿದ್ದಾರೆ ಎಂಬುದೇ ಅವರ ಪುಕಾರು. ಹಲವು ಪತ್ರಿಕೆಗಳೂ ಟೀಕೆಯನ್ನು ಹರಿಸಿವೆ.

ಅವರಿಗಾಗಿ ನಾವು ಬೆಳೆಯಬೇಕೆ? ನಮಗಾಗಿ ನಾವು ಬೆಳೆಯಬೇಕೆ? ಹೇಳಿ.

ಅಮೆರಿಕಾದ ಮೇಲೆ ಯುರೋಪಿನ ನಿರ್ಬಂಧಗಳು

ಬಂಡವಾಳಶಾಹಿ ಪದ್ಧತಿಯಲ್ಲಿ ಅಭಿವೃದ್ಧಿ ಹೊಂದಿದ ದೇಶಗಳು ಹೇಗೆ ತಮ್ಮ ತಮ್ಮ ಲಾಭಕ್ಕೆ ಅಂಟಿಕೊಳ್ಳುತ್ತವೆ ಮತ್ತು ಅದರ ಮೇಲೇ ತಮ್ಮ ತಮ್ಮೊಳಗಿನ ಸಂಬಂಧಗಳನ್ನು ಬೆಳೆಸಿಕೊಳ್ಳುತ್ತವೆ ಎಂಬುದಕ್ಕೆ ಇದೊಂದು ಒಳ್ಳೆಯ ಉದಾಹರಣೆ.

ಯುರೋಪಿನ ಸಮುದಾಯ ಅಮೆರಿಕದ ಮೇಲೆ 4.04 ಶತಕೋಟಿ ಡಾಲರುಗಳ ವ್ಯಾಪಾರೀ ನಿರ್ಬಂಧವನ್ನು ಹೇರಿದೆ.

ವಿಶ್ವ ವ್ಯಾಪಾರ ಸಂಸ್ಥೆಯು ಕೆಲವು ಮಾತುಕತೆಯಲ್ಲಿ ತೆಗೆದುಕೊಂಡ ಕೆಲವು ನಿರ್ಧಾರಗಳು ಅಮೆರಿಕದ ಕಂಪನಿಗಳಿಗೆ ವಿಶೇಷ ಅನುಕೂಲ ಮಾಡಿಕೊಡುವುದರಿಂದ ಯುರೋಪಿನ ಸಮುದಾಯದ ದೇಶಗಳ ಕಂಪನಿಗಳ ಮೇಲೆ ದುಷ್ಪರಿಣಾಮ ಬೀರುವುದು. ಇದನ್ನು ವಿರೋಧಿಸಿ ಈ ನಿರ್ಬಂಧ ಎಂದು ಯುರೋಪಿನ ಸಮುದಾಯ ಹೇಳಿದೆ.

ಅಮೆರಿಕ ವಿಶ್ವವ್ಯಾಪಾರ ಸಂಸ್ಥೆ ವಿಧಿಸಿದ ನಿಯಮಗಳನ್ನೇ ಜಾರಿಗೆ ತಂದಿಲ್ಲ. ಆದ್ದರಿಂದ ಈ ಪರಿಸ್ಥಿತಿ ಉಂಟಾಗಿದೆ ಎಂದು ಯುರೋಪಿನ ಸಮುದಾಯ ಹೇಳಿದೆ. ವಿಶ್ವ ವ್ಯಾಪಾರ ಸಂಸ್ಥೆ 1995 ರಲ್ಲಿ ಅಸ್ತಿತ್ವಕ್ಕೆ ಬಂದ ಮೇಲೆ ಇದು ಅತಿದೊಡ್ಡ ಪ್ರತಿಕಾರದ ಕ್ರಮ ಎನ್ನಲಾಗಿದೆ.

ಬಂಡವಾಳಶಾಹಿ ದೇಶಗಳ ಪೈಪೋಟಿಯೆಂದರೆ ಇದು. ಅಭಿವೃದ್ಧಿಶೀಲ ದೇಶಗಳಾದರೆ ಒಟ್ಟಾಗಿ ನಿರ್ಬಂಧ ಹೇರುವ ಈ ದೇಶಗಳು ಈಗ ತಮ್ಮ ತಮ್ಮೊಳಗೂ ಕಚ್ಚಾಡುತ್ತವೆ. ಲಾಭವೇ ಬಂಡವಾಳ ಶಾಹಿ ಪದ್ಧತಿಯ ಮುಖ್ಯ ಗುರಿಯಲ್ಲವೇ?

ಮಳೆಗೂ ಬೆಳೆಗೂ ನೇರ ನಂಟೇ?

ನಮ್ಮ ರೈತರನ್ನು ಕೇಳಿದರೆ ಪಕ್ಕನೆ 'ಹೌದು' ಎಂದು ಹೇಳಿಯಾರು. ಆದರೆ ಮಾರ್ಕ್ಸ್‌ವಾದಿಗಳು ಇದನ್ನು ಎಂದೂ ಒಪ್ಪಿಕೊಂಡಿಲ್ಲ. ಬಂಡವಾಳಶಾಹಿ, ಊಳಿಗಮಾನ್ಯ ಪದ್ಧತಿಗಳಲ್ಲಿ ಈ ಮಾತು ನಿಜ. ಯಾಕೆಂದರೆ ಮಳೆ ಬಂದರೆ ಮಾತ್ರ ಬೆಳೆ, ಮಳೆ ಇಲ್ಲದಿದ್ದರೆ ಬೆಳೆ ಇಲ್ಲ.

ಜಲ ಸಂಪನ್ಮೂಲಗಳನ್ನು ಸರಿಯಾಗಿ ನಿರ್ವಹಣೆ ಮಾಡಿದರೆ ಬರದ ಭಯ ಎಂದೂ ಕಾಡಬಾರದು. ಮಳೆ ಬರದಿದ್ದರೂ ನೀರಾವರಿಯ ಮೂಲಕ ಬೆಳೆ ಬೆಳೆಯಬಹುದು.

ಒಂದು ಅಧ್ಯಯನದ ಪ್ರಕಾರ ಮಳೆಯ ಪ್ರಮಾಣ ಮತ್ತು ಬೆಳೆಯ ಉತ್ಪಾದನೆಗೆ ನೇರ ಸಂಬಂಧವಿಲ್ಲ ಎಂಬುದು ಸ್ಪಷ್ಟವಾಗಿ ಕಂಡಿದೆ. ಕೆಳಗಿನ ಕೋಷ್ಟಕ ನೋಡಿ

ಸಾಲು	ಮಳೆ (ಸರಾಸರಿ ಶೇ)	ಆಹಾರಧಾನ್ಯ ಉತ್ಪಾದನೆ (ದ.ಲಕ್ಷ ಟನ್ನುಗಳಲ್ಲಿ)
1987	81	140
1988	119	170
1989	101	171
1990	106	176
1991	91	168
1992	93	179
1993	100	184
1994	110	191
1995	100	180
1996	103	199
1997	102	192
1998	105	203
1999	96	209
2000	92	196
2002	81	184

ಮೇಲಿನ ಅಂಕಿ ಸಂಖ್ಯೆಗಳನ್ನು ನೋಡಿದರೆ ಮಳೆ ಶೇ 96 ರಷ್ಟಾದಾಗಲೂ ಧಾನ್ಯ ಉತ್ಪಾದನೆ ಅತಿಹೆಚ್ಚು ಆಗಿರುವುದು ಕಾಣುತ್ತದೆ. ಮಳೆ ಶೇ. 100 ರಷ್ಟು ಬಂದಾಗಲೂ ಬೆಳೆ ಉತ್ಪಾದನೆ ಕಡಿಮೆ ಇರುವುದು ಕಾಣುತ್ತದೆ.

ಅಂದರೆ ಕೃಷಿ ಉತ್ಪಾದನೆ ಬರೀ ಮಳೆಯ ಮೇಲೆ ಮಾತ್ರ ಅವಲಂಬಿತವಲ್ಲ. ಒಟ್ಟಾರೆ ನಿರ್ವಹಣೆಯ ಮೇಲೆ ಅವಲಂಬಿತವಾಗಿರುತ್ತದೆ. ಬಂಡವಾಳಶಾಹಿ ಪದ್ಧತಿಯಲ್ಲಿ ಈ ಒಟ್ಟಾರೆ ನಿರ್ವಹಣೆ ಕೆಳಮಟ್ಟದ್ದಾದ್ದರಿಂದ ಬರದ ಸಾಧ್ಯತೆಗಳು ಜಾಸ್ತಿಯಿರುತ್ತದೆ. ಅಂತಹ ಬರವನ್ನು ಬಂಡವಾಳಿಗರು ತಮ್ಮ ಲಾಭಕ್ಕಾಗಿ ಉಪಯೋಗಿಸಿ ಕೊಳ್ಳುತ್ತಾರೆ ಎನ್ನುವುದು ಬೇರೆ ಮಾತು.

ಕೃಷಿ ಕೂಲಿಕಾರರ 5ನೇ ಅಖಿಲ ಭಾರತ ಸಮ್ಮೇಳನ ....

ಪುಟ 8 ರಿಂದ

ಕೃಷಿ ಕ್ಷೇತ್ರದಲ್ಲಿ ಯಂತ್ರಗಳ ಬಳಕೆ ಹೆಚ್ಚುತ್ತಿದ್ದು ಕೃಷಿ ಕೂಲಿಕಾರರು ಕೆಲಸ ಕಳೆದುಕೊಳ್ಳುತ್ತಿರುವ ಬಗ್ಗೆ ಸಮ್ಮೇಳನ ಆತಂಕವ್ಯಕ್ತಪಡಿಸಿತು. ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಉದ್ದೇಶದಿಂದ ಕೈಕೊಳ್ಳಲಾದ ಸರ್ಕಾರಿ ಕಾಮಗಾರಿಗಳಲ್ಲಿಯೂ ಯಂತ್ರಗಳನ್ನು ಬಳಸಲಾಗುತ್ತಿದೆ. ಬಿತ್ತನೆ, ನಾಟಿ ಮಾಡುವುದು ಮತ್ತು ಕೊಯ್ಲಿನ ಕೆಲಸಗಳಿಗೆ ಶ್ರೀಮಂತ ರೈತರು ಯಂತ್ರಗಳನ್ನು ಬಳಸುವುದನ್ನು ಅನೇಕ ರಾಜ್ಯಗಳಲ್ಲಿ ಯಶಸ್ವಿಯಾಗಿ ತಡೆದಿರುವ ಪ್ರಕರಣಗಳನ್ನು ಸಮ್ಮೇಳನದಲ್ಲಿ ವರದಿಮಾಡಲಾಯಿತು. ಈಗಾಗಲೇ ಕೃಷಿಕೂಲಿಕಾರರಿಗೆ ಕೆಲಸದ ಅವಕಾಶಗಳು ಗಣನೀಯವಾಗಿ ಕಡಿಮೆಯಾಗುತ್ತಿದ್ದು ಕೃಷಿ ಮತ್ತು ಸರ್ಕಾರಿ ಕೆಲಸಗಳಲ್ಲಿ ಯಂತ್ರಗಳ ಬಳಕೆಯಿಂದ ಕೃಷಿ ಕೂಲಿಕಾರರಿಗೆ ಕೆಲಸವೇ ಇಲ್ಲದಂತಹ ಪರಿಸ್ಥಿತಿ ಉಂಟಾಗುವ ಅಪಾಯವಿರುವುದರಿಂದ ಕೃಷಿಯಲ್ಲಿ ಮತ್ತು ಸರ್ಕಾರಿ ಕೆಲಸಗಳಲ್ಲಿ ಯಂತ್ರಗಳ ಬಳಕೆಯನ್ನು ದೃಢವಾಗಿ ವಿರೋಧಿಸಲು ಸಮ್ಮೇಳನ ನಿರ್ಧಾರ ಮಾಡಿದೆ.

ಸಾಮಾಜಿಕ ಪ್ರಶ್ನೆಗಳು :

ಗ್ರಾಮೀಣ ಬಡವರ ಐಕ್ಯತೆಗೆ ಸಂಘ ಪರಿವಾರದಂತಹ ಕೋಮುವಾದಿ ಮೂಲಭೂತವಾದಿ ಶಕ್ತಿಗಳು ತಡೆಯೊಡ್ಡುತ್ತಿರುವುದನ್ನು ಸಮ್ಮೇಳನ ಗಮನಿಸಿತು. ದುಡಿಯುವ ಜನ ವಿಭಾಗಗಳನ್ನು ಮತಧರ್ಮದ ಹೆಸರಿನಲ್ಲಿ ಒಡೆಯಲು ಬರುವ ಇಂತಹ ಶಕ್ತಿಗಳನ್ನು ನಿರ್ದಾಕ್ಷಿಣ್ಯವಾಗಿ ತಿರಸ್ಕರಿಸಿ ಕೃಷಿಕೂಲಿಕಾರರು ಜಾತ್ಯಾತೀತ ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಬಲಪಡಿಸಬೇಕೆಂದು ಸಮ್ಮೇಳನ ಕರೆನೀಡಿತು. ಗುಜರಾತ್, ರಾಜಸ್ಥಾನ ಹರ್ಯಾಣ ಮೊದಲಾದ ರಾಜ್ಯಗಳಲ್ಲಿ ಇಂತಹ ಶಕ್ತಿಗಳ ವಿರುದ್ಧ ಹೋರಾಡುತ್ತಿರುವ ಸಂಘದ ಘಟಕಗಳ ಬಗ್ಗೆ ಸಮ್ಮೇಳನವು ಹೆಮ್ಮೆಯನ್ನು ವ್ಯಕ್ತಪಡಿಸಿತು.

ಇದರೊಂದಿಗೆ ಗ್ರಾಮೀಣ ಪ್ರದೇಶದಲ್ಲಿ ತಲೆಎತ್ತುತ್ತಿರುವ ಜಾತಿವಾದಿ ಶಕ್ತಿಗಳು ಗ್ರಾಮೀಣ ಬಡವರ ಒಗ್ಗಟ್ಟನ್ನು ಒಡೆಯುವ ಕೆಲಸ ಮಾಡುತ್ತಿರುವುದನ್ನೂ ಸಮ್ಮೇಳನವು ಗುರುತಿಸಿತು. ಅದೇ ಸಮಯದಲ್ಲಿ ದಲಿತರ ಮೇಲೆ ಹೆಚ್ಚುತ್ತಿರುವ ದಮನ ದೌರ್ಜನ್ಯಗಳ ಬಗ್ಗೆ ಸಮ್ಮೇಳನವು ಆತಂಕವನ್ನು ವ್ಯಕ್ತಿಪಡಿಸಿತು. ತಮಿಳುನಾಡು, ಆಂಧ್ರ ಪ್ರದೇಶ ಮೊದಲಾದ ಕಡೆ ಅಸ್ಪೃಶ್ಯತೆಯ ವಿರುದ್ಧ ಹೋರಾಟ ನಡೆಸಿದ ಸಂಘದ ಘಟಕಗಳನ್ನು ಅಭಿನಂದಿಸಲಾಯಿತು. ಸಮ್ಮೇಳನದಲ್ಲಿ ವರದಿಯಾದಂತೆ ಉತ್ತರ ಭಾರತದ ರಾಜ್ಯಗಳಲ್ಲಿ ಮುಖ್ಯವಾಗಿ ಬಿ.ಜೆ.ಪಿ. ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೇಲೆ ದಾಳಿ ದಬ್ಬಾಳಿಕೆಗಳು ಹೆಚ್ಚಾಗಿವೆ. ಮಾನವ ಹಕ್ಕು ಉಲ್ಲಂಘನೆಯ ಪ್ರಕರಣಗಳಲ್ಲಿ ಅರ್ಧಕ್ಕಿಂತ ಹೆಚ್ಚು ಉತ್ತರ ಪ್ರದೇಶದಲ್ಲಿ ಸಂಭವಿಸಿವೆ. ಸಾಮಾಜಿಕವಾಗಿಯೂ ಆರ್ಥಿಕವಾಗಿಯೂ ದಮನಕ್ಕೆ ಒಳಗಾಗಿರುವ ಈ ವಿಭಾಗಗಳ ಕೂಲಿ, ಭೂಮಿ, ಮನೆ, ಶಿಕ್ಷಣ, ಆರೋಗ್ಯ ಮೊದಲಾದ ಮೂಲಭೂತ ಪ್ರಶ್ನೆಗಳಿಗಾಗಿ ಹೋರಾಡುತ್ತಲೇ ಅವರಿಗೆ ಸಾಮಾಜಿಕ ನ್ಯಾಯ ದೊರಕಿಸುವಲ್ಲಿ ಕೃಷಿ ಕೂಲಿಕಾರರ ಸಂಘ ಮುಂಚೂಣಿಯಲ್ಲಿರಬೇಕೆಂದು ಸಮ್ಮೇಳನ ನಿರ್ಧರಿಸಿತು.

ಸಂಘಟನೆ :

1996ರಲ್ಲಿ ಆಂಧ್ರ ಪ್ರದೇಶದ ಕುಮ್ಮಂನಲ್ಲಿ ಜರಗಿದ 4ನೇ ಅಖಿಲ ಭಾರತ ಸಮ್ಮೇಳನದ ಸಮಯದಲ್ಲಿ ಸಂಘದ ಸದಸ್ಯತ್ವ 22 ಲಕ್ಷ ಇತ್ತು. ಈಗ ಅದು 28 ಲಕ್ಷಕ್ಕೆ ಏರಿದ್ದು ಒಂದು ಸಾಧನೆ ಎಂದು ಪರಿಗಣಿಸಬಹುದಾದರೂ ದೇಶದ ಕೃಷಿ ಕೂಲಿಕಾರರ ಸಂಖ್ಯೆಯನ್ನು ಗಣನೆಗೆ ತೆಗೆದುಕೊಂಡರೆ ನಮ್ಮ ಸದಸ್ಯತ್ವ ಏನೇನು ಸಾಲದು ಎಂದು ಸಮ್ಮೇಳನ ಅಭಿಪ್ರಾಯ ಪಟ್ಟಿತು.

ಮುಂದಿನ ಸಮ್ಮೇಳನದ ಹೊತ್ತಿಗೆ ಸದಸ್ಯತ್ವವನ್ನು ಕನಿಷ್ಠ 40 ಲಕ್ಷಕ್ಕೆ ಹೆಚ್ಚಿಸಬೇಕೆಂದೂ, ಚಟುವಟಿಕೆಗಳನ್ನು 250 ಜಿಲ್ಲೆಗಳಿಗೆ ವಿಸ್ತರಿಸಬೇಕೆಂದು ಸಮ್ಮೇಳನ ನಿರ್ಧರಿಸಿದೆ. ಗ್ರಾಮ ಘಟಕಗಳ ರಚನೆ ಹಾಗೂ ಅವುಗಳ ಪರಿಣಾಮಕಾರಿ ಕಾರ್ಯಕರ್ತರಿಗೆ ಅಖಿಲ ಭಾರತದಲ್ಲಿ ಮತ್ತು ರಾಜ್ಯ ಮಟ್ಟದಲ್ಲಿ ಕಾಲಕಾಲಕ್ಕೆ ತರಬೇತಿ ನೀಡಲು ಕಾರ್ಯಕ್ರಮ ರೂಪಿಸಲಾಗಿದೆ.

ಮಹಿಳಾ ಕೃಷಿಕೂಲಿಕಾರರನ್ನು ದೊಡ್ಡ ಸಂಖ್ಯೆಯಲ್ಲಿ ಸಂಘಟನೆಯೊಳಗೆ ತರುವುದರ ಮಹತ್ವವನ್ನು ಕುರಿತು ಸಮ್ಮೇಳನ ಚರ್ಚಿಸಿತು. ಮಹಿಳೆಯರನ್ನು ಸಮಿತಿಗಳಿಗೆ ಮತ್ತು ನಾಯಕತ್ವದ ಸ್ಥಾನಗಳಿಗೆ ತರಲು ಪ್ರಜ್ಞಾಪೂರ್ವಕ ಪ್ರಯತ್ನ ಆಗಬೇಕಾಗಿದೆ ಎಂದು ಸಮ್ಮೇಳನ ಅಭಿಪ್ರಾಯ ಪಟ್ಟಿದೆ. ಮಹಿಳಾ ಕೃಷಿ ಕೂಲಿಕಾರರ ಪ್ರತ್ಯೇಕ ಸಮಾವೇಶಗಳನ್ನು ನಡೆಸಿ ಅವರ ಪ್ರತ್ಯೇಕ ಸಮಸ್ಯೆಗಳನ್ನು ಚರ್ಚಿಸಬೇಕೆಂದು ನಿರ್ಧರಿಸಲಾಗಿದೆ.

ಸಮ್ಮೇಳನ ಕಲಾಪಗಳು

ಸಮ್ಮೇಳನದ ಸ್ಥಳಕ್ಕೆ 'ರಾಮನಾಥ ಮಹಾತೋ ನಗರ' ಎಂದು ಹೆಸರಿಡಲಾಗಿತ್ತು. ಕಾಮ್ರೆಡ್ ರಾಮನಾಥ ಬಿಹಾರದ ಭೂಮಾಲಿಕ ಶಕ್ತಿಗಳನ್ನು ಎದುರು ಹಾಕಿಕೊಂಡು ಭೂಹೀನ ಕೃಷಿಕೂಲಿಕಾರರ ಹಕ್ಕುಗಳಿಗಾಗಿ ಹೋರಾಡುತ್ತಾ ಭೂಮಾಲಕರ ಬಾಡಿಗೆ ಗೂಂಡಾಗಳಿಂದ ಕೊಲ್ಲಲ್ಪಟ್ಟ ಅಖಿಲ ಭಾರತ ಕೃಷಿಕೂಲಿಕಾರರ ಸಂಘದ ಮುಖಂಡರು. ಸಂಘದ ಅಧ್ಯಕ್ಷ ಕಾಮ್ರೆಡ್ ಪಿ. ರಾಮಯ್ಯ ಅವರು ಧ್ವಜಾರೋಹಣ ಮಾಡುವುದರೊಂದಿಗೆ ಸಮ್ಮೇಳನದ ಕಲಾಪಗಳು ಆರಂಭಗೊಂಡವು. ಹಿರಿಯ ಸ್ವಾತಂತ್ರ್ಯ ಹೋರಾಟಗಾರರು, ರೈತ ಮುಂದಾಳು, ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಕಾಮ್ರೆಡ್ ಹರ್‌ಕಿಷನ್ ಸಿಂಗ್ ಸುರ್ಜಿತ್ ಸಮ್ಮೇಳನವನ್ನು ಉದ್ಘಾಟಿಸಿದರು.


ಸಂಘದ ಪ್ರಧಾನ ಕಾರ್ಯದರ್ಶಿ ಕಾಮ್ರೆಡ್ ಎ. ವಿಜಯರಾಘವನ್ ಅವರು ಮಂಡಿಸಿದ ಕರಡು ವರದಿಯ ಮೇಲೆ ಒಂದು ಇಡೀ ದಿನ ಚರ್ಚೆಯಾದ ಬಳಿಕ ಕೆಲವು ತಿದ್ದುಪಡಿಗಳೊಂದಿಗೆ ವರದಿಯನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಆಂಧ್ರಪ್ರದೇಶ, ಬಿಹಾರ, ಹರ್ಯಾಣ, ಕೇರಳ, ಕರ್ನಾಟಕ, ಮಹಾರಾಷ್ಟ್ರ ಓರಿಸ್ಸಾ, ಪಂಜಾಬ, ತಮಿಳುನಾಡು, ತ್ರಿಪುರಾ, ಉತ್ತರಪ್ರದೇಶ, ರಾಜಾಸ್ಥಾನ ಮತ್ತು ಮಧ್ಯಪ್ರದೇಶ ರಾಜ್ಯಗಳನ್ನು ಪ್ರತಿನಿಧಿಸಿ ಒಟ್ಟು 89 ಸದಸ್ಯರುಳ್ಳ ಜನರಲ್ ಕೌನ್ಸಿಲ್ ಆಯ್ಕೆಮಾಡಲಾಯಿತು. ಜನರಲ್ ಕೌನ್ಸಿಲ್ ಸದಸ್ಯರು ಸಭೆ ಸೇರಿ 31 ಜನ ಸದಸ್ಯರುಳ್ಳ ಕೇಂದ್ರ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಿದರು. ಕಾಮ್ರೆಡ್ ಪಿ. ರಾಮಯ್ಯ ಅಧ್ಯಕ್ಷರಾಗಿಯೂ ಕಾಮ್ರೆಡ್ ಎ. ವಿಜಯ ರಾಘವನ್ ಪ್ರಧಾನ ಕಾರ್ಯದರ್ಶಿಯಾಗಿಯೂ ಪುನರಾಯ್ಕೆಯಾದರು. ಸಮ್ಮೇಳನವು ಬೃಹತ್ ರ್‍ಯಾಲಿಯೊಂದಿಗೆ ಮುಕ್ತಾಯವಾಯಿತು. 1 ಲಕ್ಷಕ್ಕೂ ಹೆಚ್ಚು ಜನ ಮಹಿಳೆಯರು ಮತ್ತು ಪುರುಷರು ರ್‍ಯಾಲಿಯಲ್ಲಿ ಭಾಗವಹಿಸಿದ್ದರು.

ಸಮ್ಮೇಳನದ ಮೂರು ದಿನಗಳ ಚರ್ಚೆ ಹಾಗೂ ಅಲ್ಲಿ ಕೈಕೊಳ್ಳಲಾದ ತೀರ್ಮಾನಗಳು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದಲ್ಲಿ ಹೊಸ ಆತ್ಮವಿಶ್ವಾಸವನ್ನು ಹುಟ್ಟಿಸಿದೆ. ಭಾರತದ ಆಳುವ ವರ್ಗಗಳು, ಬಂಡವಾಳಶಾಹಿ ಜಾಗತೀಕರಣದ ಶಕ್ತಿಗಳ ಬೆಂಬಲದೊಂದಿಗೆ ದುಡಿಯುವ ಜನ ವಿಭಾಗಗಳ ಮೇಲೆ ಹೆಚ್ಚಿಸುತ್ತಿರುವ ದಾಳಿ ದಬ್ಬಾಳಿಕೆಗಳನ್ನು ಹಿಮ್ಮೆಟ್ಟಿಸಲು 'ಅವಿರತ ಹೋರಾಟವಲ್ಲದೆ ಬೇರೆ ಪರ್ಯಾಯವಿಲ್ಲ' ಎಂಬ ಸಮ್ಮೇಳನದ ಉದ್ಘೋಷವು ಕೃಷಿಕೂಲಿಕಾರರ ಮತ್ತು ಬಡರೈತರ ಮೂಲಭೂತ ಬೇಡಿಕೆಗಳಿಗಾಗಿ ಮುಂದಿನ ದಿನಗಳಲ್ಲಿ ಸಮರಶೀಲ ಹೋರಾಟಗಳತ್ತ ಮುನ್ನಡೆಯುವ ದಾರಿಯನ್ನು ಸ್ಪಷ್ಟಪಡಿಸಿದೆ.

ಕ್ಯೂಬಾದಲ್ಲಿ ಅಮೆರಿಕದ ಬುಡಮೇಲು ಕೃತ್ಯಗಳಿಗೆ ಬುದ್ಧಿ ಜೀವಿಗಳ ವಿರೋಧ

ಗ್ಯಾಬ್ರಿಯಲ್ ಮಾರ್ಕ್ವೆಝ್ (ಲೇಖಕ), ...ಗೊಬೆರ್ತಾ ಮೆಂಚು (ಸಾಮಾಜಿಕ ಕಾರ್ಯಕರ್ತೆ), ಲಿಲ್ಯೊಫ಼ೋ ಎಸ್ಕಿವೆಲ್, ನಾದಿನ್ ಗಾರ್ಡಿಮರ್ ಮುಂತಾದ ನೊಬೆಲ್ ಪ್ರಶಸ್ತಿ ವಿಜೇತರು ಸೇರಿದಂತೆ 160 ಕಲಾವಿದರು ಲೇಖಕರು, ಬುದ್ಧಿಜೀವಿಗಳು ಕ್ಯೂಬಾದಲ್ಲಿ ...ದ್ಯಪ್ರವೇಶ ಮಾಡಿ ಅಮೇರಿಕನ್ ಬುಡಮೇಲು ಕೃತ್ಯಗಳನ್ನು ಖಂಡಿಸಿದ್ದಾರೆ. ಅಮೇರಿಕದ ಬುಡಮೇಲು ಕೃತ್ಯಗಳಲ್ಲಿ ಸಹಕರಿಸುವವರ ಮೇಲೆ ಕ್ಯೂಬಾ ನಂತರ ಕೈಗೊಂಡಿರುವ ಕ್ರಮಗಳನ್ನು ಸಮರ್ಥಿಸಿದ್ದಾರೆ. ಅಮೇರಿಕದ ...ಖ್ಯಾತ ನಟರಾದ ಹ್ಯಾರಿ ಬೆಲಫಂಟೆ, ಡ್ಯಾನಿ ಗ್ಲೋವರ್ ಸಹ ಕ್ಯೂಬಾದ ...ರ ಹೊರಡಿಸಲಾದ ಅಂತರಾಷ್ಟ್ರೀಯ ಹೇಳಿಕೆಗೆ ಸಹಿ ಹಾಕಿರುವವರಲ್ಲಿ ಸೇರಿದ್ದಾರೆ. ಇದಕ್ಕಿಂತ ಮೊದಲು ಹವಾನಾದಲ್ಲಿ ಸಭೆ ಸೇರಿದ್ದ ಲೇಖಕರು ಮತ್ತು ಕಲಾವಿದರ ಯೂನಿಯನ್‌ನ ರಾಷ್ಟ್ರೀಯ ಮಂಡಳಿ, ಪ್ರಜಾಪ್ರಭುತ್ವ ಮತ್ತು ಸಂಸ್ಕೃತಿ ವಿರುದ್ಧ ಅಮೆರಿಕನ್ ಫ್ಯಾಸಿಸ್ಟ್ ಆಕ್ರಮಣದ ವಿರುದ್ಧ ಅಂತರಾಷ್ಟ್ರೀಯವಾಗಿ ಲೇಖಕರು - ಕಲಾವಿದರ 'ಫ್ಯಾಸಿಸ್ಟ್ - ವಿರೋಧಿ ರಂಗ' ಕಟ್ಟಬೇಕೆಂದು ಕರೆ ನೀಡಿತ್ತು. 30 ರ ದಶಕದಲ್ಲಿ ಜರ್ಮನ್ ನಾಝಿಗಳ ವಿರುದ್ಧ ಹೋರಾಟ ಕೈಗೆತ್ತಿಕೊಂಡಿದ್ದ 'ಫ್ಯಾಸಿಸ್ಟ್ - ವಿರೋಧಿರಂಗ' ದಂತಹ ಸಂಘಟನೆಯ ಅಗತ್ಯ ಇದೆ ಎಂದು ಹೇಳಿದೆ.


ಮಾರ್ಕ್ವೆಝ್

ಕ್ಯೂಬಾದ ರಾಜಧಾನಿ ಹವಾನಾದಲ್ಲಿ ವೆನೆಜುವೆಲಾದ ಚುನಾಯಿತ ಅಧ್ಯಕ್ಷ ಹವೆಜ್ ವಿರುದ್ಧ ಅಮೇರಿಕನ್ ಪ್ರಚೋದಿತ ಕ್ಷಿಪ್ರಕ್ರಾಂತಿ ವಿಫಲವಾದದ್ದರ ವಾರ್ಷಿಕವನ್ನು ಸಂಭ್ರಮದಿದ ಆಚರಿಸಲಾಯಿತು. ಆ ಸಂದರ್ಭದಲ್ಲಿ ವೆನೆಜುಲಾ, ಬ್ರೆಜಿಲ್, ಮೆಕ್ಸಿಕೊ ಸೇರಿದಂತೆ ಹಲವು ಲ್ಯಾಟಿನ್ ಅಮೇರಿಕನ್ ದೇಶಗಳ ಸಂಸ್ಕೃತಿ ಬಿಂಬಿಸುವ ಸಾಂಸ್ಕೃತಿಕ ಹಬ್ಬವನ್ನು ಹಮ್ಮಿಕೊಳ್ಳಲಾಗಿತ್ತು.

ಜಗತ್ತನ್ನೊಂದು ಸುತ್ತು

ಶರತ್‌ಚಂದ್ರ

ಬ್ರಿಟನ್‌ನಲ್ಲಿ ಹೊಸರೀತಿಯ ವರ್ಣಬೇಧ

ಭಯೋತ್ಪಾದನೆಯ ವಿರುದ್ಧ ಯುದ್ಧದ ಹೆಸರಿನಲ್ಲಿ ಬ್ರಿಟನ್ ಸರ್ಕಾರ ಹಿಂಬಾಗಿಲಿಂದ ವರ್ಣಬೇಧ ತರುತ್ತಿದೆ. ಬ್ರಿಟನ್‌ನಲ್ಲಿ ವಾಸಿಸಿರುವ ಬಿಳಿಯಲ್ಲದ ನಾಗರಿಕರ ಸಂಬಂಧಿಕರು ಭೇಟಿಗೆ ಕೊಡುವ ವೀಸಾ ನಿರಾಕರಣೆ ದರ ವಿಪರೀತವಾಗಿ ಏರಿದೆ. ಅದರಲ್ಲೂ ಸಿಂಹಪಾಲು ಏಶ್ಯಾದ ಮುಸ್ಲಿಂ ಬಹುಸಂಖ್ಯಾತರಿರುವ ದೇಶಗಳಿಂದ ಎಂದೂ ಬೇರೆ ಹೇಳಬೇಕಾಗಿಲ್ಲವಲ್ಲ. ವೀಸಾ ಅರ್ಜಿ ನಿರಾಕರಣೆಯ ಹೆಚ್ಚಳದ ಕೆಲವು ಉದಾಹರಣೆಗಳು - ಇರಾನ್ (ಎರಡು ಪಟ್ಟು), ಕಲ್ಕತ್ತಾ (ನಾಲ್ಕು ಪಟ್ಟು), ದೆಹಲಿ, ಮುಂಬಯಿ(ಎರಡು ಪಟ್ಟು), ಢಾಕ(ಎರಡು ಪಟ್ಟು), ನಿಕೋಸಿಯಾ (ಪಶ್ಚಿಮ ಏಶ್ಯಾ-ಯುರೋಪ್ ಹೊಸ್ತಿಲಲ್ಲಿರುವ ಚಿಕ್ಕ ದೇಶ - 13 ಪಟ್ಟು) ಒಟ್ಟಾರೆ ಏಶ್ಯಾದಿಂದ ನಿರಾಕರಣೆ ದರ ಎರಡು ಪಟ್ಟಾಗಿದೆ. ಇದೇ ಅವಧಿಯಲ್ಲಿ ಲ್ಯಾಟಿನ್ ಮತ್ತು ಉತ್ತರ ಅಮೆರಕಾದಿಂದ ವೀಸಾ ನಿರಾಕರಣೆ ಶೇಕಡಾ 30 ರಷ್ಟು ಕಡಿಮೆಯಾಗಿದೆ. ಇದು ವರ್ಣಬೇಧವಲ್ಲದೆ ಮತ್ತೇನು?



ಹಿಂದೆ ಇಂತಹ ವೀಸಾ ನಿರಾಕರಣೆ ವಿರುದ್ಧ ಅಪೀಲ್ ಹೋಗಲು ಕಾನೂನು ಅನುವು ಮಾಡಿಕೊಟ್ಟಿತ್ತು. ಅದನ್ನು ಹಿಂದಿನ ಟೋರಿ ಸರ್ಕಾರ ಹಿತ್ತು ಹಾಕಿದಾಗ, ಈಗಿನ ಆಳುವ ಲೇಬರ್ ಪಕ್ಷ 'ಇದು ಏಶ್ಯನ್ನರನ್ನು ಎರಡನೇ ದರ್ಜೆ'ಯ ನಾಗರಿಕನ್ನಾಗಿ ಮಾಡುವ ಹುನ್ನಾರ ಎಂದು ಟೀಕಿಸಿತ್ತು. ಏಶ್ಯನ್ನರು ಈಗ ಎರಡನೇ ದರ್ಜೆಯ ಪ್ರಜೆಗಳು ಮಾತ್ರವಲ್ಲ, 'ಆಂತರಿಕ ಶತ್ರು'ಗಳಾಗಿ ಸರ್ಕಾರ ನೋಡುತ್ತಿದೆ ಎಂದು ದೂರುವ ಪರಿಸ್ಥಿತಿ ಉಂಟಾಗಿದೆ.

ನೀರು ಮಾಫಿಯಾ 'ಬೆಕಟೆಲ್'ಗೆ ಇರಾಕಿ' ಪುನರ್ರಚನಾ' ಕಾಂಟ್ರಾಕ್ಟ್!

ಇರಾಕಿ ಪುನರ್ರಚನಾ 'ಕಾಂಟ್ರಾಕ್ಟ್'ಗಳನ್ನು ಅಮೇರಿಕನ್ ಸರ್ಕಾರ ಕೊಡಲಾರಂಭಿಸಿದೆ. ಇಂತಹ ಕಾಂಟ್ರಾಕ್ಟ್‌ಗಳನ್ನು ಕೊಡುವಲ್ಲಿ ಎಲ್ಲಾ ರಾಷ್ಟ್ರೀಯ-ಅಂತರಾಷ್ಟ್ರೀಯ ಕಾನೂನುಗಳನ್ನು ಮುರಿಯಲಾಗಿದೆ. ಅಂತರಾಷ್ಟ್ರೀಯ ಕಾನೂನುಗಳ ಪ್ರಕಾರ ವಿಶ್ವಸಂಸ್ಥೆಯನ್ನು ತೊಡಗಿಸದೆ ಅಮೇರಿಕ 'ಪುನರ್ರಚನಾ' ಚಟುವಟಿಕೆಯಲ್ಲಿ ತೊಡಗುವಂತಿಲ್ಲ. ಇಂತಹ ಕಾಂಟ್ರಾಕ್ಟುಗಳನ್ನು ಕೊಡಲು ಅಮೇರಿಕದ ಆಂತರಿಕ ರಾಷ್ಟ್ರೀಯ ಕಾನೂನು ವಿಧಿ - ವಿಧಾನಗಳನ್ನು ಪಾಲಿಸಲಾಗುತ್ತಿಲ್ಲ. ಅಮೇರಿಕದಲ್ಲೇ ಕೆಲವರು ಇದನ್ನು ಪ್ರಶ್ನಿಸಿದ್ದಾರೆ. ಸಾಲದೆಂಬಂತೆ ಇಂತಹ ಕಾಂಟ್ರಾಕ್ಟುಗಳನ್ನು ಪಡೆದವರೆಲ್ಲಾ ಅಧ್ಯಕ್ಷ ಬುಶ್ ಮತ್ತು ಗ್ಯಾಂಗ್‌ಗೆ ನಿಕಟವರ್ತಿಗಳು ಇರುವ ಕಂಪನಿಗಳಿಗೆ ಇಂತಹ ಕಂಪನಿಗಳು ಅಧ್ಯಕ್ಷ ಚುನಾವಣೆಯಲ್ಲಿ ಬುಶ್‌ಗೆ ಭಾರಿ ಡೊನೇಶನ್ ಕೊಟ್ಟಿದ್ದು ಮಾತ್ರವಲ್ಲ, ಇರಾಕ್ ವಿರುದ್ಧ ಯುದ್ಧದ ಪರವಾಗಿ ಭಾರಿ ಪ್ರಚಾರ ನಡೆಸಿದ್ದರು.

ಇದಕ್ಕೆ ಒಂದು ಉದಾಹರಣೆ ಅಮೇರಿಕನ್ ಸರ್ಕಾರದಿಂದ 3400 ಕೋಟಿ ಡಾಲರುಗಳ 'ಪುನರ್ರಚನೆ' ಕಾಂಟ್ರಾಕ್ಟ್ ಪಡೆದ ಕಂಪನಿ 'ಬೆಕಟೆಲ್'. ಇದು ಜಗತ್ತಿನಾದ್ಯಂತ ಕುಖ್ಯಾತವಾದ ನೀರು ಮಾಫಿಯಾ 'ಬೆಕಟೆಲ್' ಎಂಬ ಬಹುರಾಷ್ಟ್ರೀಯ ಕಂಪನಿ. ಬೊಲಿವಿಯಾದ ಕೊಚಬಾಂಬಾ ಎಂಬ ಪಟ್ಟಣದ ನೀರು ಪೂರೈಕೆ ಖಾಸಗೀಕರಣದ ಸಂದರ್ಭದಲ್ಲಿ ಕುಖ್ಯಾತವಾದ ಕಂಪನಿ. ಖಾಸಗೀಕರಣದ ನಂತರ ನೀರಿಗೆ ತೆರಬೇಕಾದ ಬಿಲ್ಲು ಅಲ್ಲಿನ ಬಡ ಕುಟುಂಬಗಳ ಆದಾಯದ 20-30 ಶೇಕಡಾ ಪಾಲು ಮುಟ್ಟಿದಾಗ ಪ್ರತಿಭಟನೆ ಬುಗಿಲೆದ್ದಿತು. ಅಲ್ಲಿನ ಜನ ಬೆಕಟೆಲ್‌ನ್ನು ಓಡಿಸುವಲ್ಲಿ ಯಶಸ್ವಿಯಾದರು. ಆದರೆ ಅದರ ಮೊದಲು ಬೆಕಟೆಲ್ ಅಲ್ಲಿನ ಸರ್ಕಾರದ ಮೂಲಕ, ನೇರವಾಗಿ ಪ್ರತಿಭಟನಾಕಾರರ ಮೇಲೆ ಗೂಂಡಾರಾಜ್ಯ ಹರಿಬಿಟ್ಟಿತ್ತು. ಈಗಲೂ ಪ್ರತಿಭಟನಾಕಾರರು ಮತ್ತು ಬೊಲಿವಿಯಾ ಸರ್ಕಾರವನ್ನು 'ಕಾಂಟ್ರಾಕ್ಟ್' ಉಲ್ಲಂಘನೆಗೆ ಕಾನೂನು- ಕ್ರಮದ ಮೂಲಕ ಕಿರುಕುಳ ಮುಂದುವರೆಸಿದೆ. ಬೆಕ್‌ಟೆಲ್ 'ಎನ್ರೋನ್' ಖ್ಯಾತಿಯ ಧಬೋಲ ವಿದ್ಯುತ್ ಘಟಕದಲ್ಲಿ ಪಾಲುದಾರ. ಸುಮಾರು 150 ವಿವಿಧ ಪ್ರಾಜೆಕ್ಟ್'ಗಳಲ್ಲಿ ಬೆಕ್‌ಟೆಲ್ ಜಗತ್ತಿನ ಎಲ್ಲೆಡೆ ಭಾಗಿಯಾಗಿದೆ. ಎಲ್ಲಾ 'ಕಾಂಟ್ರಾಕ್ಟು'ಗಳು ವಿಧಿ-ವಿಧಾನಗಳನ್ನು ಉಲ್ಲಂಘಿಸಿ ಆಗಿರುವುದು.

'ಬೆಕ್‌ಟೆಲ್'ಗೂ ಬುಶ್ ಆಡಳಿತಕ್ಕೂ ಇರುವ ಕೊಂಡಿ ಜಾರ್ಜ್ ಶುಲ್ಟ್ಜ್ ಎಂಬ ವ್ಯಕ್ತಿ. ಈತ ಹಿಂದೆ ಬೆಕಟೆಲ್‌ಗೆ ಅಧ್ಯಕ್ಷನಾಗಿದ್ದವ. ಈಗ ಬೋರ್ಡ್ ...ದಸ್ಯ. ಜಾರ್ಜ್ ಶುಲ್ಟ್ಜ್ ಅಧ್ಯಕ್ಷ ರೇಗನ್‌ರ ...ಳಿತದಲ್ಲಿ ವಿದೇಶಾಂಗ ಕಾರ್ಯದರ್ಶಿ ಆಗಿದ್ದವ ...ತ 'ಇರಾಕ್ ವಿಮೋಚನಾ ಸಮಿತಿ' ಎಂಬ ಇರಾಕ್ ಮೇಲೆ ಯುದ್ದ-ಪರ ಸಂಘಟನೆಯ ಅಧ್ಯಕ್ಷ ಕೂಡಾ. ಈ ಸಮಿತಿ ಕಳೆದ ಹಲವು ತಿಂಗಳುಗಳಿಂದ ಇರಾಕ್‌ನಲ್ಲಿ ಸದ್ದಾಂ ಹುಸೇನ್ ಸರ್ವಾಧಿಕಾರ ಕೊನೆಗೊಳಿಸಲು ಯುದ್ಧ ಹೂಡಬೇಕೆಂದು ಪ್ರಚಾರ ಮಾಡುತ್ತಿತ್ತು. ಈ ಕಾಂಟ್ರಾಕ್ಟ್ ನಂತರ ಅದರ ನಿಜವಾದ ಉದ್ದೇಶ ಎಲ್ಲರಿಗೂ ಅರ್ಥವಾಗಿದೆ.

ಇರಾಕಿನಲ್ಲಿ ಅಮೇರಿಕನ್- ಬ್ರಿಟಿಶ್ ಪಡೆಗಳು ಮಾಡಿದ ವಿನಾಶ, ಧ್ವಂಸ ಕಾರ್ಯದ ಅಗಾಧತೆ ನೋಡಿದರೆ ಅದರ ಪುನರ್ರಚನೆಗೆ ಐದು ಲಕ್ಷ ಕೋಟಿ ಡಾಲರುಗಳಷ್ಟು ವೆಚ್ಚ ತಲುಗಲಿದೆ. ಮೊದಲ ಕಂತಿನ ಕಾಂಟ್ರಾಕ್ಟು ಪಡೆದ ಬೆಕ್‌ಟೆಲ್‌ಗೆ ಈ ಒಟ್ಟಾರೆ ಕಾಂಟ್ರಾಕ್ಟಿನ ಸಿಂಹಪಾಲು ಸಿಗಲಿದೆ ಎಂಬುದು ಸ್ಪಷ್ಟ. ಬೆಕ್‌ಟೆಲ್ ಇರಾಕಿನ ಪ್ರಸಿದ್ಧ ನದಿಗಳಾದ ಯೂಪ್ರಟಿಸ್-ಡೈಗ್ರೀಸ್‌ನ್ನು ತನ್ನದಾಗಿಸಿಕೊಂಡರೆ ಯಾರೂ ಆಶ್ಚರ್ಯ ಪಡಬೇಕಾಗಿಲ್ಲ.

ಹೀಗಿದೆ ಅಮೆರಿಕಾ ಇರಾಕ್‌ನಲ್ಲಿ ಹೊರಿಸಿದ 'ಪ್ರಜಾಪ್ರಭುತ್ವ'. ಅಲ್ಲಿನ ಎಲ್ಲಾ ಸಂಪನ್ಮೂಲಗಳನ್ನು ಲೂಟಿ ಮಾಡುತ್ತವೆ. ದೈತ್ಯ ಕಂಪನಿಗಳು ಅದನ್ನು ಪುನರ್ರಚಿಸಲು ಕಾಂಟ್ರಾಕ್ಟುಗಳಿಗೆ ಇರಾಕ್ ತೈಲ ಮಾರಿ ಬಂದ ಹಣ ಮೂಲಕ ಇರಾಕಿ ಜನ ತೆರಬೇಕು. ಸದ್ದಾಂ ಹುಸೇನ್ ಸರ್ವಾಧಿಕಾರದ ಬದಲು ದೈತ್ಯ ಕಂಪನಿಗಳ ಸರ್ವಾಧಿಕಾರ.



ಶಿಕ್ಷೆಗೊಳಗಾದ ಕ್ಯೂಬನ್ನರು ಕ್ರಿಮಿನಲ್‌ಗಳು, ರಾಜಕೀಯ ಕಾರ್ಯಕರ್ತರಲ್ಲ - ಸರ್ಕಾರದ ಸ್ಪಷ್ಟನೆ

ಇತ್ತೀಚಿಗೆ ಕ್ಯೂಬನ್ ಸರ್ಕಾರ ಬಂಧಿಸಿ ಜೈಲು ಶಿಕ್ಷೆಗೆ ಗುರಿಪಡಿಸಿದ 75 ಕ್ಯೂಬನ್ನರು ರಾಜಕೀಯ ಕಾರ್ಯಕರ್ತರಲ್ಲ. ಅವರು ಕ್ಯೂಬನ್ ಕಾನೂನು ಪ್ರಕಾರ ಅಪರಾಧವೆಂದು ಪರಿಗಣಿಸಲಾದ ಕುಕೃತ್ಯಗಳನ್ನು ಎಸಗಿದವರು ಎಂದು ಕ್ಯೂಬನ್ ವಿದೇಶಿ ಮಂತ್ರಿ ಹೇಳಿಕೆಯೊಂದರಲ್ಲಿ ಸ್ಪಷ್ಟಪಡಿಸಿದ್ದಾರೆ. ಇದೇ ರೀತಿ ಮರಣದಂಡನೆಗೆ ಗುರಿಯಾದ ಮೂರು ಕ್ಯೂಬನ್ನರು ವಿಮಾನ ಅಪಹರಣ ಮಾಡಿ ನಾಗರಿಕರ ಸಾಮೂಹಿಕ ಹತ್ಯೆಗೆ ಹವಣಿಸಿದ್ದ ಕ್ರಿಮಿನಲ್‌ಗಳು. ಎಲ್ಲಾ ದೇಶಗಳಲ್ಲೂ ಇಂತಹವರಿಗೆ ಅತ್ಯಂತ ಕಠಿಣ ಶಿಕ್ಷೆ ವಿಧಿಸಲಾಗುತ್ತದೆ. ಅದನ್ನೇ ಕ್ಯೂಬಾ ಸಹ ಮಾಡಿದೆ. ಅಮೆರಿಕ ಮಾತ್ರ ಕ್ಯೂಬಾದ ವಿಮಾನ ಹಡಗುಗಳನ್ನು ಅಪಹರಣ ಮಾಡುವ ಅಪರಾಧಿಗಳನ್ನು 'ಹೀರೋ'ಗಳಾಗಿ ಕಾಣುತ್ತದೆ. ಇಂತಹ ಅಪರಾಧಿಗಳಿಗೆ ಕುಮ್ಮಕ್ಕು ಕೊಡುತ್ತದೆ.

ಅಮೆರಿಕ ಹಿಂದಿನಿಂದಲೂ (1950 ರಲ್ಲಿ ಕ್ರಾಂತಿಯಾದಾಗಿನಿಂದಲೂ) ಕ್ಯೂಬಾದ ಆರ್ಥಿಕ, ಸಾಮಾಜಿಕ ಬಲ ಮುರಿಯಲು ಅಲ್ಲಿನ ಪ್ರತಿಭಾವಂತ ಡಾಕ್ಟರು, ಇಂಜಿನಿಯರುಗಳನ್ನು ಅಮೆರಿಕಕ್ಕೆ ವಲಸೆ ಹೋಗಲು ಮಾಡುವಂತೆ ಎಲ್ಲಾ ಹುನ್ನಾರಗಳನ್ನೇ ನಡೆಸಿದೆ. ಇದಕ್ಕಾಗಿ ಮಾಫಿಯಾವೊಂದನ್ನು ಸೃಷ್ಟಿಸಿದೆ. ಬೇರೆ ಎಲ್ಲಾ ಬಡ ದೇಶಗಳಿಂದ ಬರುವ ನಿಜವಾದ ವಲಸೆಗಾರರನ್ನು ಅಟ್ಟಲು ದೊಡ್ಡ ಪೋಲೀಸು ಪಡೆ ಇದೆ. ಆದರೆ ತಾನು 'ರಾಜಕೀಯ ನಿರಾಶ್ರಿತ' ಎಂದು ಹೇಳಿಕೊಳ್ಳುವ ಯಾವುದೇ ಕ್ಯೂಬನ್ನರಿಗೆ ನಾಗರಿಕತ್ವ ಕೊಡುತ್ತಾರೆ.

ಆದರೆ ಇತ್ತೀಚಿಗೆ ಅಮೆರಿಕ ತನ್ನ ತಂತ್ರ ಬದಲಾಯಿಸಿದೆ. ಕಾನೂನು ಪ್ರಕಾರ ಕೊಡುವ ವಲಸೆ ವೀಸಾವನ್ನು ಬಹಳಷ್ಟು ಕಡಿತ ಮಾಡಿ ಕ್ಯೂಬಾದಲ್ಲಿ ತನ್ನ ಮಾಫಿಯಾ ಏಜೆಂಟರ ಮೂಲಕ ಕಾನೂನು ಬಾಹಿರವಾಗಿ ವಲಸೆ ಹೋಗುವವರ ಸಂಖ್ಯೆಯನ್ನು ಹೆಚ್ಚಿಸಿ, ಅವರನ್ನು ಕ್ಯೂಬಾ ಸೈನ್ಯ ತಡೆಯುವಾಗ ಅದನ್ನು ಮಿಲಿಟರಿ ಘರ್ಷಣೆಗೆ ಪರಿವರ್ತಿಸುವ ತಂತ್ರ ಈಗ ಅನುಸರಿಸಲಾಗುತ್ತಿದೆ. ಇದರ ಜತೆ ಕ್ಯೂಬಾ ರಾಜಕೀಯ ವಿರೋಧವನ್ನು ಮಟ್ಟ ಹಾಕುತ್ತಿದೆ ಎಂದು ಅಪಪ್ರಚಾರ ಮಾಡಲು ರಾಜಕೀಯ ಏಜೆಂಟರುಗಳನ್ನು ಸೃಷ್ಟಿಸುತ್ತಿವೆ. ಈ ಎರಡು ಕುಕೃತ್ಯಗಳಲ್ಲೂ ಕ್ಯೂಬಾದಲ್ಲಿ ಅಮೆರಿಕದ ಪ್ರತಿನಿಧಿ ನೇರವಾಗಿ ಭಾಗವಹಿಸುತ್ತಿದ್ದಾನೆ. ಇದು ಕ್ಯೂಬಾದ ಮೇಲೆ ಮಿಲಿಟರಿ ಕಾರ್ಯಾಚರಣೆ ನಡೆಸಲು ಪಿತೂರಿಯ ಭಾಗ. ಆದ್ದರಿಂದ ಕ್ಯೂಬನ್ ಸರ್ಕಾರ ಇದನ್ನು ಕಠಿಣ ಕ್ರಮಗಳಿಂದ ಎದುರಿಸಲು ನಿರ್ಧರಿಸಿದೆ. ಕ್ಯೂಬಾದಲ್ಲಿ ಕ್ರಾಂತಿ ತಂದು ಕೊಟ್ಟ ಪ್ರಜಾಪ್ರಭುತ್ವ, ಸಮಾಜವಾದ, ಶಾಂತಿ ಕಾಪಾಡಲು ಇದು ಅಗತ್ಯ ಎಂದು ವಿದೇಶ ಮಂತ್ರಿ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಇಂತಹ ಅಮೆರಿಕನ್ ಸಾಮ್ರಾಜ್ಯಶಾಹಿ ಕುತಂತ್ರಗಳಲ್ಲಿ ಭಾಗವಹಿಸುವ ದೇಶದ್ರೋಹಿಗಳ ಮೇಲೆ ಕಠಿಣ ಕ್ರಮ ಮುಂದುವರೆಸಲಾಗುವುದು ಎಂದೂ ಹೇಳಿದ್ದಾರೆ.





ಪುಸ್ತಕ ವಿಮರ್ಶೆ

ಟಿಪ್ಪುವಿನ ಮೇಲೆ ಹರಿಹಾಯ್ದಿರುವ ಸಂಘ ಪರಿವಾರವು ಚರಿತ್ರೆಯ ವಾಸ್ತವ ಸಂಗತಿಗಳನ್ನು ವಿಕೃತವಾಗಿ ತಿರುಚುತ್ತಿವೆ. ಅದಕ್ಕಾಗಿ ಒಂದು ಪುಸ್ತಕವನ್ನೇ ಹೊರ ತಂದಿದ್ದಾರೆ. ಅದರಲ್ಲಿರುವ ಎಲ್ಲಾ ಅಂಶಗಳೂ ಸುಳ್ಳಿನ ಕಂತೆಗಳು ಎಂಬುದನ್ನು ವಿಶ್ಲೇಷಿಸಿಸಲಾಗಿದೆ

- ಪ್ರಕಾಶ್ ಕೆ

ಟಿಪ್ಪು ಹಿಂದೂ ವಿರೋಧಿಯೇ?


ಟಿಪ್ಪು ಮುಸ್ಲಿಂ ಮತಾಂಧನೆಂದು ರೂಪಿಸಲು ತೀವ್ರವಾಗಿ ಹೆಣಗುತ್ತಿರುವ ಸಂಘ ಪರಿವಾರಿಗಳು 'ಟಿಪ್ಪು- ನಿಜಸ್ವರೂಪ' ಎಂಬ ಪುಸ್ತಕವನ್ನು ಹೊರತಂದು ಕೋಮುವಿಷವನ್ನೇ ಕಾರಿದ್ದಾರೆ.

ಭಾರತದಲ್ಲಿ ತಮ್ಮ ಆಳ್ವಿಕೆಯನ್ನು ನಿರಂತರಗೊಳಿಸಲು ಹಿಂದೂ-ಮುಸ್ಲಿಂ ವಿಭಜನೆಯನ್ನು ಜಾರಿಗೊಳಿಸಿದ ಬ್ರಿಟೀಷರು ಅದನ್ನು ಶಾಶ್ವತಗೊಳಿಸಲು ಚರಿತ್ರೆಯನ್ನು ವಿಕೃತಿಗೊಳಿಸಿರುವುದು ಈಗ ಇತಿಹಾಸ. ಇಂತಹ ಇತಿಹಾಸಕಾರರು ಟಿಪ್ಪುವಿನ ಮೇಲೆ ತಿರುಚಿ ಬರೆದಿರುವ ಹಲವಾರು ಘಟನೆಗಳನ್ನೇ ಯಥೇಚ್ಛವಾಗಿ ಪ್ರಸ್ತಾಪಿಸಿರುವ ಈ ಪುಸ್ತಕ ಟಿಪ್ಪು ಅಪ್ಪಟ ಮತಾಂಧನೆಂದು ಹೇಳಲು ಹೆಣಗಾಡಿದೆ. ಎಷ್ಟಾದರೂ ಟಿಪ್ಪುವಿನ ವಿರುದ್ಧ ಬ್ರಿಟೀಷರಿಗೆ ಸಹಾಯ ಮಾಡಿದ ಪರಂಪರೆಯಲ್ಲವೇ ಇವರದು? ಟಿಪ್ಪು ಧರ್ಮ ಸಹಿಷ್ಣುವೆಂದು ಹೇಳಲು ಬೇಕಾದಷ್ಟು ಆಧಾರಗಳಿವೆ.

ಹಿಂದುಗಳೇ ಆಗಿದ್ದ ಮರಾಠರು ಲೂಟಿ ಮಾಡಿದ ಶೃಂಗೇರಿ ಮಠಕ್ಕೆ ಸಂಬಂಧಿಸಿ ಟಿಪ್ಪು ನಡೆದುಕೊಂಡ ವಿಚಾರ ಜಗತ್ತಿಗೆ ಗೊತ್ತಿದೆ. ಹಲವು ಮಠ ಮಾನ್ಯಗಳಿಗೆ, ದೇವಸ್ಥಾನಗಳಿಗೆ ಟಿಪ್ಪು ಸಹಾಯ ಸಹಕಾರ ಮಾಡಿರುವುದು ಸಾಮಾನ್ಯವಾಗಿ ಎಲ್ಲರೂ ಒಪ್ಪುವ ವಿಚಾರ. ಮಠಗಳಿಗೆ, ದೇವಸ್ಥಾನಗಳಿಗೆ ಸಹಾಯ ಮಾಡಿರುವುದು ಒಂದು ಕಡೆಯಾದರೆ ಹಿಂದೂ ಜನತೆಯ ವಿಚಾರದಲ್ಲಿ ಟಿಪ್ಪುವಿನ ನಡವಳಿಕೆಯು ಮತಾಂಧನ ರೀತಿಯ ನಡವಳಿಕೆಯಾಗಿ ಕಾಣುವುದಿಲ್ಲ. ಯಾವುದೇ ಮನುಷ್ಯ ಒಂದು ಜಾತಿ, ಒಂದು ಭಾಷೆ, ಒಂದು ಧರ್ಮ ಅಥವಾ ಸಂಸ್ಕೃತಿಗೆ ಸೇರಿದವರಾಗಿ ಕೆಲವು ನಿರ್ದಿಷ್ಟ ಒಲವು-ನಿಲುವುಗಳಿರುವುದು ಸಹಜ. ಇಂದೂ ಕೂಡ ಸಾಮಾನ್ಯರ ಜೀವನದಲ್ಲಿ ಸಹಜವಾಗಿ ಇದು ಕಾಣುತ್ತದೆ. ಹಾಗೆಂದ ಮಾತ್ರಕ್ಕೆ ಇವರೆಲ್ಲಾ ಮತಾಂಧರೇನೂ ಆಗಿರುವುದಿಲ್ಲ ಹಾಗೆಯೇ ಟಿಪ್ಪುವಿನ ವಿಚಾರದಲ್ಲೂ ಗಮನಿಸಬೇಕಾಗಿದೆ. ಟಿಪ್ಪು ಮುಸಲ್ಮಾನನಾದ ಕಾರಣಕ್ಕೆ ಅವನ ಎಲ್ಲಾ ನಡವಳಿಕೆಗಳನ್ನೂ ಮತೀಯ ಕನ್ನಡಕದೊಳಗಿಂದ ನೋಡಿದರೆ ತಪ್ಪಾಗುತ್ತದೆ.

ಇನ್ನೊಂದು ಮುಖ್ಯವಾದ ಅಂಶವೆಂದರೆ ಟಿಪ್ಪು ಆಧುನಿಕ ಪ್ರಜಾಪ್ರಭುತ್ವ ಗಣರಾಜ್ಯದ ಮುಖ್ಯಸ್ಥನೇನಲ್ಲ. ಬದಲಿಗೆ ಅಂದಿನ ಸಮಾಜದ ಬೆಳವಣಿಗೆಯ ಇತಿಮಿತಿಗಳೊಳಗೆ ಆಡಳಿತ ನಡೆಸಿದವನು. ಅವನೊಬ್ಬ ರಾಜನ್ನಾಗಿದ್ದ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಒಬ್ಬ ಮುಸಲ್ಮಾನನಾಗಿ ಹಿಂದೂಗಳ ಶೃಂಗೇರಿ ಮಠಕ್ಕೆ ದಾನ-ದತ್ತಿಗಳನ್ನು ನೀಡಿದ ಟಿಪ್ಪುವನ್ನು ಹಿಂದೂ ದ್ವೇಷಿ ಎನ್ನುವುದಾದರೆ, ಹಿಂದೂವಾಗಿದ್ದುಕೊಂಡೇ ಹಿಂದೂ ಶೃಂಗೇರಿ ಮಠವನ್ನು ಲೂಟಿ ಮಾಡಿದ ಮರಾಠ ಪೇಶ್ವೆಗಳನ್ನು ಏನೆಂದು ಕರೆಯಬೇಕು? ಇಂತಹ ಮರಾಠರನ್ನು ಹಿಂದುಗಳೆಂದು ಕರೆಯಲು ಸಾಧ್ಯವೇ? ಮರಾಠರ ಲೂಟಿಗೆ ಧರ್ಮಕ್ಕಿಂತಲೂ, ಶೃಂಗೇರಿಯ ಶಾರದೆಗಿಂತಲೂ ಮುಖ್ಯವಾದದ್ದು ಅಲ್ಲಿನ ಸಂಪತ್ತು. ಹೀಗಾಗಿ ಸಂಘಪರಿವಾರದವರಿಗೆ ಇತರೆ ಧರ್ಮದವರ ಸಹಿಷ್ಣುತೆಯೂ ದ್ವೇಷವಾಗಿ ಕಾಣುತ್ತದೆ, ಹಿಂದೂಗಳ ಮತಾಂಧತೆಯನ್ನು ವೈಭವೀಕರಿಸಿ ಹೇಳಬೇಕೆನಿಸುತ್ತದೆ.

ಹಿಂದೆ ಹೇಳಿದ ಹಾಗೆ ಬ್ರಿಟೀಷರಿಗೆ ಹಿಂದೂ-



ಮುಸ್ಲೀಮರ ನಿರಂತರ ಕಾದಾಟ ಬೇಕಾಗಿತ್ತು. ನಮ್ಮ ಸಾಮಾನ್ಯ ಜನರಿಗೆ ಇವರಿಬ್ಬರ ಐಕ್ಯತೆ ಬೇಕಾಗಿತ್ತು. ಅದಕ್ಕಾಗಿ ಬ್ರಿಟೀಷರ ವಿರುದ್ಧ ಹೋರಾಟವಿತ್ತು. ಆದರೆ ಸಂಘ ಪರಿವಾರಗಳಿಗೆ ಇದು ಬೇಡವಾಗಿತ್ತು. ಅದಕ್ಕಾಗೇ ಬ್ರಿಟೀಷರೊಂದಿಗೆ ಸಖ್ಯವಿತ್ತು. ಹಿಂದೂ-ಮುಸ್ಲೀಮರಿಬ್ಬರೂ ಸೇರಿ ನಡೆಸುವ ಸ್ವಾತಂತ್ರ್ಯ ಹೋರಾಟಕ್ಕೆ ವಿರೋಧವಿತ್ತು. ಈ ರೀತಿ ನಿರಂತರ ಬ್ರಿಟೀಷ್ ಏಜೆಂಟರಾಗಿದ್ದವರಿಗೆ ಟಿಪ್ಪು ಮತಾಂಧರಾಗಿ ಕಂಡರೆ ಆಶ್ಚರ್ಯವೇನಿದೆ?

ಇದೇ ರೀತಿ ಟಿಪ್ಪು ಕನ್ನಡ ವಿರೋಧಿಯಾಗಿದ್ದ ಎಂದು ಪ್ರಚಾರ ನಡೆದಿದೆ. ವಾಸ್ತವದಲ್ಲಿ ಟಿಪ್ಪು ಎಂದೂ ಕನ್ನಡ ವಿರೋಧಿಯಾಗಿರಲಿಲ್ಲ. ಅದಕ್ಕೆ ಅವನು ನಡೆಸಿರುವ ಅಪಾರ ಪ್ರಮಾಣದ ಪತ್ರವ್ಯವಹಾರಗಳೇ ಸಾಕ್ಷಿಯಾಗಿವೆ.

ಕನ್ನಡದ ಜೊತೆಯಲ್ಲಿ ಸಾಮಾನ್ಯ ಜನ ಮಾತನಾಡುವ ಹಲವು ಭಾಷೆಗಳನ್ನು ಬಳಸಿದ್ದಾನೆ. ಜನ ಮಾತನಾಡದ ಭಾಷೆಗಳಿಗೆ ಜೋತು ಬೀಳಬೇಕೆನ್ನುವ ಪ್ರಸಂಗಗಳು ಎಲ್ಲೂ ಕಾಣುವುದಿಲ್ಲ. ಕನ್ನಡದ ಹೆಸರಲ್ಲಿ ಹಾಡಿ ಹೊಗಳುವ ವಿಜಯನಗರದ ಕೃಷ್ಣದೇವರಾಯನ ಆಡಳಿತ ಕಾಲದಲ್ಲಿ ಕನ್ನಡದಷ್ಟೇ ತೆಲುಗು ಚಾಲ್ತಿಯಲ್ಲಿದ್ದುದನ್ನು ಮರೆಯಲಾದೀತೆ? ಆ ಕಾರಣಕ್ಕೆ ತೆಗಳಲಾದೀತೆ? ಇಲ್ಲ ಬದಲಿಗೆ ಸಾಮಾನ್ಯ ಜನ ಆಡುತ್ತಿದ್ದ ಕನ್ನಡ... ತೆಲುಗು ಎರಡನ್ನೂ ದೊಡ್ಡ ಪ್ರಮಾಣದಲ್ಲಿ ಬಳಸಿದ್ದ... ಅಭಿನಂದನೆ ಸಲ್ಲಿಸಬೇಕಾಗಿದೆ.

ಆದರೆ ಕನ್ನಡವನ್ನು ಯಥೇಚ್ಛವಾಗಿ ಬಳಸಿದ... ಟಿಪ್ಪುವಿನ ವಿಚಾರದಲ್ಲಿ ಕನ್ನಡದ ಪ್ರಶ್ನೆಯನ್ನೆತ್ತು... ಚೆಡ್ಡಿ ಪರಿವಾರದವರು, ಜನಕ್ಕೆ ಅರ್ಥವಾಗ... ಸಂಸ್ಕೃತ ಇತ್ಯಾದಿ ಭಾಷೆಗಳನ್ನು ಆಡಳಿತದ... ಬಳಸಿದ ರಾಜರ ಬಗ್ಗೆ ಎಂದಿಗೂ ಉಸಿರೆತ್ತ... ಯಾಕೆ? ಇಂದಿಗೂ ಅಂತರಂಗದಲ್ಲಿ ಕನ್ನಡವ... ಸಂಘಗಳು ದ್ವೇಷಿಸುತ್ತಾರೆ. ಯಾಕೆಂದರೆ ಇವ... ಹಿಂದುತ್ವ ಸಿದ್ಧಾಂತಕ್ಕೆ (ಹಿಂದಿ-ಹಿಂದ... ಹಿಂದುಸ್ತಾನ) ಕನ್ನಡ ಒಗ್ಗುವುದಿಲ್ಲ. ಹಾಗೇನಾದರು... ಕನ್ನಡದ (ಅಥವಾ ಯಾವುದೇ ಜನಭಾಷೆ... ಶತ್ರುಗಳಿದ್ದಾರೆಂದರೆ ಅದು ಸಂಘಪರಿವಾರ ಮ... ಅವರ ಸಿದ್ಧಾಂತವೇ ಆಗಿದೆ.

ರಾಷ್ಟ್ರೀಯ ಹೋರಾಟದಲ್ಲಿ ಭಾಗವಹಿಸಿದ... ಅಷ್ಟು ಮಾತ್ರವಲ್ಲ, ಪರೋಕ್ಷವಾಗಿ ಮತ್ತು ಕೆ... ಸಂದರ್ಭಗಳಲ್ಲಿ ನೇರವಾಗಿ ಬ್ರಿಟೀಷರಿಗೆ ಸಹಾಯ... ಮಾಡಿದ ಹಿಂದೂ ಮತಾಂದ ಶಕ್ತಿಗಳಿಗೆ (ಮ... ಅವರನ್ನು ಪೋಷಿಸುತ್ತಿರುವ ನಮ್ಮ ದೇಶದ ದೊ... ಕೈಗಾರಿಕೋದ್ಯಮಿಗಳು ಹಾಗೂ ಭೂಮಾಲಿ... ಶಕ್ತಿಗಳಿಗೆ) ಈ ಅಧಿಕಾರವಿದೆ. ನಮ್ಮ ದೇಶ... ರೈತರನ್ನು- ಕಾರ್ಮಿಕರನ್ನು - ಮಹಿಳೆಯರನ್ನು -... ಅಧಿಕಾರ ಬಳಸಿ ನಿರಂತರವಾಗಿ ಸುಲಿ... ಮಾಡಬೇಕಾಗಿದೆ. ಮತ್ತೊಮ್ಮೆ... ಬ್ರಿಟೀಷರನ್ನೊಳಗೊಂಡ ಅಮೇರಿಕ... ಸಾಮ್ರಾಜ್ಯಶಾಹಿಗಳಿಗೆ ಗುಲಾಮರಾಗಬೇಕಾ... ಇದಾಗಲು ಭಾರತದ ಜನ ಪರಸ್ಪರ ಕಿತ್ತಾಡಬೇಕಿ... ಈ ರೀತಿ ಕಿತ್ತಾಡಲು ದೇಶದೊಳಗೆ ಒಬ್ಬ ಶತ್ರುವ... ನಿರ್ಮಿಸಬೇಕಾಗಿದೆ. ಬ್ರಿಟೀಷರಿಗೆ ಈ ವಿಚಾರದ... ಋಣಿಗಳಾಗಿರುವ ಚೆಡ್ಡಿಪರಿವಾರದವ... ಮುಸಲ್ಮಾನರನ್ನು ಆಂತರಿಕ ಶತ್ರುಗಳೆಂದು ಬಿಂಬಿಸ... ಏನೆಲ್ಲಾ ಸಾಧ್ಯವೋ ಅವೆಲ್ಲವನ್ನೂ ಮಾಡುತ್ತಿದ್ದಾ... ಅದಕ್ಕಾಗಿ ಬರೀ ಸುಳ್ಳುಗಳನ್ನೇ ಬಿತ್ತುತ್ತಿದ್ದಾ... ಎಷ್ಟಾದರೂ ಆರ್.ಎಸ್.ಎಸ್ ಎಂದರೆ ರಾಷ್ಟ್ರೀ... ಸುಳ್ಳುಗಾರರ ಸಂಘವೆಂದು ಕೆಲವರು ಹೇಳುವು... ಸುಳ್ಳಲ್ಲ ಅಲ್ಲವೆ?

ಟಿಪ್ಪು ದೇಶದ್ರೋಹಿಯೇ?

ಬಿಜೆಪಿ ವಿಧಾನ ಪರಿಷತ್ ಸದಸ್ಯ ಗೋ.ಮಧುಸೂದನ್, ಟಿಪ್ಪುವನ್ನು "ತನ್ನ ಖಡ್ಗದ ಮೇಲೆ ಇಸ್ಲಾಂ ಧರ್ಮದ ಬಗ್ಗೆ ಬರೆಸಿಕೊಂಡಿದ್ದವನು ದೇಶಪ್ರೇಮಿಯೇ" ಎಂದು ಪ್ರಶ್ನಿಸಿದ್ದಾರೆ. ಇದು ಸಾಮಾನ್ಯ ಜ್ಞಾನವಿಲ್ಲದ ಸಣ್ಣ ಚೆಡ್ಡಿ ಹುಡುಗನೊಬ್ಬನ ಮಾತುಗಳ ರೀತಿಯಲ್ಲಿದೆ. ಟಿಪ್ಪು ತನ್ನ ಖಡ್ಗದ ಮೇಲೆ ಏನನ್ನು ಬರೆಸಿಕೊಂಡಿದ್ದ ಎನ್ನುವ ಚರ್ಚೆ ಅನಗತ್ಯ. ಇಷ್ಟಕ್ಕೂ ಭಾರತ ದೇಶದ ಕಲ್ಪನೆ ಟಿಪ್ಪುವಿನ ಸಂದರ್ಭದಲ್ಲಿ ಇನ್ನು ಪೂರ್ಣವಾಗಿ ಬೆಳೆದಿರಲಿಲ್ಲ. ಮೈಸೂರು ಇತಿಹಾಸದ ಬಗ್ಗೆ ವಿಶೇಷ ಅಧ್ಯಯನಗಳನ್ನು ನಡೆಸಿರುವ ಪ್ರೊ. ಎಸ್.ಚಂದ್ರಶೇಖರ್ ಅವರು ಹೇಳುವಂತೆ "ದೇಶದ ಕಲ್ಪನೆಯೇ ಇರದ ಕಾಲದಲ್ಲಿದ್ದವ (ಟಿಪ್ಪು) ದೇಶದ್ರೋಹಿ ಆಗಲು ಹೇಗೆ ಸಾಧ್ಯ? ಬ್ರಿಟೀಷರ ವಿರುದ್ಧ ಸಂಘಟಿತವಾಗಿ ಹೋರಾಡುವ ವಿಷಯದಲ್ಲಿ ಆತ ಮೊದಲ ಪಂಕ್ತಿಯಲ್ಲಿದ್ದ.

ರಾಷ್ಟ್ರೀಯ ಮತಾಂಧತೆ

ಭಾರತವನ್ನು, ಇದರ ರಾಷ್ಟ್ರೀಯತೆಯನ್ನು ಹಿಂದುತ್ವದ ಸಾಂಸ್ಕೃತಿಕ ಹಿನ್ನೆಲೆಯಲ್ಲೇ ಎತ್ತಲಾಗಿದೆ. ಭಾರತವನ್ನು ಒಂದು ಭೌಗೋಳಿಕ ನೆಲೆಯಲ್ಲಿ ರಾಷ್ಟ್ರವನ್ನಾಗಿ ಪರಿಗಣಿಸುವ ಆಧುನಿಕ ಚಿಂತನೆಯ ಕ್ರಮವನ್ನು ನಿರಾಕರಿಸುತ್ತಾ ಹಿಂದೂ ಸಾಂಸ್ಕೃತಿಕ ನೆಲೆಯಲ್ಲಿ ಭಾರತ ದೇಶವನ್ನು ಕಲ್ಪಿಸಿಕೊಳ್ಳುವ ಮತಾಂಧ ಚಿಂತನೆಯ ಭಾಗವಾಗಿ ಟಿಪ್ಪುವನ್ನು ನೋಡಲಾಗುತ್ತದೆ. ಹೀಗಾಗಿ ಹಿಂದೂ ಅಲ್ಲದಿರುವ ಟಿಪ್ಪು ಖಡ್ಗದ ಮೇಲೆ ಇಸ್ಲಾಂ ಬಗ್ಗೆ ಬರೆಸಿಕೊಳ್ಳುವುದು ದೇಶದ್ರೋಹಿಯಾಗಿ ಇವರಿಗೆ ಕಾಣುತ್ತದೆ. ಸಂಘಪರಿವಾರ ಪರಿಗಣಿಸುವ ಮನೋಭಾವ ಇದಾದ್ದರಿಂದ ಇಂತಹ ಬಾಲಿಶ ವಾದಗಳನ್ನು ಮಾಡಲಾಗುತ್ತಿದೆ.

ಧರ್ಮವನ್ನು ಆಧರಿಸಿಯೇ ದೇಶ ನೋಡುವ ಕ್ರಮವು ಸರಿಯಾದುದಲ್ಲ. ಇದು ರಾಷ್ಟಗಳ ಕಲ್ಪನೆ ಮತ್ತು ಬೆಳವಣಿಗೆಯ ವೈಜ್ಞಾನಿಕ ತಿಳುವಳಿಕೆಯಲ್ಲ. ಇನ್ನು ಅಂದಿನ ವ್ಯಾಪ್ತಿಯಲ್ಲಿ ಟಿಪ್ಪುವಿನ ದೇಶಪ್ರೇಮವನ್ನು ಯೋಚಿಸುವುದಾದರೆ, ಆತ ಒಬ್ಬ ನಿಜವಾಗಿಯೂ ವೀರ ದೇಶಪ್ರೇಮಿ. ವಿಶಾಲನೆಲೆಯಲ್ಲಿ ಅರ್ಥ ಮಾಡಿಕೊಂಡವನು ಟಿಪ್ಪು. ಇಡೀ ಭಾರತ ಭೂಭಾಗವನ್ನು ಕಬಳಿಸಲು ಬ್ರಿಟೀಷರು ಅನುಸರಿಸುತ್ತಿದ್ದ ತಂತ್ರಗಳನ್ನು ಅರಿತು ಅವರನ್ನು ಸೋಲಿಸಲು ಹಲವಾರು ದೇಶೀಯ ರಾಜ್ಯಗಳಲ್ಲದೆ ದೂರದ ದೇಶಗಳೊಡನೆ ಒಪ್ಪಂದಗಳನ್ನು ಮಾಡಿಕೊಂಡಿದ್ದ. ಬ್ರಿಟೀಷ್ ಸಾಮ್ರಾಜ್ಯಶಾಹಿಗಳ ವಿರುದ್ಧ ಹೋರಾಡುತ್ತಾ ಫ್ರೆಂಚರಿಗೆ ಬಲಿಯಾಗುವ ಯಾವ ಆತುರವನ್ನು ಹೊಂದಿರದೇ ಫ್ರೆಂಚರೊಂದಿಗೆ ಮಾಡಿಕೊಂಡಿದ್ದ ಒಪ್ಪಂದ ಎಚ್ಚರಿಕೆಯ ನಡೆಯೇ ಆಗಿತ್ತು. ಆಗ ಫ್ರಾನ್ಸ್‌ನಲ್ಲಿ ನಡೆಯುತ್ತಿದ್ದ ರಾಜಕೀಯ ಉತ್ಕ್ರಾಂತಿಯ ಘೋಷಣೆಗಳಾದ ಸ್ವಾತಂತ್ರ್ಯ, ಸಮಾನತೆ, ಸಹೋದರತ್ವದ ಅಂಶಗಳ... ಟಿಪ್ಪುವನ್ನು ಸಾಕಷ್ಟು ಪ್ರಭಾವಗೊಳಿಸಿದ್ದವು.

ವಿಜ್ಞಾನ ತಂತ್ರಜ್ಞಾನಗಳ ಬೆಳವಣಿ... ಕೈಗಾರೀಕರಣ ಇವುಗಳ ಕಾರಣವಾ... ಯುರೋಪಿನಲ್ಲಿ ನಿರ್ಮಾಣಗೊಂಡ ಹೊ... ಸಾಮಾಜಿಕ ಸಂಬಂಧಗಳು ಟಿಪ್ಪುವನ್ನು ಹೊ... ದಿಕ್ಕಿನಲ್ಲಿ ಯೋಚಿಸುವಂತೆ ಮಾಡಿದ್ದವು... ಇಂತಹ ಬೆಳವಣಿಗೆಯನ್ನು ಇಲ್ಲಿ ಹೊಂದಲು... ಮತ್ತು ಅದನ್ನು ಸ್ವತಂತ್ರವಾಗಿ ಹೊಂದಲು... ಬ್ರಿಟೀಷರನ್ನು ಸಂಪೂರ್ಣವಾಗಿ ಸೋಲಿ... ಬೇಕೆಂಬ ಉತ್ಕಟೇಚ್ಛೆ ಟಿಪ್ಪುವಿನಲ್ಲಿತ್ತು.

ಇದನ್ನು ಹೊಂದಲು ಇಲ್ಲಿದ್ದ ಪಾಳೇಗಾ... ಭೂಮಾಲಿಕ ಉತ್ಪಾದನಾ ಪದ್ಧತಿಯನ್ನು ಸ್ವ... ಮಟ್ಟಿಗಾದರೂ ನಾಶ ಮಾಡುವ ಅಗತ್ಯವಿತ್ತು... ಇಲ್ಲಿನ ಸಾಮಾಜಿಕ ಸಂಬಂಧಗಳನ್ನು... ಸ್ವಲ್ಪವಾದರೂ ಅಲುಗಾಡಿಸಬೇಕಾಗಿತ್ತು. ... ಯಾವ ಬೆಳವಣಿಗೆಯನ್ನು ತಮ್ಮ ಹಿಂದು... ಸಿದ್ಧಾಂತದ ಅಡಿಯಲ್ಲಿ ಸಂಘಪರಿವಾರದವ... ನಿರಂತರವಾಗಿ ವಿರೋಧಿಸುತ್ತಾ ಬಂದಿದ್ದಾರೋ... ಆ ಕಾರಣಕ್ಕೂ ಸೇರಿ ಇವರು ಟಿಪ್ಪುವ... ದೇಶದ್ರೋಹಿ ಎಂದು ಬಿಂಬಿಸ... ನೋಡುತ್ತಾರೆ. ಇದೇ ಕಾರಣಕ್ಕೆ ಜನಪರರೆಲ್ಲ... ಟಿಪ್ಪುವನ್ನು ದೇಶಪ್ರೇಮಿ ಹೋರಾಟಗಾರ ಎಂ... ಬಿಂಬಿಸುತ್ತಾರೆ.

PRB DECR 319-79/79 AIKYARANGA WEEKLY Reg. No. 17015/64 CPM(G) / KA /BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor: S.Y.GURUSHANTH